ತಿರುಮಲೆ ತಿರುಪತಿ ದೇವಸ್ಥಾನಗಳು

ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ
ಮಾಸಪತ್ರಿಕೆ

ಮೇ 2026 ಬೆಲೆ ರೂ. 20/-

SAPTHAGIRI(KANNADA)
SPIRITUAL ILLUSTRATED MONTHLY
Volume:05, Issue:10, Pages:56
May - 2026, Price Rs. 20/-



ತಿರುಪತಿ, ಶ್ರೀಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು
23-05-2026 ರಿಂದ 31-05-2026 ರ ವರೆಗೆ










ಒಂಟಿಮಿಟ್ಟ ಶ್ರೀ ಕೋದಂಡರಾಮ ಸ್ವಾಮಿಯವರ ದೇವಸ್ಥಾನದಲ್ಲಿ ಶ್ರೀ ರಾಮನವಮಿ ಬ್ರಹ್ಮೋತ್ಸವವು ವಿಜೃಂಭಣೆಯಿಂದ ನಡೆಯಿತು. ಈ ಸಂದರ್ಭವಾಗಿ ಆಂಧ್ರಪ್ರದೇಶ ಸರ್ಕಾರದ ವತಿಯಿಂದ ಮುಖ್ಯಮಂತ್ರಿಗಳಾದ ಗೌ॥ ಶ್ರೀ ನಾರಾಚಂದ್ರಬಾಬು ನಾಯ್ಡು ರವರು ಸತಿ ಸಮೇತವಾಗಿ ಶ್ರೀ ಸೀತಾರಾಮರಿಗೆ ರೇಷ್ಮೆ ವಸ್ತ್ರಗಳನ್ನು 01-04-2026 ರಂದು ಸಮರ್ಪಿಸಿದರು.

ಈ ಅದ್ಧೂರಿಯಾಗಿ ಆಯೋಜಿಸಲಾದ ಬ್ರಹ್ಮೋತ್ಸವಗಳಲ್ಲಿ ಭಾಗವಹಿಸಿದ ಎಲ್ಲಾ ಭಕ್ತರಿಗೆ ತಿ.ತಿ.ದೇ., ತಿರುಮಲೆ ಸ್ವಾಮಿಯವರ ಲಡ್ಡು ಪ್ರಸಾದ ಮತ್ತು ಮುತ್ತುಗಳಿಂದ ಕೂಡಿದ ಅಕ್ಷತೆಗಳನ್ನು ವಿತರಿಸಿದರು.






ಭಗವದ್ಗೀತೆ



ಏಷಾ ತೇऽಭಿಹಿತಾ ಸಾಂಖ್ಯೇ ಬುದ್ಧಿರ್ಯೋಗೇ ತ್ವಿ ಮಾಂ ಶೃಣು।
ಬುದ್ಧ್ಯಾ ಯುಕ್ತೋ ಯಯಾ ಪಾರ್ಥ ಕರ್ಮಬಂಧು ಪ್ರಹಾಸ್ಯಸಿ ॥

ಅರ್ಜುನ, ಆತ್ಮನ ವಿಚಾರವಾಗಿ ಈ ತಿಳುವಳಿಕೆಯನ್ನು ನಿನಗೆ ಹೇಳಿದ್ದಾಯಿತು. ಈಗ ಅದರ ಉಪಾಯದ ಬಗೆಗೆ ಕೇಳು. ಅರ್ಜುನ, ನೀನು ಇದನ್ನು ತಿಳಿಯುವುದರಿಂದ ಕರ್ಮದ ಕಟ್ಟನ್ನು ಕಳಚಿಕೊಳ್ಳುತ್ತಿ.

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -39)



ಶರಣು ವೆಂಕಟರಮಣ ನಿನ್ನ!
ಚರಣವ ನಂಬಿದೆ ನಾನು ॥ಪ॥

ಕರುಣಾಸಾಗರ ಕಾಮಿತ ಫಲವೀವ।
ಶರಣ ಭಕ್ತರ ಕಾವ ಗರುಡವಾಹನ ದೇವ ॥ಅ. ಪ.॥

ಭಕ್ತವತ್ಸಲ ಹರಿಯೆ ನಮ್ಮ।
ಭವದುರಿತ ಪರಿಹಾರನೆ।
ಅಖಿಲಾಂಡ ಕೋಟಿ ಬ್ರಹ್ಮಾಂಡ ನಾಯಕ।
ಶರಣಭಕ್ತರ ಕಾವ ಸುರಮುನಿಗಳ ದೇವ ॥1॥

ಪಾಪವಿನಾಶಿನಿ ತೀರ್ಥ
ನಮ್ಮ ಪಾತಕವ ಪರಿಹರಿಸೆ॥
ಶ್ರೀ ವೇಂಕಟಗಿರಿ ಶ್ರೀನಿವಾಸ।
ಕೋನೇರಿ ತೀರ್ಥಾಧಿವಾಸ ನಿವಾಸ॥2॥

ದೇಶಕಧಿಕವಾದ ನಮ್ಮ
ಶೇಷಗಿರಿಯಲಿ ವಾಸ॥
ಶ್ರೀ ವೇಂಕಟಗಿರಿ ತಿರುಮಲೇಶ।
ದಾಸದಾಸರ ಸಲಹುವ ಪುರಂದರ ವಿಠ್ಠಲ ॥3॥

-ಶ್ರೀ ಪುರಂದರ ದಾಸರು



ಈಶಾವಾಸ್ಯೋಪನಿಷತ್

ಮಂತ್ರ -5

– ಓಂ ಪ್ರಕಾಶ್ ಭಟ್
99640 25922

ತದೇಜತಿ ತನ್ನೈಜತಿ ತದ್ ದೂರೇ ತದ್ವಂತಿಕೇ ।
ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ॥

"ತದೇಜತಿ ತನ್ನೈಜತಿ" ಎರಡು ಅಪೂರ್ವ ತತ್ತ್ವಗಳನ್ನು ಒಳಗೊಂಡ ಶಬ್ದಗಳು 'ಏಜತಿ' ಎಂದರೆ ಭಯಗ್ರಸ್ತನಾಗಿ 'ಕಂಪನ'- ಹೆದರಿಕೆ ಇರುವಂಥದ್ದು. ಆ ತತ್ತ್ವದಿಂದ (ಪರಮತತ್ತ್ವದಿಂದ) ಹೆದರಿ ಉಳಿದೆಲ್ಲ ಜಗತ್ತು ನಡೆಯುತ್ತಿದೆ. ಇಲ್ಲಿ ಭಯ ಎಂದರೆ ಒಂದು ನಿಯತಿಗೆ ಒಳಪಟ್ಟು ಎಂದರ್ಥ. ಲೌಕಿಕಾರ್ಥದ ಭಯ ಅಲ್ಲ. ನಿಯತಿಗೆ ಬದ್ಧವಾಗಿ ಬದುಕಿ ಕರ್ಮ ಮಾಡುವುದು ಎಂದರ್ಥ. ಆದರೆ ಆ ತತ್ತ್ವ 'ತನ್ನೈಜತಿ'-ಅಂದರೆ 'ತತ್' 'ನ ಏಜತಿ'. ಯಾರ ನಿಯತಿಗೂ ಒಳಪಟ್ಟು ಬದುಕುತ್ತಿಲ್ಲ. ನಿಯತಿಯನ್ನೇ ನಿರ್ಮಿಸಿದ ಶಕ್ತಿ ಅದು. ಜಗತ್ತೇ ಆ ನಿಯತಿಗೆ ಒಳಪಟ್ಟಿದೆ. ಸ್ವತಃ ಭಯರಹಿತವೂ ಆಗಿದೆ, ಸ್ವಯಂ ನಿರ್ಭಯ. ಹಿರಣ್ಯಕಶಿಪು ಆ ಒಂದು ಪರಮ ತತ್ತ್ವವನ್ನು ನೋಡಿ ಭಯಗ್ರಸ್ತನಾದ. ಯಾಕೆಂದರೆ ಅವನು ತಪ್ಪು ಮಾಡಿದ್ದ. ಆದರೆ ಬಾಲಪ್ರಹ್ಲಾದ ಶುದ್ಧ ಭಕ್ತಿಯವನು. ಆ ಪರಮ ತತ್ತ್ವವನ್ನು ನೋಡಿ ಭಯಪಡಲಿಲ್ಲ, ಬದಲಾಗಿ ಪ್ರೀತಿಯಿಂದ ಹತ್ತಿರ ಹೋದ. ಆದ್ದರಿಂದ ಯಾರು ಭಗವಂತನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುತ್ತಾನೋ ಅವನು ಹೆದರುವುದಿಲ್ಲ, ಪ್ರೀತಿಸುತ್ತಾನೆ. ಯಾರು ಅರ್ಥ ಮಾಡಿಕೊಳ್ಳುವುದಿಲ್ಲವೋ ಅವನು ಪ್ರೀತಿಸುವುದಿಲ್ಲ, ಹೆದರು ತ್ತಾನೆ. ಇದನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಮಂತ್ರ ತಿಳಿಸುತ್ತದೆ.

ಆ ತತ್ತ್ವ ದೂರದಲ್ಲಿದೆ. ಅಷ್ಟೇ ಅಲ್ಲ ಸಮೀಪದಲ್ಲಿಯೇ ಇದೆ. ಯಾವುದು ದೂರದಿಂದ ದೂರವೋ ಅದೇ ಹತ್ತಿರದಿಂದ ಹತ್ತಿರವೂ ಹೌದು. ಯಾರು ಮನಸ್ಸಿನಲ್ಲಿ ದೇವರನ್ನು ನೆನೆಯುವುದಿಲ್ಲವೋ ಅವರಿಗೆ ದೂರನು. 'ದೂರಾತ್ ದೂರತರ....' ಆದರೆ ಭಗವಂತನನ್ನು ಯಾರು ಪ್ರೀತಿಸುತ್ತಾರೆ ಅವರಿಗೆ ತುಂಬಾ ಹತ್ತಿರ ಅಂತರಂಗದೊಳಗೇ ಇದ್ದಾನೆ. ಕಣ್ಣು ಮುಚ್ಚಿ ಅಂತರ್ಮುಖಿಗಳಾದರೆ ನಾವು ನಮ್ಮೊಳಗೆ ಆತನನ್ನು ನೋಡಬಹುದು. ಇದನ್ನು ಸೂಚಿಸುವುದಕ್ಕೋಸ್ಕರ 'ತದಂತರಸ್ಯ ಸರ್ವಸ್ಯ' ಎಂದರು. ಸಮಸ್ತ ವಸ್ತುವಿನ ಒಳಗೆ,ಚರಾಚರ ವಸ್ತುವಿನ ಒಳಗೆ ಅತ್ಯಂತ ಸಮೀಪದಲ್ಲಿಯೇ ಇದ್ದಾನೆ. ಅವನೇ, ಅದೇ 'ತತ್ ಉ-ತದು' 'ಸರ್ವಸ್ಯಾಸ್ಯ ಬಾಹ್ಯತಃ' ಚರಾಚರ ವಿಶ್ವದ ಹೊರಗೂ ಎಲ್ಲೆಡೆಯೂ ತುಂಬಿದ್ದಾನೆ. ವಿಶ್ವವ್ಯಾಪಿಯಾಗಿದ್ದಾನೆ. ವಿಶ್ವದ, ಸೃಷ್ಟಿಯ ಒಳಗೂ ಹೊರಗೂ ಇದ್ದಾನೆ. ನಮ್ಮ ಒಳಗೂ ಹೊರಗೂ ಇದ್ದಾನೆ. ಆದ್ದರಿಂದಲೇ ಅವನು ದೂರದಲ್ಲಿಯೂ ಹತ್ತಿರದಲ್ಲಿಯೂ ಇದ್ದಾನೆ ಎಂದು ತಿಳಿದುಕೊಂಡಿರಬೇಕು ಎಂದು ಉಪನಿಷತ್ತು ಅವನ ಮಹಿಮೆಯನ್ನು ವರ್ಣಿಸುತ್ತದೆ. ಭಗವಂತ ಹೊರಗಿನಿಂದಲೂ ತುಂಬಿಕೊಂಡು ನಮ್ಮೊಳಗೆ ತುಂಬಿಕೊಂಡು ನಮ್ಮಾನ್ನೂ ಧಾರಣೆ ಮಾಡುತ್ತಾನೆ. ಅವನ ಧಾರಣೆಯಿಂದ ನಾವು ನಿಂತಿದ್ದೇವೆ. ಈ ಎಚ್ಚರ ಇರಬೇಕು ನಮಗೆ.

ವಿಶ್ವತೋಮುಖ ಚಿಂತನೆಯನ್ನು ಇಲ್ಲಿ ಕಾಣಬಹುದು. ಉಪನಿಷತ್ತಿನ ದೇವರ ಕಲ್ಪನೆ, ಬಹಳ ಮನೋಜ್ಞವಾಗಿ ಈ ಮಂತ್ರದಲ್ಲಿ ತಿಳಿಯಲ್ಪಟ್ಟಿದೆ. ಅದು ಯಾವುದೇ ಹೆಸರಿನಿಂದಲೂ ತಿಳಿಯಬಹುದಾದ ಅದ್ಭುತ, ಪರಮಾದ್ಭುತ ತತ್ತ್ವ. ನಮ್ಮ ಸನಾತನಧರ್ಮದ ವೈಶಿಷ್ಟ್ಯ ಇದು, ಹಿರಿಮೆ ಇದು. ಪರಮಾತ್ಮನಷ್ಟು ಅಂತರಂಗದ ಆಪ್ತಬಂಧು ಯಾರು ಸಿಕ್ಕಾರು ನಮಗೆ?

ಆ ಪರಮತತ್ತ್ವವನ್ನು ಶರಣಾಗೋಣ. ಚೆನ್ನಾಗಿ ತಿಳಿಯೋಣ. ತಿಳಿದು ಕರ್ತವ್ಯ ಪ್ರಜ್ಞೆಯನ್ನೂ ಚೆನ್ನಾಗಿ ನಿರ್ವಹಿಸೋಣ. ಅದನ್ನು ಮುಂದಿನ ಮಂತ್ರ ತಿಳಿಸುತ್ತದೆ. ಅದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

ತಿರುಮಲೆ ತಿರುಪತಿ ದೇವಸ್ಥಾನಗಳು ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಸಪ್ತಗಿರಿ

ಶ್ರೀ ಪರಾಭವ ನಾಮ ಸಂವತ್ಸರ ವೈಶಾಖ - ಅಧಿಕ ಜ್ಯೇಷ್ಠ ಮಾಸ ಸಂಚಿಕೆ

ಸಂಪುಟ:05 ಮೇ - 2026 ಸಂಚಿಕೆ:10



ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ

ಗೌರವ ಸಂಪಾದಕರು
ಶ್ರೀ ಎಂ.ರವಿಚಂದ್ರ,IAS,
ಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ತಿರುಪತಿ.

ಪ್ರಕಾಶಕರು,ಸಂಪಾದಕರು,
ಪ್ರಧಾನ ಸಂಪಾದಕರು (F.A.C)
ಡಾ॥ವಿ.ಜಿ.ಚೊಕ್ಕಲಿಂಗಂ,M.A.,Ph.d.,Dip.in Jmc

ಮುದ್ರಣ
ಶ್ರೀ ಆರ್.ವಿ. ವಿಜಯ್‌ಕುಮಾರ್,B.A.B.Ed
ಉಪಕಾರ್ಯನಿರ್ವಹಣಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ ಮತ್ತು ಪ್ರಕಾಶನ,
ತಿರುಪತಿ.

ಡಿ.ಐ.ಪಿ.
ಪ್ರಧಾನ ಸಂಪಾದಕರ -ಕಾರ್ಯಾಲಯ ತಿ.ತಿ.ದೇ.ತಿರುಪತಿ.

ಛಾಯಾಗ್ರಹಣ
ಶ್ರೀ ಪಿ.ಎನ್.ಶೇಖರ್, ಪ್ರಧಾನ ಛಾಯಾಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ, ಸಹಾಯ ಛಾಯಾಗ್ರಹಣ ತಿ.ತಿ.ದೇ.

ಲೇಖನ/ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ,
ತಿ.ತಿ.ದೇ.,ಪ್ರೆಸ್. 2 ನೇ ಅಂತಸ್ತು, ಕೆ.ಟಿ.ರಸ್ತೆ.
ತಿರುಪತಿ - 517 507
ಕಾರ್ಯಾಲಯ : 0877 - 2264543
: 0877 - 2264359
ಪ್ರಧಾನ ಸಂಪಾದಕರು : 0877 - 2264363

ಬಿಡಿ ಪ್ರತಿ ರೂ. 20/-
ವಾರ್ಷಿಕ ಚಂದಾ ರೂ. 240/-
ಆಜೀವ ಚಂದಾ ರೂ. 2400/- (12 ವರ್ಷಗಳು)
ವಿದೇಶಿ ವಾರ್ಷಿಕ ಚಂದಾ ರೂ. 1030/-

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333

ಸಪ್ತಗಿರಿ ಮಾಸ ಪತ್ರಿಕೆಯನ್ನು ವೀಕ್ಷಿಸಲು
www.tirumala.org
ಮೂಲಕ ಓದಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ - ಪ್ರಧಾನ ಸಂಪಾದಕರು

ವಿಷಯಸೂಚಿಕೆ

ಸಂಪಾದಕೀಯ			06
ಶ್ರೀಎರಿ ಶ್ರೀನಿವಾಸಚಾರ್ಯರ			
ಶ್ರೀಶ್ರೀನಿವಾಸ ಕಲ್ಯಾಣ	-	ಡಾ॥ ವೃಂದಾ ಸಂಗಮ್	07
ಅಧಿಕ ಮಾಸದ ಮಹತ್ವ	-	ಡಾ॥ ಗುರುರಾಜ ಪೋಶೆಟ್ಟಿಹಳ್ಳಿ	10
ಕೂರ್ಮ ಜಯಂತಿ	-	ಶ್ರೀಮತಿ ಮಾಧುರಿ ದೇಶಪಾಂಡೆ	13
ಸಂತಾನ ಕರುಣಿಸುವ ಶಾಂತೇಶ	-	ಹನುಮಂತ ಮ. ದೇಶಕುಲಕರ್ಣಿ	15
ಅಧಿಕಫಲ ನೀಡುವ ಅಧಿಕ ಜ್ಯೇಷ್ಠ ಹುಣ್ಣಿಮೆ	-	ಶ್ರೀಮತಿ ವಾರುಣಿ ಹೊನ್ನಾಳಿ	16
ಹರಿಕಥಾಮೃತಸಾರ ಮಹಿಮೆ ಅಪಾರ	-	ಶ್ರೀಮತಿ ಪ್ರಿಯಪ್ರಾಣೇಶ ಹರಿದಾಸ	20
ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ	-	ದಿ॥ಜಿ.ಎನ್. ಶ್ರೀನಿವಾಸನ್	24
ಹನುಮಾನ್ ಚಾಲೀಸಾ		----------	27
ಶ್ರೀ ಶ್ರೀನಿವಾಸ ತೀರ್ಥರು	-	ಡಾ॥ರೂಪಶ್ರೀ ಶಶಿಕಾಂತ್	31
ಮಾಗಳ ಹಾಗೂ ಹೊಳಲಿನ			
ಸುಂದರ ದೇವಾಲಯಗಳು	-	ಕೆಂಗೇರಿ ಚಕ್ರಪಾಣಿ	33
ಅಧಿಕ ಮಾಸದಲ್ಲಿ ದೀಪದಾನದ			
ಮಹಿಮೆ ಅಪಾರ	-	ಶ್ರೀಧರ ರಾಯಸಂ	36
ನವತಿರುಪ್ಪದಿ-ನವತಿರುಪತಿಗಳು -1	-	ಸೂರ್ಯವಂಶಿ	38
ಆಳ್ವಾರುಗಳು ಕಂಡ ತಿರುವೇಂಗಡ	-	ಎಂ.ಆರ್. ನರಸಿಂಹನ್	40
ತಿರುಮಲೆ ಕಾಲಮಾನಾಚರಣೆಗಳು	-	ಶ್ರೀಮತಿ	42
ಶ್ರೀ ವೆಂಕಟಾಚಲ ಮಹಾತ್ಮೆ	-	ಶ್ರೀಮತಿ ಎನ್. ಪಾರ್ವತಿ	44
ರಾಶಿಫಲಗಳು	-	ಶ್ರೀಮಾತಾ ಅನುಗ್ರಹ	46
ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು	-	ಡಾ॥ ಅನಸೂಯ ಎಸ್. ರಾಜೀವ್	47
ನೀತಿಕಥೆ-ಪರೋಪಕಾರಕ್ಕಾಗಿ			
ಸದಾ ಮಿಡಿಯೋಣ	-	ಎ.ಆರ್. ರಘುರಾಮ	48
ಚಿತ್ರಕಥೆ- ಜೀವ ರಕ್ಷಕ ಸ್ತೋತ್ರ	-	ಆರ್.ಕೆ.ವಿ	52

ಮುಖಚಿತ್ರ - ಉಭಯದೇವಿಯರೊಂದಿಗೆ ಶ್ರೀ ಗೋವಿಂದರಾಜಸ್ವಾಮಿಯವರು, ತಿರುಪತಿ
ಹಿಂಬದಿಚಿತ್ರ- ಶ್ರೀ ವೀರ ವೆಂಕಟ ಸತ್ಯನಾರಾಯಣ ಸ್ವಾಮಿ, ಅನ್ನವರಂ, ಕಾಕಿನಾಡ ಆ.ಪ್ರ



ಜಗವೆಲ್ಲಾ ಲಕ್ಷ್ಮೀ ನಿವಾಸ!

ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹ್ಯಕರ್ಮಣಃ ।

ಶರೀರಯಾತ್ರಾಽಪಿ ಚ ತೇ ನ ಪ್ರಸಿದ್ಧ್ಯೇದ ಕರ್ಮಣಃ ॥ (3-8)

ಯಾರೂ ಯಾವ ಕೆಲಸವನ್ನು ಮಾಡದೇ ಸುಮ್ಮನೇ ಇರಬಾರದು. ಯಾವ ಕೆಲಸಮಾಡದೇ ಇರುವುದಕ್ಕಿಂತಲೂ ಯಾವುದಾದರೂ ಒಂದು ಕೆಲಸವನ್ನು ಮಾಡುವುದು ಶ್ರೇಷ್ಠ! ಅದರಿಂದ ಬದುಕು ಮುಂದಕ್ಕೆ ಸಾಗುತ್ತದೆ. ಕೆಲಸವನ್ನು ಮಾಡದವರಿಗೆ ಬದುಕಿನ ಬಂಡಿಯನ್ನು ಎಳೆಯುವುದು ಬಹಳ ಕಷ್ಟವಾಗುತ್ತದೆ ಎಂದು ಭಗವದ್ಗೀತೆಯಲ್ಲಿ ಹೇಳಲಾಗಿದೆ. ಕೆಲಸ ಮಾಡುವುದು ಆರೋಗ್ಯರೀತ್ಯಾ ಹಾಗೂ ಸಂಪತ್ತಿಗೂ ಮೂಲವಾಗಿದೆ. ಐಶ್ವರ್ಯ ಮತ್ತು ಆರೋಗ್ಯ ಎರಡೂ ಲಕ್ಷ್ಮೀ ದೇವಿಯ ಸ್ವರೂಪಗಳು. ಲಕ್ಷ್ಮೀದೇವಿಯನ್ನು ಪೂಜಿಸುವುದೆಂದರೆ ಸೋಮಾರಿತನವನ್ನು ಬಿಟ್ಟು ಸದಾಕಾಲ ಯಾವುದಾದರೊಂದು ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುವುದು ಎಂದರ್ಥ ! ಕೆಲವರು ಶಾರೀರಕವಾಗಿ ಶ್ರಮವಹಿಸಿದರೆ, ಮತ್ತೆ ಕೆಲವರು ಮಾನಸಿಕವಾಗಿ ಶ್ರಮವಹಿಸುತ್ತಾರೆ. ಈ ಎರಡಕ್ಕೂ ಒಂದಕ್ಕೊಂದು ಅವಿನಾಭಾವ ಸಂಬಂಧವಿದೆ. ಆದ್ದರಿಂದ ಯಾರನ್ನೂ ಕೀಳಾಗಿ ನೋಡಬೇಡಿ ಪರಸ್ಪರ ಗೌರವವನ್ನು ನೀಡಿ.

ಉದ್ಯೋಗಿನಂ ಪುರುಷ ಸಿಂಹಂ ಉಪೈತಿ ಲಕ್ಷ್ಮೀ

ದೈವೇನ ದೇಯಮಿತಿ ಕಾಪುರುಷಾ ವದಂತಿ

ದೈವಂ ನಿಹತ್ಯ ಕುರು ಪೌರುಷಂ ಆತ್ಮಶಕ್ತ್ಯಾ

ಯತ್ನೇ ಕೃತೇ ಯದಿ ನಾ ಸಿದ್ಧ್ಯಂತಿ ಕೋಽತ್ರ ದೋಷಃ

ಯಾರು ಉತ್ಸಾಹದಿಂದ ಕಷ್ಟಪಟ್ಟು ಕೆಲಸ ಮಾಡುವವರೋ ಅವರ ಬಳಗೆ ಲಕ್ಷ್ಮೀದೇವಿಯು ಬರುತ್ತಾಳೆಂದು ಈ ಶ್ಲೋಕವು ಹೇಳುತ್ತಿದೆ. 'ಉದ್ಯೋಗಿನಂ' ಕಷ್ಟ ಪಟ್ಟು ಕೆಲಸ ಮಾಡುವ ಪುರುಷರಾಗಲೀ, ಸ್ತ್ರೀಯರಾಗಲೀ ಸಿಂಹದಂತವರು ಎನ್ನುತ್ತಾರೆ. 'ಉಪೈತಿ ಲಕ್ಷ್ಮೀ' - ಲಕ್ಷ್ಮೀದೇವಿ ಅವರನ್ನು ಆಶೀರ್ವದಿಸುವುದಕ್ಕೆ ಆತುರದಿಂದ ಬರುತ್ತಾಳಂತೆ. ಎಲ್ಲಾ ನಮ್ಮ ಕೈಯ್ಯಲ್ಲೇನಿದೆ ? ಅದೇ ಹೇಗೋ ನಡೆಯುತ್ತದೆ ಎಂದು ಅನೇಕರು ಮಾತನಾಡುತ್ತಿರುತ್ತಾರೆ. ಅದು ಸರಿಯಲ್ಲ. 'ದೈವಂ ನಿಹತ್ಯ ಕುರು ಪೌರುಷಂ ಆತ್ಮಶಕ್ತ್ಯಾ' ಎಂದು ಆತ್ಮ ಸ್ಥೈರ್ಯದಿಂದ ಮುನ್ನಡೆಯಬೇಕು.

ಜನಕ ಮಹಾರಾಜ, ಪ್ರಹ್ಲಾದರಾಜ, ಅಂಬರೀಷ, ಧರ್ಮ ವ್ಯಾಧ, ಭಗೀರಥ ತಮ್ಮ ತಮ್ಮ ಕರ್ತವ್ಯಗಳನ್ನು ವಿಧ್ಯುಕ್ತವಾಗಿ ಆಚರಿಸಿ, ಆತ್ಮ ಸ್ಥೈರ್ಯದಿಂದ ಮೋಕ್ಷವನ್ನು ಪಡೆದರು. 'ಶ್ರಮವಹಿಸಿದರೆ ದೇಶಕ್ಕೆ ಸಿರಿ, ಲೌಕಿಕ, ಆಧ್ಯಾತ್ಮಿಕ ಸಂಪತ್ತಿಗೆ ಶ್ರಮವೇ ಮುಖ್ಯವಾದ ಮಾರ್ಗ' ಶ್ರಮದಿಂದ ಸಂಪತ್ತು ಲಭಿಸುತ್ತದೆ. ಸಮಸ್ತ ಉತ್ಪತ್ತಿಗೆ ಶ್ರಮವೇ ಕಾರಣ! ಶ್ರಮದಿಂದ ನಡೆಸುವ ಜೀವನದ ಸೌಂದರ್ಯವನ್ನು ವರ್ಣಿಸಲಾಗುವುದಿಲ್ಲ. ಶ್ರಮದಲ್ಲಿ ಕೇವಲ ಅಂದವೇ ಅಲ್ಲದೇ ಆನಂದವೂ ಅಡಗಿದೆ.

ಚಿಕ್ಕ ಚಿಕ್ಕ ಕೆಲಸಗಳನ್ನು ಮಾಡುವವರು, ವ್ಯವಸಾಯದಲ್ಲಿ, ಪಾರಿಶ್ರಾಮಿಕ ಘಟಕಗಳಲ್ಲಿ ಕೆಲಸ ಮಾಡುವವರಿಲ್ಲದಿದ್ದರೆ ಉತ್ಪತ್ತಿ ನಿಂತು ಹೋಗುತ್ತದೆ. ಅದರ ಮೂಲಕ ಜೀವನದ ಪ್ರಮಾಣಗಳು ನಿಧಾನಗತಿಯಲ್ಲಿ ಸಾಗುತ್ತದೆ. ಅದಕ್ಕೆ ಶ್ರಮವನ್ನು ಸಂಪತ್ತಿನಂತೆ, ಶ್ರಮಜೀವಿಯನ್ನು ಸಂಪತ್ತಿನ ಸೃಷ್ಟಿಕರ್ತನೆಂದು ಗೌರವಿಸಬೇಕು. ಧಾರ್ಮಿಕ ವ್ಯವಸ್ಥೆಯಲ್ಲೂ ಶ್ರಮಜೀವಿಗಳ ಪಾತ್ರ ಮಹತ್ತರವಾಗಿದೆ. ಭಕ್ತರಿಗೆ ಬೇಕಾಗುವ ಎಲ್ಲಾ ಸೌಲಭ್ಯಗಳಿಂದ ಹಿಡಿದು ದೇವಾಲಯದ ಪ್ರಾಕಾರಗಳನ್ನು ಶುಚಿಯಾಗಿ ಇಡುವವರೆಗೂ ವಿವಿಧ ಶಾಖೆಗಳಲ್ಲಿ ಕೆಲಸ ಮಾಡುವವರಲ್ಲಿ ಭಗವಂತನ ಅಂಶವು ಇರುತ್ತದೆಂದು ಭಾವಿಸಿ ಅವರನ್ನು ಗೌರವಿಸುವುದೇ 'ಕಾರ್ಮಿಕರ ದಿನೋತ್ಸವದ' ಮುಖ್ಯ ಉದ್ದೇಶವಾಗಿದೆ. ಶ್ರಮವು ಲಕ್ಷ್ಮೀ ದೇವಿಯ ಸ್ವರೂಪ - ಶ್ರಮಜೀವಿಗಳು ನಿಜವಾದ ಲಕ್ಷ್ಮೀ ಆರಾಧಕರು!

ಶ್ರಮಕ್ಕೆ ವಂದನೆ - ಶ್ರಮಜೀವಿಗಳಿಗೆ ವಂದನೆ





ಶ್ರೀ ಏರಿ ಶ್ರೀನಿವಾಸಾಚಾರ್ಯರ ಶ್ರೀ ಶ್ರೀನಿವಾಸ ಕಲ್ಯಾಣ


– ಡಾ॥ ವೃಂದಾ ಸಂಗಮ್
94499 06208

ಭವಿಷ್ಯೋತ್ತರ ಪುರಾಣದಲ್ಲಿ ಉಲ್ಲೇಖವಾಗಿರುವ, ಶ್ರೀನಿವಾಸನ ಇಚ್ಛೆಯಂತೆಯೇ ನಡೆದಿರುವ ಕಲ್ಯಾಣೋತ್ಸವ. ಯುಗ ಯುಗದ ಹಿಂದೆಯೇ ನಿಶ್ಚಯವಾಗಿದ್ದ ವಿವಾಹ ಮಹೋತ್ಸವ. ತ್ರೇತ್ರೆಯಲಿ ವೇದವತಿಯು ಸೀತಾದೇವಿಗೆ ಮಾಡಿದ ಸಹಾಯಕ್ಕಾಗಿ, ಅವಳನ್ನು ಮದುವೆಯಾಗುವೆ ನೆಂದಿದ್ದ ಪರಮಾತ್ಮನ ಉತ್ಸವ, ದ್ವಾಪರದಲ್ಲಿ ತನ್ನನ್ನು ಆಡಿಸಿ ಹಾಲುಣಿಸಿ ಬೆಳೆಸಿದ್ದ, ಯಶೋದಾದೇವಿ ತನ್ನ ಕಲ್ಯಾಣವನ್ನು ನೋಡಲಿಚ್ಛಿಸಿದಳೆಂದು, ಅವಳಿಗೆ ತನ್ನ ವಿವಾಹದ ಸಂಭ್ರಮವನ್ನು ತೋರಿಸುವುದಕ್ಕೆ ನಡೆಸಿದ ಕಲ್ಯಾಣ ಮಹೋತ್ಸವ. ಈ ಯುಗದಲ್ಲಿ ಜಗದ ತಂದೆಯು ತನ್ನದೇ ಇಚ್ಛೆಯಂತೆ, ದೇವಾನುದೇವತೆಗಳೆಲ್ಲಾ ಕರೆಸಿ ಅತ್ಯಂತ ಸಂಭ್ರಮದಿಂದ, ಉತ್ಸಾಹದಿಂದ ನಡೆದ, ನಡೆಸಿದ ಮಹೋತ್ಸವ, ಅದುವೇ ಶ್ರೀ ಶ್ರೀನಿವಾಸ ಪದುಮಾವತಿಯ ಕಲ್ಯಾಣ ಮಹೋತ್ಸವ. ಇಂದಿಗೂ ಮನೆ ಮನೆಯಲ್ಲಿ ವೈಶಾಖ ಶುದ್ಧ ದಶಮಿ ಹಾಗೂ ನವರಾತ್ರಿಗಳಂದು ವೈಭವದಿಂದ ಆಚರಿಸುವ ಕಲ್ಯಾಣದ ಮಹಾ ಉತ್ಸವ.

ಈ ಸಂಭ್ರಮವನ್ನು ಹಾಡಿ ಹೊಗಳದ ಹರಿದಾಸರಿಲ್ಲ. ಅದರಲ್ಲೂ ಈ ಸಂಪೂರ್ಣ ವರ್ಣನೆಯು, ಶ್ರೀ ಅನಂತಾದ್ರೀಶರ ಶ್ರೀವೆಂಕಟೇಶ ಪಾರಿಜಾತ ಹಾಗೂ ಶ್ರೀ ಏರಿ ಶೇಷಾಚಾರ್ಯರ ಶ್ರೀ ಶ್ರೀನಿವಾಸ ಕಲ್ಯಾಣಗಳಲ್ಲಿ ವಿವರವಾಗಿ ಕಣ್ಣಿಗೆ ಕಟ್ಟುವಂತಿದೆ. ಶ್ರೀ ಏರಿಶೇಷಾಚಾರ್ಯರ ಕಾಲ ಸುಮಾರು ಕ್ರಿ.ಶ. 1841 (ಇದು ಅವರು ಹರಿಪಾದ ಸೇರಿದ ವರ್ಷ) ಅವರು ಮೂಲತಃ ಚಿಂತಾಮಣಿ ಭಾಗದವರು, ಅವರ ಗುರುಗಳು ಶ್ರೀಮುದ್ಗಲ ಕೃಷ್ಣಾಚಾರ್ಯರು. ಶ್ರೀಏರಿ ವೆಂಕಟ ಅವರ ಅಂಕಿತ. ಲಭ್ಯವಿರುವ ಶ್ರೀ ಶ್ರೀನಿವಾಸ ಕಲ್ಯಾಣವು ಅಪೂರ್ವಕೃತಿ. ಇಂದಿಗೂ ಮನೆಯಲ್ಲಿ ಯಾವುದೇ ರೀತಿಯ ಶುಭ ಕಾರ್ಯ, ಮದುವೆ, ಮುಂಜಿ, ನಡೆಯುವ ಮುಂಚೆ ಶ್ರೀನಿವಾಸನ ಕಲ್ಯಾಣೋತ್ಸವದ ಸಂಪೂರ್ಣ ಕಥಾನಕವನ್ನು ಪಠಿಸುವುದರಿಂದ ಸಕಲ ಕಾರ್ಯಗಳೂ ನಿರ್ವಿಘ್ನವಾಗಿ ನಡೆಯುತ್ತದೆಂಬುದಕ್ಕೆ ನಿದರ್ಶನಗಳಿವೆ. ದೇವ ದೇವನ ವಿವಾಹ ಕಾಲ ವೈಶಾಖಶುದ್ಧ ದಶಮಿ ಹಾಗೂ ನವರಾತ್ರಿಯ ಬ್ರಹ್ಮೋತ್ಸವಗಳಲ್ಲಿ ಶ್ರದ್ಧೆಯಿಂದ ದೇವನ ಕಲ್ಯಾಣೋತ್ಸವ ಪಠಿಸಿದರೆ ಸನ್ಮಂಗಳವಾಗುವುದೆಂಬ ನಂಬಿಕೆಯಿದೆ.

ಶ್ರೀಏರಿ ವೆಂಕಟೇಶಾಚಾರ್ಯರು ಹಾಗೂ ಶ್ರೀಏರಿ ಶೇಷಾಚಾರ್ಯರು ಇಬ್ಬರೂ ಸಹೋದರರು. ಗದ್ವಾಲ ಸಂಸ್ಥಾನದ ಏರಿ ಗ್ರಾಮದ ಶ್ರೀ ಏರಿ ಮುದ್ಗಲಾಚಾರ್ಯರ ಪುತ್ರರು. ಅವರು ಉತ್ತರಾದಿ ಮಠದ ಪೀಠಾಧಿಪತಿಗಳಾಗಿದ್ದ ಶ್ರೀ ಸತ್ಯಬೋಧತೀರ್ಥರ ಆಶ್ರಿತ ವಿದ್ವಾಂಸರು ಶ್ರೀಮುದ್ಗಲಾಚಾರ್ಯರು. ಶ್ರೀಏರಿ ವೆಂಕಟೇಶಾಚಾರ್ಯರು, ಕೋಲಾರದಲ್ಲಿ ಭೀಕರ ಕ್ಷಾಮದ ಕಾಲದಲ್ಲಿ ಪರ್ಜನ್ಯ ಜಪದಿಂದ ಮಳೆ ತರಿಸಿದುದಕ್ಕಾಗಿ, ಮೈಸೂರು ಸಂಸ್ಥಾನದ ದಿವಾನರಾಗಿದ್ದ ಪೂರ್ಣಯ್ಯನವರು, ಅವರಿಗೆ ಹತ್ತು ಗ್ರಾಮಗಳನ್ನು ಉಂಬಳಿಯಾಗಿ ನೀಡಿದ್ದರಂತೆ. ಶ್ರೀಏರಿ ಶೇಷಾಚಾರ್ಯರೂ ಸಹ ಅಗಾಧ ಪಾಂಡಿತ್ಯ, ಸಾಧನೆಯುಳ್ಳವರು. ಒಮ್ಮೆ ಲೇಪಾಕ್ಷಿ ಬಳಿಯ ಶಿವಾಲಯದಲ್ಲಿ ತಂಗಿದಾಗ, ರಾತ್ರಿ ಆಕ್ರಮಣ ಮಾಡಿದ ಸರ್ಪವೊಂದನ್ನು ಕಂಡು, ತಾರ್ಕ್ಷ್ಯ ಮಂತ್ರ ಜಪಿಸಿದಾಗ, ಆ ರಾತ್ರಿಯಲ್ಲಿಯೇ ಗರುಡ ಪಕ್ಷಿಯೊಂದು ಹಾರಿ ಬಂದು, ಆ ಸರ್ಪವನ್ನು ಕುಕ್ಕಿ ಎರಡು ತುಂಡಾಗಿ ಸೀಳಿತಂತೆ, ಹಾಗಿತ್ತು ಅವರ ಮಂತ್ರ ಸಿದ್ಧಿ.

ಶ್ರೀಏರಿಶೇಷಾಚಾರ್ಯರು, ಒಮ್ಮೆ ಬ್ರಹ್ಮೋತ್ಸವದ ಸಂದರ್ಭದಲ್ಲಿ ತಿರುಪತಿಗೆ ಹೋಗಬೇಕೆಂದಿರುವ ಬಯಕೆಯಿಂದ ಅಣ್ಣನ



ಅವರ ಒಪ್ಪಿಗೆ ಆಶೀರ್ವಾದದೊಂದಿಗೆ, ತಮ್ಮ ಕೆಲ ಶಿಷ್ಯರೊಂದಿಗೆ ಹೊರಟರು. ಹಾಗೆಯೇ ಪ್ರವಾಸದಲ್ಲಿ ಸಾಗಿ, ಗೋವಿಂದರಾಜ ಪಟ್ಟಣ ತಲುಪಿದಾಗ ಹೊತ್ತು ಮುಳುಗಿದ್ದರಿಂದ. ರಾತ್ರಿ ಅಲ್ಲಿಯೇ ತಂಗಲು ನಿಶ್ಚಯಿಸಿದರು. ಆಯಾಸದಿಂದ ಮಲಗಿದ ಶೇಷಾಚಾರ್ಯರಿಗೆ ದಿವ್ಯವಾದ ಕನಸು, ಕನಸಿನಲ್ಲಿ ನಾಳೆ ನಿನಗೆ ಗಾಳಿ ಗೋಪರದ ಬಳಿ ದರ್ಶನ ನೀಡುತ್ತೇನೆ. ನನ್ನನ್ನು ಆಲಂಗಿಸು, ನನ್ನ ಕಲ್ಯಾಣದ ವರ್ಣನೆಯನ್ನು ಗಾನ ರೂಪದಲ್ಲಿ ರಚಿಸು ಎಂದು ಚತುರ್ಭುಜ ರೂಪನಾಗಿ ಶ್ರೀನಿವಾಸನು ಹೇಳಿದಂತಾಯಿತು. ಪ್ರಾತಃ ಕರ್ಮಗಳನ್ನೆಲ್ಲಾ ಮುಗಿಸಿ ಕಪಿಲೇಶ್ವರನ ದರ್ಶನ, ಪೂಜೆ ಮಾಡಿ ತಿರುಮಲೆ ಹತ್ತಲು ಪ್ರಾರಂಭಿಸಿದರು. ಸ್ವಲ್ಪ ದೂರ ಸಾಗುವಷ್ಟರಲ್ಲಿ ಒಂದು ಘಟಸರ್ಪ ಹೆಡೆಯೆತ್ತಿ ಮಧ್ಯ ದಾರಿಯಲ್ಲಿ ಮಲಗಿತ್ತು. ಶೇಷಾಚಾರ್ಯರನ್ನು ನೇರ ದೃಷ್ಟಿಯಿಂದ ನೋಡುತ್ತಿತ್ತು. ಅದರ ಕಣ್ಣುಗಳ ಹೊಳಪು ಆತ್ಮೀಯತೆ ಕಂಡು ಆಚಾರ್ಯರಿಗೆ ಹಿಂದಿನ ರಾತ್ರಿ ತಾವು ಕಂಡ ಸ್ವಪ್ನದ ನೆನಪಾಯಿತು. ಸರ್ಪ ರೂಪದಲ್ಲಿನ ನಾರಾಯಣನಿರಬಹುದೇ ಎಂದು ಆಚಾರ್ಯರು ಅನಿಶ್ಚಿತತೆಯಿಂದ, ಮಾನವ ಸಹಜ ಭಯ ದಿಂದ ಸರ್ಪದ ಕಡೆ ನೋಡುತ್ತಿದ್ದಂತೆ, ಸರ್ಪವು ಮೆಲ್ಲನೆ ಹತ್ತಿರ ದಲ್ಲಿದ್ದ ಬಂಡೆಯ ಕಡೆ ಸರಿಯಲು ಪ್ರಾರಂಭಿಸಿತು. ಆಚಾರ್ಯರು ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ ಸರ್ಪವನ್ನು ಆಲಂಗಿಸಲು ಮುಂದಾದಾಗ ಕೇವಲ ಅದರ ಬಾಲದ ಭಾಗ ಮಾತ್ರ ಇವರ ಕೈಗೆ ಸಿಕ್ಕಿ ಬಂಗಾರದ ಗಟ್ಟಿ ಆಚಾರ್ಯರ ಕೈಯಲ್ಲಿ ಬಂತು. ಇದು ವಿಷ್ಣು ಪಾದವೇ ಎಂದು ಆಚಾರ್ಯರು ಕಣ್ಣಿಗೊತ್ತಿಕೊಂಡು ಸಂಭ್ರಮದಿಂದ ಬೆಟ್ಟವನ್ನೇರಿದರು.

ತಿರುಮಲೆ ಸೇರಿ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನ, ಜಪ ತಪಾದಿಗಳನ್ನು ಮುಗಿಸಿ ತನ್ನ ಸ್ವಾಮಿಯ ದರ್ಶನಕ್ಕೆ ಕಾತುರ ರಾಗಿ ಶ್ರೀನಿವಾಸನ ಗುಡಿಯ ಮುಂದೆ ಬಂದು, ಶಿಷ್ಯ ಸಮೇತ ಶ್ರೀನಿವಾಸನ ದರ್ಶನಕ್ಕೆ ಬಂದಾಗ ಅಭಿಷೇಕದ ಸಮಯವಾದ್ದ ರಿಂದ ಇವರ್ಯಾರನ್ನೂ ಒಳಗೆ ಬಿಡಲಿಲ್ಲ. ಆಗ ಆಚಾರ್ಯರು ಪಂಚಾಮೃತ ಅಭಿಷೇಕ ಮುಗಿಯಲಿ ಎಂದು ಪ್ರದಕ್ಷಿಣೆ ನಮ ಸ್ಕಾರಗಳನ್ನು ಮುಗಿಸಿ, ತಾವು ಕೈಯಲ್ಲಿ ಹಿಡಿದಿದ್ದ ಬಂಗಾರದ ಗಟ್ಟಿಯನ್ನು ಹುಂಡಿಯಲ್ಲಿ ಸಮರ್ಪಿಸಿ, ವಿಮಾನ ಶ್ರೀನಿವಾಸನ ಎದುರು ಕಣ್ಮುಚ್ಚಿ ಧ್ಯಾನದಲ್ಲಿ ಕುಳಿತರು. ಇತ್ತ ಗರ್ಭಗುಡಿಯಲ್ಲಿ ಅರ್ಚಕರು ಪರಿಮಳ ದ್ರವ್ಯಯುಕ್ತ ನೀರನ್ನು ಹಾಕಲು ಬಂಗಾ ರದ ಗಿಂಡಿಯಲ್ಲಿ ತುಂಬಿ ಶ್ರೀನಿವಾಸನಿಗೆ ಅಭಿಷೇಕ ಮಾಡಲು ಎತ್ತಿದಾಗ ಗಿಂಡಿಯಿಂದ ನೀರೇ ಬೀಳಲಿಲ್ಲ. ಆಶ್ಚರ್ಯಚಕಿತ ರಾದ ಎಲ್ಲರೂ ಏನು ಅಪಚಾರ ನಡೆದಿರಬಹುದೆಂದು ತಮ್ಮ ತಮ್ಮಲ್ಲೇ ಚರ್ಚಿಸುತ್ತಿದ್ದಾಗ, ಮಹಂತರಿಗೆ ಅಭಿಷೇಕದ ಸಮ ಯಕ್ಕೆ ಬಂದ ಆಚಾರ್ಯ ರೊಬ್ಬರನ್ನು ಒಳಗೆ ಬಿಡದೆ ತಡೆದ ವಿಷಯ ತಿಳಿದು, ಇವನ್ಯಾರೋ ಮಹಿಮಾನ್ವಿತರೇ ಇರ ಬೇಕೆಂದು ಧಾವಿಸಿ ಹೊರಗೆ ಬಂದು ಧ್ಯಾನದಲ್ಲಿ ಕುಳಿತಿದ್ದ ಶೇಷಾ ಚಾರ್ಯರನ್ನು ಕಂಡು ಮನ್ನಿಸಬೇಕೆಂದು ಕೇಳಿಕೊಂಡು ಒಳಗೆ ಕರೆದೊಯ್ದಾಗ ಆಶ್ಚರ್ಯವೆಂಬಂತೆ ಗಿಂಡಿಯಿಂದ ಜಲವು

ಸುಲಲಿತವಾಗಿ ಶ್ರೀನಿವಾಸನಿಗೆ ಅಭಿಷಿಕ್ತವಾಯಿತು. ಆಗ ಶೇಷಾಚಾರ್ಯರಿಗೆ ಸ್ವಪ್ನದಲ್ಲಿ ಶ್ರೀನಿವಾಸ ತನ್ನ ಕಲ್ಯಾಣದ ವರ್ಣನೆ ಗಾನರೂಪದಲ್ಲಿ ರಚಿಸು ಎಂದಿದ್ದು ನೆನಪಾಗಿ, ಶ್ರೀನಿವಾಸನಿಗೆ ಅಭಿಮುಖವಾಗಿರುವ ಗರುಡ ಗಂಭದ ಬಳಿ ನಿಂತು ಸುಲಲಿತವಾಗಿ ಶ್ರೀನಿವಾಸನ ಕಲ್ಯಾಣವನ್ನು ಹೇಳಲು ಶುರು ಮಾಡಿದಾಗ ಅವರೊಂದಿಗಿದ್ದ ಶಿಷ್ಯರು ಚಾಚು ತಪ್ಪದೆ ಬರೆದುಕೊಂಡರು. ತಮ್ಮ ಸ್ವಪ್ನ ವೃತ್ತಾಂತವನ್ನೆ ಬಂದ, ಸ್ವಪ್ನದಿಂದ ನಿಂದಾ ಎಂದು ಪ್ರಾರಂಭಿಕ ಪದ್ಯವನ್ನಾಗಿ ನುಡಿದರು. ಆಗ ಆಶ್ವಯುಜ ಮಾಸದ ನವರಾತ್ರಿಯ ಸಮಯ. ಈ ಶುಭ ದಿನದಲ್ಲಿ ಶ್ರೀನಿವಾಸ ಕಲ್ಯಾಣದ ರಚನೆ ಶ್ರೀಶೇಷಾಚಾರ್ಯರಿಂದ ಆಯಿತು. ಶ್ರೀಶ್ರೀನಿವಾಸಕಲ್ಯಾಣ, ಏಲೀ ಶೇಷಾಚಾರ್ಯರ ಈ ಕೃತಿ ಅತ್ಯಂತ ಮಹೋನ್ನತವಾದದ್ದು. ಈ ಕೃತಿಯನ್ನು ವೆಂಕಟ ಎಂಬ ಅಂಕಿತನಾಮದಿಂದ ರಚಿಸಿದ್ದಾರೆ. ಕೆಲವು ಮೂಲಗಳ ಪ್ರಕಾರ ಆಚಾರ್ಯರು ತಮ್ಮ ತಂದೆ ಹಾಗೂ ಗುರುಗಳಾಗಿದ್ದ ಶ್ರೀ ಮುದ್ಗಲ ಕೃಷ್ಣಾಚಾರ್ಯರಿಂದಲೇ ಅಂಕಿತವನ್ನು ಪಡೆದರು ಎಂದು ತಿಳಿದು ಬರುತ್ತದೆ. ಆದರೆ ಕಾರಣ, ಸಮಯ, ಸಂದರ್ಭದ ಸ್ಪಷ್ಟತೆ ಇಲ್ಲ. ಶ್ರೀನಿವಾಸ ಕಲ್ಯಾಣವಲ್ಲದೇ ಇನ್ನೂ ಅನೇಕ ಕೃತಿಗಳನ್ನು ಆಚಾರ್ಯರು ರಚಿಸಿದ್ದಾರೆ ಎಂದಿದ್ದರೂ ಸಹ ಅವು ಲಭ್ಯವಿಲ್ಲ. ಆದರೂ, ಶ್ರೀಏಲೀ ಆಚಾರ್ಯರ ಶ್ರೀನಿವಾಸ ಕಲ್ಯಾಣವೆಂದೇ ಕರೆಸಿಕೊಳ್ಳುವ ಈ ಕೃತಿಯಲ್ಲಿ ಅತ್ಯಂತ ಸುಂದರವಾದ ಪದ ಪದ್ಯಗಳ ಲಭ್ಯತೆ ಇದೆ. ಈ ಕೃತಿಯು 12 ಅಧ್ಯಾಯ, 11 ದ್ವಿಪದಗಳು, 66 ಸುಪದಗಳು, 15 ಪದ್ಯಗಳು, 15 ಸಂಸ್ಕೃತ ಶ್ಲೋಕ, 53 ವಚನಗಳು, 16 ಪ್ರಾಕೃತ ಶ್ಲೋಕಗಳನ್ನು ಒಳಗೊಂಡು ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿ ರಚಿತವಾಗಿದೆ. ಲೋಕ ಕಲ್ಯಾಣಾರ್ಥವಾಗಿ ಋಷಿಗಳ ಯಜ್ಞದಿಂದ ಪ್ರಾರಂಭಗೊಂಡು ಲಕ್ಷ್ಮೀದೇವಿ ಭೂ ಲೋಕಕ್ಕೆ ಬಂದದ್ದು ಅವಳನ್ನರಸುತ್ತಾ ಭಗವಂತ ಬಂದದ್ದು, ಭೂವೈಕುಂಠವೆನಿಸಿರುವ ವೆಂಕಟಾದ್ರಿಯ ವರ್ಣನೆ, ಪದ್ಮಾವತಿಯ ಜನ್ಮ, ಆಕೆಯ ಸೌಂದರ್ಯ ವರ್ಣನೆ, ಶ್ರೀನಿವಾಸ ಪದ್ಮಾವತಿಯ ಮದುವೆಯ ಕಲಾಪಗಳು ಪ್ರತಿಯೊಂದು ಚಿತ್ರಿತ ವಾಗಿ, ಶೋತೃಗಳನ್ನು ಪ್ರೇಕ್ಷಕರನ್ನಾಗಿ ಮಾಡುತ್ತದೆ. ಹೀಗೆ, ಪರಮಾತ್ಮನ ಇಚ್ಛೆಯಂತೆ ಶ್ರೀನಿವಾಸ ಕಲ್ಯಾಣ ರಚನೆಯಾಗಿ, ಅದನ್ನು ಭಕ್ತಿಯಿಂದ ಭಗವದರ್ಪಣೆ ಮಾಡಿ, ಪೂಜಾದಿಗಳು, ನೈವೇದ್ಯ ಮುಗಿದ ನಂತರ, ಅಲ್ಲಿನ ಮಹಂತರು ಭಗವಂತನಿಗೆ ಸಮರ್ಪಿತವಾದ ಧಧ್ಯಾನ್ನವನ್ನು ಆಚಾರ್ಯರಿಗೆ ಪ್ರಸಾದ ರೂಪವಾಗಿ ಕೊಟ್ಟಾಗ ಬೊಗಸೆಯಲ್ಲಿದ್ದ ಅನ್ನವನ್ನು ಇಬ್ಬಾಗ ಮಾಡಿ ಸ್ವೀಕರಿಸುವಾಗ, ಮೂರು ಅಂಗುಲದ ಚತುರ್ಭುಜ ಶ್ರೀನಿವಾಸ ಸಾಲಿಗ್ರಾಮ ಶಿಲಾ ಪ್ರತೀಕ ಆಚಾರ್ಯರ ಕೈಯಲ್ಲಿ ಧಧ್ಯಾನ್ನದಲ್ಲಿತ್ತು. ಅತ್ಯಂತ ಸಂತೋಷದಿಂದ ಆಚಾರ್ಯರು ಶ್ರೀನಿವಾಸನಿಗೆ ಶಿರಸಾಷ್ಟಾಂಗ ನಮಸ್ಕರಿಸಿ ತಮ್ಮ ಭಾಗ್ಯವೆಂದು ಹಿಗ್ಗಿದ್ದರು. ಊರಿಗೆ ಹಿಂದಿರುಗಿ, ಅಣ್ಣ ಶ್ರೀಏಲೀ ವೆಂಕಟೇಶಾಚಾರ್ಯರಿಗೆ ನಡೆದ ವೃತ್ತಾಂತವನ್ನೆಲ್ಲಾ ತಿಳಿಸಿ, ತಮಗೆ ಪ್ರಸಾದ ರೂಪದಲ್ಲಿ ದೊರಕಿದ ಶ್ರೀನಿವಾಸನ ಮೂರ್ತಿಯನ್ನು ಪೂಜಾ ಗೃಹದಲ್ಲಿಟ್ಟು ಪೂಜಿಸಿದರು. ಅದು ಈಗಲೂ ಏಲೀ ಆಚಾರ್ಯರ ವಂಶಸ್ಥರಲ್ಲಿ ಪೂಜೆಗೊಳ್ಳುತ್ತಿದೆ.

ಶ್ರೀಏಲೀ ಶೇಷಾಚಾರ್ಯರು ದೇಶ ಪರ್ಯಟನೆಯಲ್ಲಿದ್ದಾಗ, ಪಿನಾಕಿನೀ ನದೀ ತೀರದಲ್ಲಿ, ಕ್ರಿ.ಶ. 1841 ರ ಜೇಷ್ಠ ಶುದ್ಧ ಅಷ್ಟಮಿಯ ದಿನ ಇಹಲೋಕವನ್ನು ತ್ಯಜಿಸಿದರು. ಅವರ ದಹನ ಕಾರ್ಯ ನಡೆದ ಜಾಗದಲ್ಲಿ ಒಂದು ಹುತ್ತವಿತ್ತೆಂದು, ಆಚಾರ್ಯರು ರಚಿಸಿದ ಕಲ್ಯಾಣವನ್ನು ವೈಶಾಖಮಾಸ, ನವರಾತ್ರಿಗಳಲ್ಲಿ ಹುತ್ತದ ಬಳಿ ಕುಳಿತು ಪಠಿಸುತ್ತಿದ್ದಾಗ ಸರ್ಪವೊಂದು ಕಾಣಿಸಿಕೊಂಡು ಮಂಗಳ ಹಾಡುವವರೆಗೂ ಶ್ರವಣ ಮಾಡುತ್ತಾ ನಂತರ ಹುತ್ತ ಸೇರುತ್ತಿತ್ತೆಂದು ಹೇಳುತ್ತಾರೆ. ಆಚಾರ್ಯರು ರಚಿಸಿದ ಶ್ರೀ ಶ್ರೀನಿವಾಸ ಕಲ್ಯಾಣವನ್ನು ಬರೆದು, ವೈಶಾಖಮಾಸ, ನವರಾತ್ರಿಗಳಲ್ಲಿ ಹಾಡಿದರೆ ಅವರ ಇಷ್ಟಾರ್ಥ ಸಿದ್ಧಿಸುವುದಾಗಿ ಶ್ರೀನಿವಾಸನೇ ತಿಳಿಸಿದ್ದಾನೆಂದು ಆಚಾರ್ಯರು ತಮ್ಮ ಕೃತಿಯಲ್ಲಿ ಹೇಳಿದ್ದಾರೆ. "ಬಂದ ಬಂದ, ಸ್ವಪ್ನದಿ ನಿಂದ ನಿಂದ" ಎಂಬ ಮೋಹನ ರಾಗದ ಕೃತಿಯಿಂದ ಶುರುವಾಗುವ ಈ ಶ್ರೀನಿವಾಸ ಕಲ್ಯಾಣವು,

ಏಲಿ ವೇಂಕಟ ಗುರುಃ ಶ್ರೀಶ ಚಾರು ಹೃದ್ಗತ ಸಂಸ್ಮಯಃ
ಧೀರೋ ಮೇ ಪ್ರೀಯತಾಂ ಕೃಷ್ಣೋ ವಾರಿಜಾಕ್ಷೋ ರಮಾಪತಿಃ
ಏಲಿ ಶ್ರೀಮದ್ವಿದ್ಯಾಮಣಿ ಮುಕುಟ ಏಲಿ ವೇಂಕಟಾಚಾರ್ಯ
ಮಹಾ ಗುರುರಾಜ ಪೂಜ್ಯ ಪಾದ ಸೇವಕ ಏಲಿ ಶೇಷಾಚಾರ್ಯೇಣ ಕೃತಮ್

ಎಂಬ ಶ್ಲೋಕದಿಂದ ಮುಕ್ತಾಯವಾಗುತ್ತದೆ. ಫಲ ಶ್ರುತಿಯಲ್ಲಿ ಅವರೇ, "ನವರಾತ್ರಿಯಲ್ಲಿ ಈ ಗ್ರಂಥ ಮಾಡೆಂದು ಹರಿಯಾಜ್ಞೆ ಸ್ಪಷ್ಟದಲಿ" ಎಂದು ಹೇಳಿದ್ದಾರೆ. ಈ ಕೃತಿಯ ಪಠಣೆಯಿಂದ "ಪೂರ್ಣ ಸಂಪತ್ತು ಪೂರ್ಣಾಯುಷ್ಯವನು ಪೂರ್ಣ ಜ್ಞಾನಾದಿಗಳ ಸತ್ಪುತ್ರರನ್ನು ಏನನಪೇಕ್ಷಿಸಿದವರಿಗೆಲ್ಲಾ ಜ್ಞಾನಿಗಳರಸ ನಾ ಕೊಡುವನವರಿಗೆ" ಎಂಬೆಲ್ಲಾ ಫಲಗಳನ್ನು ನೀಡುವನೆಂದು ತಿಳಿಸಿದ್ದಾರೆ. ಇಂತಹ ಅಪೂರ್ವ ಕೃತಿಯನ್ನು ನೀಡಿದ ಅಗಾಧ ಪಾಂಡಿತ್ಯದ ಶೇಷಾಚಾರ್ಯರನ್ನೂ, ಪರಮಾತ್ಮನ ಕಲ್ಯಾಣವನ್ನು ಸ್ಮರಿಸುವುದೇ ನಮ್ಮೆಲ್ಲರ ಅಹೋಭಾಗ್ಯ.

ಅಧಿಕ ಮಾಸದ ಮಹತ್ವ

ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
97393 69621

ಅಧಿಕ ಮಾಸ ಎಂದರೇನು?

ಯಾವ ಚಾಂದ್ರಮಾಸದಲ್ಲಿ ರವಿ ಸಂಕ್ರಮಣವೇ ಸಂಭವಿಸದೆ ಇರುವುದೋ ಅಥವಾ ಎರಡು ಸಂಕ್ರಾಂತಿಗಳು ಸಂಭವಿಸುವುದೋ, ಆ ಮಾಸವನ್ನು ಮಲ ಮಾಸ ಅಥವಾ ಅಧಿಕಮಾಸ ಎಂದು ಕರೆಯುತ್ತಾರೆ.

ಕಾಠಕ ಗೃಹ್ಯಸೂತ್ರ ಹಾಗೂ ಬ್ರಹ್ಮ ಸಿದ್ಧಾಂತಗಳಲ್ಲಿ ಈ ವಿಚಾರವನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಸಾಮಾನ್ಯವಾಗಿ ವರ್ಷಕ್ಕೆ ಹನ್ನೆರಡು ತಿಂಗಳು ಗಳಿದ್ದರೂ, ಅಧಿಕಮಾಸ ಬಂದಾಗ ಹದಿಮೂರು ತಿಂಗಳುಗಳಾಗುತ್ತವೆ. ಅಧಿಕ ಮಾಸವು ಹದಿಮೂರನೇ ಮಾಸ.

ಮಲಮಾಸ (ಅಧಿಕಮಾಸ) ಎಂಬ ಪದಾರ್ಥ

'ಮಲ' ಎಂದರೆ ಪಾತಕ. ಮಲವನ್ನು ಕಳೆಯುವ ಮಾಸವಾಗಿರುವುದರಿಂದ ಇದಕ್ಕೆ ಮಲಮಾಸ ಎಂಬ ಹೆಸರು ಬಂದಿದೆ. ಸ್ನಾನ, ದಾನ, ದೀಪಾರಾಧನೆ, ತುಳಸೀ ಸೇವೆಯಿಂದ ಪುರುಷೋತ್ತಮನ ಆರಾಧನೆ ಮಾಡಿದರೆ ಪಾತಕಗಳು ನಾಶವಾಗುತ್ತವೆ. ಶುಭಕಾರ್ಯಗಳಿಗೆ ನಿಷಿದ್ಧವಾಗಿರುವುದರಿಂದಲೂ ಈ ಮಾಸಕ್ಕೆ **"ಮಲಮಾಸ"** ಎಂಬ ಹೆಸರು ಬಂದಿದೆ.

ಅಧಿಕಮಾಸದ ಮಹಿಮೆ


ಅಧಿಕಮಾಸದ ಶುದ್ಧ ಪ್ರತಿಪದೆಯಂದು ಪ್ರಾತಃ ಕಾಲದಲ್ಲಿ ಶುದ್ಧಾಚರಣೆ ಮಾಡಿ, ಭಕ್ತಿಯಿಂದ ಪುರುಷೋತ್ತಮ ವ್ರತವನ್ನು ಸಂಕಲ್ಪಿಸಬೇಕು. ಒಂದು ಲಕ್ಷ ತುಳಸಿ ಅರ್ಚನೆಯೊಂದಿಗೆ ಸಾಲಗ್ರಾಮ ಪೂಜೆ ಮಾಡಿದರೆ ಅನಂತ ಪುಣ್ಯ. ದುಸ್ವಪ್ನ, ದಾರಿದ್ರ್ಯ, ಕಾಯಿಕ-ವಾಚಿಕ-ಮಾನಸಿಕ ತಾಪ ಗಳು ನಾಶ. ಹರಿಭಕ್ತನಿಗೆ ಇಂದ್ರಾದಿ ದೇವತೆ ಗಳ ರಕ್ಷಣೆ. ಇಹಲೋಕದಲ್ಲಿ ಕೀರ್ತಿ, ಪರ ಲೋಕದಲ್ಲಿ ಪುರುಷೋತ್ತಮನ ಸನ್ನಿಧಿ.

ಅಧಿಕಮಾಸದಲ್ಲಿ ಅಪೂಪ ದಾನದ ಮಹತ್ವ

ಪ್ರತಿದಿನವೂ ಮೂವತ್ತಮೂರು ಅಪೂ ಪಗಳ ದಾನ ವಿಹಿತ. ಪ್ರತಿದಿನ ಸಾಧ್ಯವಿಲ್ಲ ದಿದ್ದರೂ ಕನಿಷ್ಠ ಒಂದು ದಿನವಾದರೂ ಅವಶ್ಯ. ಬೆಲ್ಲ-ತುಪ್ಪಯುಕ್ತ ಅಪೂಪಗಳನ್ನು ಕಂಚಿನ ಪಾತ್ರೆಯಲ್ಲಿ ತುಪ್ಪ-ಚಿನ್ನ ಸಮೇತ ಯೋಗ್ಯ ಬ್ರಾಹ್ಮಣನಿಗೆ ಸಮರ್ಪಣೆ.

ಅಪೂಪಗಳನ್ನು ಶ್ರೀ ಹರಿಗೆ ಸಮರ್ಪಿಸುವ ವಿಧಿ

ಪೀತಾಂಬರದಿಂದ ಮುಚ್ಚಿ, ನೂತನ ಯಜ್ಞೋಪವೀತಗಳೊಂದಿಗೆ ಅರ್ಪಣೆ ಶ್ರೀಗಂಧ, ಪುಷ್ಪ, ಧೂಪ, ದೀಪ, ನೈವೇದ್ಯ




ತಾಂಬೂಲ, ಶಂಖ, ಘಂಟೆ, ಮೃದಂಗ ಘೋಷ ಮಂಗಳಾರತಿ ಮಂತ್ರ ಪುಷ್ಪ ಪ್ರದಕ್ಷಿಣೆ ನಮಸ್ಕಾರ.

ಅಧಿಕಮಾಸದಲ್ಲಿ ವಿಶೇಷವಾಗಿ ಪ್ರತಿನಿತ್ಯ ಹೇಳಬೇಕಾದ ಮಂತ್ರ

ಗೋವರ್ಧನಧರಂ ವಂದೇ
ಗೋಪಾಲಂ ಗೋಪರೂಪಿಣಂ।
ಗೋಕುಲೋತ್ಸವಮೀಶಾನಂ
ಗೋವಿಂದಂ ಗೋಪಿಕಾಪ್ರಿಯಂ॥

ಗೋವರ್ಧನವನ್ನು ಧರಿಸಿದ ಗೋಪ ರೂಪದ ಗೋಕುಲಕ್ಕೆ ಹಬ್ಬವೆನ್ನಿಸಿದ, ಗೋಪಿಯರಿಗೆ ಪ್ರಿಯನಾದ, ಸರ್ವೇಶನಾದ ವೇದ ವೇದ್ಯನಾದ ಶ್ರೀಗೋಪಾಲಕೃಷ್ಣನಿಗೆ ನಮಸ್ಕರಿಸುವೆನು.



ಅಪೂಪದಾನ ಮಂತ್ರ (ಸಾರಾರ್ಥ)

ವಿಷ್ಣುರೂಪಿಯಾದ ಸೂರ್ಯನು ಈ ದಾನದಿಂದ ಪಾಪನಾಶ ಮಾಡಲಿ, ನಾರಾಯಣನು ಪುತ್ರ ಸಂಪತ್ತನ್ನು ವೃದ್ಧಿಸಲಿ ಗದಾ, ಚಕ್ರ, ಶಂಖಧಾರಿ ವಿಷ್ಣು ಪ್ರಸನ್ನನಾಗಲಿ ಕಲಾತ್ಮನಾದ ಪರಮಾತ್ಮನಿಗೆ ನಮಸ್ಕಾರ ಈ ದಾನವು ಪೃಥ್ವಿ ದಾನಕ್ಕೆ ಸಮಾನ ಪುರುಷೋತ್ತಮನೇ ಸ್ವೀಕರಿಸು.

ಅಧಿಕಮಾಸದಲ್ಲಿ ನಿತ್ಯ ಉಪಾಸನೆ

ದೀಪದಾನ : ಸಾವಿರಾರು ಗ್ರಹಣ ವ್ಯತಿಪಾತಗಳಿಗಿಂತಲೂ ಮಹತ್ತರ ಫಲ.

ಉಪವಾಸ/ ಏಕಭುಕ್ತ/ ನಕ್ತಭೋಜನ : ಒಂದು ದಿನವಾದರೂ ಆಚರಿಸಿದರೆ ಅನಂತ ಪಾಪ ವಿಮೋಚನೆ.

ಏಕಾನ್ನವ್ರತ : ಸಾರೂಪ್ಯ ಮುಕ್ತಿ.

ಶ್ರೀಮದ್ಭಾಗವತ ಶ್ರವಣ : ಅಸೀಮ ಪುಣ್ಯ.

ಶ್ರೀಮದ್ಭಾಗವತ ದಾನ : ಶಕ್ತನಾದವನು ವೈಷ್ಣವ ಬ್ರಾಹ್ಮಣನಿಗೆ ದಾನ ಮಾಡಬೇಕು.

ಅಧಿಕಮಾಸದಲ್ಲಿ ನಿಷಿದ್ಧ ಕಾರ್ಯಗಳು : ವಿವಾಹ, ಉಪನಯನ, ಗೃಹಪ್ರವೇಶ, ಮಹಾ ದಾನಗಳು, ಕಾಮ್ಯ ವ್ರತಗಳು, ತೀರ್ಥಯಾತ್ರೆ, ಕ್ಷೌರ ಪಿತೃಕಾರ್ಯಗಳು - ಇವುಗಳನ್ನು ಅಧಿಕ ಮಾಸದಲ್ಲಿ ಮಾಡಬಾರದು. ಶುದ್ಧಮಾಸದಲ್ಲಿ ಮಾತ್ರ ಅವುಗಳನ್ನು ನೆರವೇರಿಸಬೇಕು.

ಸ್ತ್ರೀಯರಿಗೂ ಅಧಿಕಮಾಸ ವ್ರತ : ಸ್ನಾನ, ದಾನ, ಅರ್ಚನೆ ಮಾಡಿದ ಸ್ತ್ರೀಯರು ಸೌಭಾಗ್ಯವತಿಗಳು. ದಾರಿದ್ರ್ಯ, ವೈಧವ್ಯ, ಪುತ್ರ ಶೋಕಗಳಿಂದ ಮುಕ್ತಿಯ ಆಶೀರ್ವಾದ.

ಅಧಿಕಮಾಸದ ವಿಶೇಷ ಪರ್ವಕಾಲಗಳು : ವೈಧೃತಿ, ವ್ಯತಿಪಾತ ಯೋಗ ಅಮಾವಾಸ್ಯೆ ಹುಣ್ಣಿಮೆ, ದ್ವಾದಶಿ (ಉಭಯ ಪಕ್ಷದ ದ್ವಾದಶಿಗಳು ಮಹಾವಿಶೇಷ)

ಹರಿದಾಸರ ಕಾವ್ಯದಲ್ಲಿ ಪುರುಷೋತ್ತಮ



ಶ್ರೀಪಾದರಾಜರು, ಶ್ರೀವಾದಿರಾಜರು, ಶ್ರೀಪುರಂದರದಾಸರು, ಶ್ರೀಕನಕದಾಸರು, ಶ್ರೀವಿಜಯದಾಸರು ಹರಿದಾಸರು ಕಂಡ ಪುರುಷೋತ್ತಮ ತತ್ತ್ವ ಈ ಮಾಸದ ಆತ್ಮ.

ಪುರುಷೋತ್ತಮ ಮುರಾರೇ ಬಾರೋ
ಪುರಾಣಪುರುಷ ದೊರೆ

- ಶ್ರೀಪಾದರಾಜರು

ಪಾರಿಜಾತದ ಹೂವೆ ನಾರಿಗೆ
ತಂದನೇ ಧೀರದಾನವರ ಗೆಲಿದಾನೇ।
ಧೀರದಾನವರ ಗೆಲಿದಾನೇ ನರಹರಿ
ಪುರುಷೋತ್ತಮ ನಮ್ಮ ಮನೆ ದೈವಸುಬ್ಬಿ

- ಶ್ರೀ ವಾದಿರಾಜರ ಸ್ವಾಮಿಗಳು

ಪುರುಷೋತ್ತಮಗಾರು ಸಾಣಿ ಪರಬ್ರಹ್ಮ ಸ್ವರೂಪಿಯೇ ನಿನಗಾರೋ ಪೋಣಿ ಮಹಿಮೆ ಕೇಳಿದರೊಂದು ಕೋಣಿ ನಿನ್ನ ಹೃದಯದಿ ಬ್ರಹ್ಮಾಂಡ ಕಂಡ ಕಿರೀಣಿ ॥

ಪುರುಷೋತ್ತಮನ ಪುರಾಣ ಪುರೋಷೋತ್ತಮನೆಂದು ತಿಳಿಯಿರೋ ನಿತ್ಯನೆಮ ಎಂಬೋದಿಲ್ಲ - ಮತ್ತೆ ದಾನಧರ್ಮವಿಲ್ಲ।



ವ್ಯರ್ಥವಾಗಿ ಕೆಡಲಿಬೇಡಿ ಪುರುಷೋತ್ತಮನ್ನ ನೆನೆ
ಯಿರೋ ಪುರುಷೋತ್ತಮನಿಗೆ ಪರಿಮಳ ಕುಸುಮಗಳು ರಾಮ
ಗೋವಿಂದ

- ಶ್ರೀ ಪುರಂದರದಾಸರು

ಹರುಷದಿಂದ ನಿನ್ನ ನಾಮ ಸ್ಮರಿಸುವಂತೆ ಮಾಡು
ಪ್ರೇಮ ಇರಿಸು ನಿನ್ನ ಚರಣದಲ್ಲಿ ಪುರುಷೋತ್ತಮ

- ಶ್ರೀ ಕನಕದಾಸರು

ಪುಣ್ಯಕ್ಷೇತ್ರದಲ್ಲಿ ಪುರುಷೋತ್ತಮನಿದ್ದಾನೆ
ರಾಮರಾಮ
ಪುಣ್ಯಕ್ಷೇತ್ರವ ಕಂಡೆ ಪುರುಷೋತ್ತಮನ
ದಯದಿ ರಾಮರಾಮ -

- ಶ್ರೀ ವಿಜಯದಾಸರು

ಕ್ಷರಾಕ್ಷರದೂಳಗೆ ಪರಮ ಉತ್ತಮವಾದ
ಕರಿರಾಜವರದ ಕವಿಗೇಯ
ಕರಿರಾಜವರದ ಕವಿಗೇಯನಾದ
ಶ್ರಪುರುಷೋತ್ತಮನ್ನ ಮುನ್ನ ಬಲಗೊಂಬೆ ಕೋಲೆ ॥

ಅಧಿಕಮಾಸವು ನಿಷೇಧದ ಮಾಸವಲ್ಲ ಆತ್ಮ ಶುದ್ಧಿಯ ಮಹಾಪರ್ವ ದೀಪ, ದಾನ, ನಾಮಸ್ಮರಣೆ ಭಾಗವತ ಶ್ರವಣ ದಿಂದ ಪುರುಷೋತ್ತಮನ ಅನುಗ್ರಹವನ್ನು ಪಡೆಯುವ ಸುವರ್ಣಾವಕಾಶ.

ತಿರುಮಲೆಯಲ್ಲಿ ನೋಡುವ ಪ್ರದೇಶಗಳು

ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾತೋರಣ. ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

ತಿ.ತಿ.ದೇ ಉದ್ಯಾನವನಗಳು :


ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನ ವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿ ವೃದ್ಧಿಯಾಗುತ್ತಿವೆ.

ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾಮಂಡಪ.

ಶ್ರೀವೆಂಕಟೇಶ್ವರ ಧ್ಯಾನಮಂದಿರ (ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಲಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.



ಕೂರ್ಮ ಜಯಂತಿ

-ಶ್ರೀಮತಿ. ಮಾಧುರಿ ದೇಶಪಾಂಡೆ

ಕೂರ್ಮಾವತಾರವು ಶ್ರೀಮನ್ನಾರಾಯಣನ ದಶಾವತಾರಗಳಲ್ಲಿ ಎರಡನೆಯ ಅವತಾರವಾಗಿದೆ. ಕೃತಯುಗದಲ್ಲಿ ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ ಅವತಾರಗಳಾದರೆ ತ್ರೇತಾಯುಗದಲ್ಲಿ ರಾಮ, ದ್ವಾಪರದಲ್ಲಿ ಕೃಷ್ಣ ಅವತಾರಗಳಾದರೆ ಕಲಿಯುಗದಲ್ಲಿ ಬೌದ್ಧ ಕಲ್ಕಿ ಅವತಾರಗಳು ಆಗುತ್ತವೆ. ಕೂರ್ಮಾವತಾರವು ವೈವಸ್ವತ ಮನ್ವಂತರದಲ್ಲಿ ಎರಡು ಬಾರಿ ನಡೆದಿದೆ ಎಂದು ಪುರಾಣಗಳು ಹೇಳುತ್ತವೆ. ಮೊದಲನೆಯ ಬಾರಿಗೆ ವೈಶಾಖ ಶುಕ್ಲ/ಕೃಷ್ಣ ದ್ವಿತೀಯಾದಂದು ಆದರೆ ಇನ್ನೊಂದು ಬಾರಿಗೆ ಜೇಷ್ಠ ಶುಕ್ಲ ದ್ವಾದಶಿ ನಡೆದಿದೆ ಎಂದು ಹೇಳುತ್ತಾರೆ.

ಭಗವಂತನ ಪ್ರತಿ ಅವತಾರದ ಹಿಂದೆ ಮುಖ್ಯ ಕಾರಣ "ದುಷ್ಟ ಶಿಕ್ಷಣ ಶಿಷ್ಟ ರಕ್ಷಣೆ" ಆಗಿರುತ್ತದೆ. ದೇವಾಸುರರ ಮಧ್ಯ ಅನಾದಿ ಕಾಲದಿಂದಲೂ ಯುದ್ಧಗಳು ನಡೆಯುತ್ತಲೇ ಇರುತ್ತದೆ. ಕೃತಯುಗದಲ್ಲಿ ಒಮ್ಮೆ ದೂರ್ವಾಸ ಮುನಿಗಳು ದೇವೇಂದ್ರನಿಗೆ ಆಶೀರ್ವಾದ ಪೂರ್ವಕವಾಗಿ ನಿರ್ಮಾಲ್ಯ ಪುಷ್ಪವನ್ನು ನೀಡುತ್ತಾರೆ. ಆಗ ದೇವೇಂದ್ರನು ಮುನಿಗಳು ಕೊಟ್ಟ ಪುಷ್ಪವನ್ನು ತನ್ನ ಆನೆಯ ಮೇಲೆ ಇಡುತ್ತಾನೆ. ಆನೆಯು ಆ ಪುಷ್ಪವನ್ನು ಕಾಲಿನಿಂದ ಒದೆಯುತ್ತದೆ. ಇದರಿಂದ ಕೋಪಗೊಂಡ ಋಷಿಗಳು ದೇವೇಂದ್ರನಿಗೆ ಅಧಿಕಾರ ಹಾಗೂ ಸಂಪತ್ತಿನಿಂದ ವಂಚಿತನಾಗು ಎಂದು ಶಪಿಸುತ್ತಾರೆ. ಅದರಿಂದ ದೇವೇಂದ್ರನು ದೇವಾಸುರ ಸಂಗ್ರಾಮದಲ್ಲಿ ಸೋಲುತ್ತಾನೆ. ಪದೇ ಪದೇ ಆಗುವ ಯುದ್ಧಗಳಿಂದ ಎರಡೂ ಪಕ್ಷಗಳ ಸೈನಿಕರು ಗಾಯಾಳುಗಳಾಗುವುದು ಸಾಯುವುದನ್ನು ತಪ್ಪಿಸಬೇಕೆಂಬ ಪ್ರಾರ್ಥನೆಯೊಂದಿಗೆ ವೈಕುಂಠಕ್ಕೆ ಹೋದಾಗ ಪರಮಾತ್ಮನು ಅಮೃತವನ್ನು ಕುಡಿಯಬೇಕೆಂಬ ಸಲಹೆಯನ್ನು ನೀಡುತ್ತಾನೆ. ಆಗ ದೇವತೆಗಳು ಅಸುರರು ಮಂದರ ಪರ್ವತವನ್ನು ಮಧ್ಯದಲ್ಲಿ ನಿಲ್ಲಿಸಿ ಸಮುದ್ರವನ್ನು ಕಡೆಯಲು ವಾಸುಕಿಯನ್ನು ಹಗ್ಗವನ್ನಾಗಿ ಮಾಡಿಕೊಂಡು ಅಮೃತವನ್ನು ಪಡೆಯಲು ಸಮುದ್ರ ಮಂಥನವನ್ನು ಆರಂಭಿಸುತ್ತಾರೆ. ಆದರೆ ಮಂದರ ಪರ್ವತ ಸ್ಥಿರವಾಗಿ ನಿಲ್ಲಲು ಆಗದೇ ಮುಳುಗಲು ಆರಂಭಿಸುತ್ತದೆ. ಆ ಸಂದರ್ಭದಲ್ಲಿ ಎಲ್ಲರೂ ಸೇರಿ ಶ್ರೀಮನ್ನಾರಾಯಣನನ್ನು ಪ್ರಾರ್ಥಿಸಿದಾಗ ದೇವರು ಲೋಕ ಕಲ್ಯಾಣಕ್ಕಾಗಿ ಕೂರ್ಮ ರೂಪವನ್ನು ಧರಿಸಿ ತನ್ನ ಬೆನ್ನಿನ ಮೇಲೆ ಮಂದರ ಪರ್ವತವನ್ನು ಹೊತ್ತು ಸಮುದ್ರ ಮಂಥನವನ್ನು ಮಾಡಿ ಅಮೃತವನ್ನು ಪಡೆಯಲು ಸಹಾಯ ಮಾಡುತ್ತಾನೆ. ಕೂರ್ಮಾವತಾರದಲ್ಲಿ ಭಗವಂತನು ನೂರು ಯೋಜನಗಳಷ್ಟು ದೊಡ್ಡದಾದ ಆಕಾರದಿಂದ ನಿಂತು ಮಂದರ ಪರ್ವತದ ಭಾರವನ್ನು ಹೊತ್ತು ಭಕ್ತರನ್ನು ಉದ್ಧರಿಸುತ್ತಾನೆ.

ಸಮುದ್ರ ಮಂಥನದಲ್ಲಿ ಅನೇಕ ಪದಾರ್ಥಗಳು ಬಂದವು. ಸಮುದ್ರ ಮಂಥನ ಮಾಡುವಾಗ ವಾಸುಕಿಯ ಬಾಯಿಯಿಂದ ಬರುತ್ತಿದ್ದ ಹಾಲಾಹಲ(ವಿಷ)ವನ್ನು ರುದ್ರ ದೇವರು ಸೇವಿಸಿ ನೀಲಕಂಠ ಎಂದೆನಿಸಿಕೊಂಡರು. ಸಮುದ್ರ ಮಥನದಲ್ಲಿ ಲಕ್ಷ್ಮಿ ದೇವಿಯು ಹುಟ್ಟುತ್ತಾಳೆ. ಅವಳನ್ನು ಶ್ರೀಮನ್ನಾರಾಯಣನು ವಿವಾಹವಾಗುತ್ತಾನೆ. ನಂತರ ಅಪ್ಸರಾ ಸ್ತ್ರೀಯರು ಮತ್ತು ಗಂಧರ್ವರು ಬರುತ್ತಾರೆ. ವಾರುಣಿ, ಕಾಮಧೇನು, ಐರಾವತ, ಉಚ್ಚೈಶ್ರವ ಹಯ ಇದನ್ನು ಬಲಿ ಚಕ್ರವರ್ತಿತೆಗೆದುಕೊಳ್ಳುತ್ತಾನೆ. ಕೌಸ್ತುಭಮಣಿ ಅದನ್ನು ಪರಮಾತ್ಮನಿಗೆ ಕೊಡುತ್ತಾರೆ. ಕಲ್ಪವೃಕ್ಷ ಶಾರಂಗ ಎಂಬ ಬಿಲ್ಲು ಇದನ್ನು ಕೂಡ ಪರಮಾತ್ಮನಿಗೆ ಅರ್ಪಿಸುತ್ತಾರೆ. ಚಂದ್ರ, ಶಂಖವನ್ನು ಪರಮಾತ್ಮನಿಗೆ ಕೊಡುತ್ತಾರೆ. ಜ್ಯೇಷ್ಠಾದೇವಿ ಬರುತ್ತಾಳೆ. ಅಮೂಲ್ಯವಾದ ಕೊಡೆ ಬರುತ್ತದೆ ಅದನ್ನು ವರುಣನು ದೈವಿಕ ಕರಣ ಕುಂಡಲಗಳು ಬರುತ್ತವೆ ಅವುಗಳನ್ನು ಅದಿತಿ ದೇವಿಗೆ ಇಂದ್ರನು ಕೊಡುತ್ತಾನೆ. ಕಡೆಯದಾಗಿ ಧನ್ವಂತ್ರಿ ದೇವತೆಗಳ ವೈದ್ಯ ಅಮೃತದ

ಕಳಶದೊಂದಿಗೆ ಬರುತ್ತಾನೆ. ಈ ರೀತಿಯಲ್ಲಿ ಕೂರ್ಮಾವತಾರ ವಾಯಿತು. ಪ್ರತಿ ಯುಗದಲ್ಲೂ ಒಂದೊಂದು ವಿಶೇಷ ಅವತಾರ ದಲ್ಲಿ ಅವತರಿಸಿದ ದೇವರ ಅವತಾರಕ್ಕೆ ವಿಶೇಷ ಕಾರಣಗಳಿವೆ. ಅದೇ ರೀತಿ ಪ್ರತಿ ಅವತಾರದಿಂದ ದೇವರು ನಮಗೆ ಒಂದಿಲ್ಲ ಒಂದು ಸಂದೇಶವನ್ನು ನೀಡಿದ್ದಾನೆ. ಅವತಾರದ ಉದ್ದೇಶ ಮತ್ತು ಸಂದೇಶಗಳನ್ನು ತಿಳಿದು ನಮ್ಮ ಜೀವನವನ್ನು ನಾವು ಹಸನಾಗಿ ಮಾಡಿಕೊಳ್ಳಬೇಕು.

ನಮ್ಮ ಜೀವನವನ್ನು ಸಮುದ್ರಮಂಥನಕ್ಕೂ ನಮ್ಮ ಮನಸ್ಸನ್ನು ಸುರ ಮತ್ತು ಅಸುರರಿಗೂ ಹೋಲಿಸಿಕೊಂಡು ನಾವು ಜೀವನದಲ್ಲಿ ಮುನ್ನಡೆಯಬೇಕು. ನಮ್ಮ ಮನಸ್ಸಿನ ಕೆಟ್ಟ ಭಾವನೆ ಗಳನ್ನು ಅಸುರರಿಗೂ ಯೋಗ್ಯ ವಿಚಾರಗಳನ್ನು ಸುರರಿಗೂ ಹೋಲಿಸಿಕೊಂಡು ಹೋಗಬೇಕು. ನಾವು ಕೆಟ್ಟ ಕರ್ಮ ಮಾಡಿ ದಾಗ ನಮಗೆ ಕೆಟ್ಟ ಫಲಗಳು ಮತ್ತು ಉತ್ತಮ ಕೆಲಸಗಳನ್ನು ಮಾಡಿದಾಗ ಉತ್ತಮ ಫಲಗಳನ್ನು ಭಗವಂತ ನೀಡುತ್ತಾನೆ.

ಇಲ್ಲಿ ಕೂರ್ಮಾವತಾರದಿಂದ ನಾವು ಕಲಿಯಬೇಕಾದ ಅಂಶಗಳು ಬಹಳಷ್ಟು ಇದೆ. ಕೂರ್ಮದ ಗತಿ ನಿಧಾನ ಮತ್ತು ಅದರ ಗಾತ್ರ ದೊಡ್ಡದು. ನಮ್ಮ ಮನಸ್ಸನ್ನು ವಿಶಾಲವಾಗಿಟ್ಟು ಕೊಂಡು ನಮ್ಮ ದಿನ ನಿತ್ಯದ ಜೀವನದಲ್ಲಿ ಯಾವುದೇ ಕೆಲಸಕ್ಕೆ ಅಥವಾ ನಿರ್ಣಯಕ್ಕೆ ನಿಧಾನವಾಗಿ ಯೋಚಿಸಿ ಮುಂದಿನ ಹೆಜ್ಜೆ ಇಡಬೇಕು. ಕೂರ್ಮದಿಂದ ನಾವು ಕಲಿಯಬೇಕಾದ ಮತ್ತೊಂದು ದೊಡ್ಡ ಪಾಠವೆಂದರೆ ಆಮೆಗಳಿಗೆ ರಕ್ಷಾ ಕವಚವು ಮೈ ಮೇಲೆ ಇರುತ್ತದೆ. ಯಾವುದೇ ಅಪತ್ತು ಬಂದಾಗ ಅದು ತನ್ನ ದೇಹವನ್ನು ಸ್ವಲ್ಪ ಸಣ್ಣದು ಮಾಡಿ ಆ ಕವಚದೊಳಗೆ ಅವಿತು ಕುಳಿತು ಬಿಡು ತ್ತದೆ. ನಾವು ಕೂಡ ನಮ್ಮ ಇಂದ್ರಿಯಗಳ ಮನದ ಸಂಬಂಧಗಳ ಗೊಂದಲದಲ್ಲಿ ಸಿಲುಕಿದಾಗ ಇಂದ್ರಿಯಗಳ ಅಖಿಲಾಷೆಗಳನ್ನು ಒಳಕುಳಿತು ಭಗವಂತನ ಕುರಿತು ಭಜಿಸಬೇಕು. ಭಗವಂತನ ಕೂರ್ಮಾವತಾರದ ಪ್ರಮುಖ ಸಂದೇಶವೆಂದರೆ ಪರಮಾತ್ಮನಿಗೆ ಸಮುದ್ರಮಂಥನದಿಂದ ಆಗಲಿ ಅಮೃತಪಾನದಿಂದ ಆಗಲಿ ಯಾವುದೇ ಪ್ರಯೋಜನವು ಇದ್ದಿಲ್ಲ. ಮನುಕುಲದ ರಕ್ಷಣೆಗೆ ದೇವ ಹಾಗೂ ದೈತ್ಯರ ಯುದ್ಧಗಳಿಂದ ಭೂಮಿಯಲ್ಲಿ ಆಗುತ್ತಿದ್ದ ಹಾನಿಯನ್ನು ತಡೆಗಟ್ಟಲು ಭಕ್ತರ ಪ್ರಾರ್ಥನೆಗೆ ಸ್ಪಂದಿಸಿ ಕೂರ್ಮಾ ವತಾರವನ್ನು ತಳೆಯುತ್ತಾನೆ.

ತಿರುಪತಿ, ಶ್ರೀ ಗೋವಿಂದರಾಜ ಸ್ವಾಮಿಯವರ ಬ್ರಹ್ಮೋತ್ಸವಗಳು

22-05-2026 ರಿಂದ

31-05-2026 ರವರೆಗೆ



22-05-2026
ಶುಕ್ರವಾರ
ಹಗಲು :

ರಾತ್ರಿ :
ಸೇನಾಧಿಪತಿ ಉತ್ಸವ, ಅಂಕುರಾರ್ಪಣೆ

23-05-2026
ಶನಿವಾರ
ಹಗಲು :
ತಿರುಚ್ಚಿ ಉತ್ಸವ, ಧ್ವಜಾರೋಹಣ
ರಾತ್ರಿ :
ದೊಡ್ಡಶೇಷವಾಹನ

24-05-2026
ಭಾನುವಾರ
ಹಗಲು :
ಚಿಕ್ಕಶೇಷವಾಹನ
ರಾತ್ರಿ :
ಹಂಸವಾಹನ

25-05-2026
ಸೋಮವಾರ
ಹಗಲು :
ಸಿಂಹವಾಹನ
ರಾತ್ರಿ :
ಮುತ್ತಿನಚಪ್ಪರವಾಹನ

26-05-2026
ಮಂಗಳವಾರ
ಹಗಲು :
ಕಲ್ಪವೃಕ್ಷವಾಹನ
ರಾತ್ರಿ :
ಸರ್ವಭೂಪಾಲವಾಹನ

27-05-2026
ಬುಧವಾರ
ಹಗಲು :
ಪಲ್ಲಕಿಯಲ್ಲಿ ಮೋಹಿನಿ ಅವತಾರೋತ್ಸವ
ರಾತ್ರಿ :
ಗರುಡವಾಹನ

28-05-2026
ಗುರುವಾರ
ಹಗಲು :
ಹನುಮದ್ವಾಹನ, ಸಾ॥ ವಸಂತೋತ್ಸವ
ರಾತ್ರಿ :
ಗಜವಾಹನ

29-05-2026
ಶುಕ್ರವಾರ
ಹಗಲು :
ಸೂರ್ಯಪ್ರಭವಾಹನ
ರಾತ್ರಿ :
ಚಂದ್ರಪ್ರಭವಾಹನ

30-05-2026
ಶನಿವಾರ
ಹಗಲು :
ರಥೋತ್ಸವ
ರಾತ್ರಿ :
ಅಶ್ವವಾಹನ

31-05-2026 ಭಾನುವಾರ
ಹಗಲು :
ಪಲ್ಲಕಿ ಉತ್ಸವ, ತೀರ್ಥವಾರಿ, ಅವಭೃಥ, ಚಕ್ರಸ್ನಾನ
ರಾತ್ರಿ :
ತಿರುಚ್ಚಿ ಉತ್ಸವ, ಧ್ವಜಾವರೋಹಣ

ತಿರುಮಲೆ ತಿರುಪತಿ ದೇವಸ್ಥಾನಗಳು, ತಿರುಪತಿ

ಸ್ವಾಮಿಯವರ ಆರ್ಜಿತ ಸೇವೆಗಳು – ತಿರುಮಲೆ

ಆರ್ಜಿತ ಸೇವೆಗಳು/ ಉತ್ಸವಗಳು

ಸಂ.	ಸೇವೆ /ಉತ್ಸವದ ಹೆಸರು	ಸೇವೆ ಸಮಯ	ಟಿಕೆಟ್ಟು ಬೆಲೆ	ಪ್ರವೇಶ
	ನಿತ್ಯ ಸೇವೆ			
1.	ಸುಪ್ರಭಾತ	ಬೆ. 3.00 ಗಂ॥	120.00	01
2.	ತೋಮಾಲ ಸೇವೆ (ಮಂಗಳ, ಬುಧ, ಗುರು)	ಬೆ. 3.30 ಗಂ॥	220.00	01
3.	ಅರ್ಚನೆ (ಮಂಗಳ, ಬುಧ, ಗುರು)	ಬೆ. 4.30 ಗಂ॥	220.00	01
	ನಿತ್ಯ ಉತ್ಸವಗಳು			
4.	ಕಲ್ಯಾಣೋತ್ಸವ	ಮ. 12.00 ಗಂ॥	1,000.00	02
5.	ಊಂಜಲ್ ಸೇವೆ	ಮ. 2.00 ಗಂ॥	500.00	01
6.	ಆರ್ಜಿತ ಬ್ರಹ್ಮೋತ್ಸವ	ಮ. 3.00 ಗಂ॥	500.00	01
7.	ಸಹಸ್ರದೀಪಾಲಂಕರಣ ಸೇವೆ	ಸಾ. 5.00 ಗಂ॥	500.00	01
	ವಾರದ ಸೇವೆಗಳು			
8.	ಅಷ್ಟದಳ ಪಾದಪದ್ಮಾರಾಧನೆ ಸೇವೆ (ಮಂಗಳವಾರ)	ಬೆ. 9.30 ಗಂ॥	1,250.00	01
9.	ತಿರುಪ್ಪಾವಡ ಸೇವೆ (ಗುರುವಾರ)	ಬೆ. 7.00 ಗಂ॥	850.00	01
10.	ಅಭಿಷೇಕ ಸೇವೆ (ಶುಕ್ರವಾರ)	ಬೆ. 4.30 ಗಂ॥	750.00	01
	ವಾರ್ಷಿಕ ಸೇವೆಗಳು			
11.	ತೆಪ್ಪೋತ್ಸವ (ಫೆಬ್ರವರಿ/ ಮಾರ್ಚ್)	ರಾ. 7.00 ಗಂ॥	500.00	01
12.	ವಸಂತೋತ್ಸವ (ಮಾರ್ಚ್/ ಏಪ್ರಿಲ್)	ಮ. 2.00 ಗಂ॥	300.00	01
13.	ಜ್ಯೇಷ್ಠಾಭಿಷೇಕ (ಅಭಿದೇಯಕ ಅಭಿಷೇಕ) (ಜೂನ್)	ಬೆ. 9.00 ಗಂ॥	400.00	01
14.	ಪವಿತ್ರೋತ್ಸವಗಳು (ಆಗಸ್ಟ್)	ಬೆ. 9.00 ಗಂ॥	2,500.00	01
15.	ಪುಷ್ಪಯಾಗ (ನವೆಂಬರ್)	ಬೆ. 9.00 ಗಂ॥	700.00	01

Toll free : 155257

whatsapp feedback : 9399399399

e-mail :helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಟಿಕ್ಕೆಟ್‌ಗಳನ್ನು ಆನ್‌ಲೈನ್ ನಲ್ಲಿ ಮಾತ್ರವೇ ಬುಕ್ ಮಾಡಿಕೊಳ್ಳಬೇಕು.ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ : ttdevasthanams.ap.gov.in ನು ಸಂಪ್ರದಿಸಬೇಕು.

ಗಮನಿಸಿ : ಸೇವೆಗಳು ಮತ್ತು ಬೆಲೆಗಳು ಯಾವುದೇ ಸಂದರ್ಭದಲ್ಲಿಯಾದರೂ ಬದಲಾವಣೆಗಳು ಆಗುವ ಸಾಧ್ಯತೆ ಇದೆ.

ಅಧಿಕ ಫಲ ನೀಡುವ ಅಧಿಕ ಜ್ಯೇಷ್ಠ ಹುಣ್ಣಿಮೆ

-ಶ್ರೀಮತಿ ವಾರುಣಿ ಹೊನ್ನಾಳಿ
99160 22982

ಹುಣ್ಣಿಮೆ-ಈ ಹೆಸರಿನಲ್ಲಿ ಒಂದು ದೈವಿಕ ಶಕ್ತಿ ಇದೆ. ಪೌರ್ಣಮಿ ಎಂಬ ನಾಮವೇ ಒಂದು ಪ್ರಾಕೃತಿಕ ಚೇತನ ಶಕ್ತಿ. ವಿಶಾಲ ಬಾನಂಗಳದ ದಿಗಂತದಲ್ಲಿ ಪೂರ್ಣ ಚಂದಿರನನ್ನು ಕಣ್ಮನಗಳಲ್ಲಿ ತುಂಬಿಕೊಳ್ಳುವುದೇ ಒಂದು ಚೇತೋಹಾರಿ ಪ್ರಕ್ರಿಯೆ. ಯೋಗಿಗಳು ಇದನ್ನು ಹುಣ್ಣಿಮೆ ಧ್ಯಾನ ಎನ್ನುತ್ತಾರೆ.

ಶಾಂತ, ಸುಂದರ, ಶುಭ್ರನಾಗಿ ಹೊಳೆಯುವ ಚಂದಮಾಮ - ಎಲ್ಲ ವಯೋಮಾನದವರ ಮನೋಹರ. ಚಿತ್ತಾಪಹಾರಕ. ಚಿತ್ತ ಚೋರ. ಇವನಂಥ ಸುಂದರ ಆಕಾಶಕಾಯ ಬೇರೊಂದಿಲ್ಲ. ಅತ್ಯದ್ಭುತ, ಅವರ್ಣನೀಯ ಚಂದ್ರಮವನ್ನು ತಿಂಗಳಿಗೆ ಒಮ್ಮೆ ಮಾತ್ರ ಸಂಪೂರ್ಣವಾಗಿ ಮನದುಂಬಿಕೊಳ್ಳಲು ಸಾಧ್ಯ. ಅದನ್ನೇ ಹುಣ್ಣಿಮೆ ಎಂದು ಹಿರಿಯರು ಕರೆದರು. ಹಾಲಿನಂತಹ ಬೆಳದಿಂಗಳ ಚೆಲ್ಲುವ ಚಂದ್ರಮಾ ಎಂದು ಕವಿಗಳು ವರ್ಣಿಸಿದ್ದಾರೆ. ಹುಣ್ಣಿಮೆ ದಿನದ ಪೂರ್ಣ ಚಂದ್ರನಿಂದ ನಮಗೆ ಮಾನಸಿಕ ಶಾಂತಿ, ಸಮತೋಲನ ಮತ್ತು ಸಕಾರಾತ್ಮಕತೆ ಬರುತ್ತದೆ. ಅಂದು ಸಮುದ್ರದ ಉಬ್ಬರವಿಳಿತಗಳೂ ಹೆಚ್ಚಾಗಿರುತ್ತದೆ.

ಒಂದು ಸಂವತ್ಸರದಲ್ಲಿ (ವರ್ಷದಲ್ಲಿ) ಒಟ್ಟು 12 ಹುಣ್ಣಿಮೆ ಬರುತ್ತದೆ. ಒಂದೊಂದು ಹುಣ್ಣಿಮೆಗೂ ಒಂದೊಂದು ವಿಶೇಷತೆ ಇದೆ. ಕೂಡಿ ಉಣ್ಣು, ಕೂಡಿ ಮಾತನಾಡು, ಕೂಡಿ ಬಾಳು ತತ್ವ ಆಧರಿಸಿ ಗ್ರಾಮೀಣ ಜನರು ಮತ್ತು ಸಂಪ್ರದಾಯಸ್ಥರು ಹುಣ್ಣಿಮೆ ದಿನಗಳಂದು ಬೆಳದಿಂಗಳ ಊಟ, ಬುತ್ತಿ ಭೋಜನ, ಹಿರಿಯರಿಂದ ಕೈತುತ್ತು, ವಿಹಾರ, ಹೊರ ಪ್ರವಾಸ ಕಾರ್ಯಕ್ರಮ ಏರ್ಪಡಿಸುವ ಪರಂಪರೆಯೇ ಇದೆ.

ಅಂದು ಸತ್ಯನಾರಾಯಣ ವ್ರತ, ಲಕುಮಿ ಪೂಜೆ, ಚಂದ್ರ ಪೂಜೆ, ರುದ್ರದೇವರಿಗೆ ಅಭಿಷೇಕ ಮಾಡಲಾಗುತ್ತದೆ. ಪವಿತ್ರ ನದಿಗಳಲ್ಲಿ ಸ್ನಾನ ಮಾಡಿ ಸುವಸ್ತು ದಾನ ಮಾಡುವುದು ದೋಷಗಳ ನಿವಾರಕ, ಪುಣ್ಯ ಪ್ರದ ಎಂದು ನಂಬಲಾಗಿದೆ. ಮಾನಸಿಕ ಶಾಂತಿ ಮತ್ತು ಆಧ್ಯಾತ್ಮಿಕ ಪ್ರಗತಿಗಾಗಿ ಉಪವಾಸ ಮತ್ತು ದೇವತಾರಾಧನೆ ಮಾಡುವ ಪದ್ಧತಿ ಇದೆ. ಆಧ್ಯಾತ್ಮ ಸಾಧಕರು ಹುಣ್ಣಿಮೆ ದಿನ ಜಪ, ತಪ,ಅನುಷ್ಠಾನ,ಧ್ಯಾನ,ಸತ್ಸಂಗ ಮಾಡಿದರೆ ಮಠ-ಮಂದಿರಗಳಲ್ಲಿ ದೀಪೋತ್ಸವ, ಪ್ರವಚನ ಪಾರಾಯಣ ಇತ್ಯಾದಿಗಳು ಸಂಪನ್ನ ಗೊಳ್ಳುತ್ತವೆ.



ಬದುಕಿನೊಂದಿಗೆ ಬೆರೆತು ಹೋದ ಉತ್ಸಾಹದ ಚಿಲುಮೆಯನ್ನು ಬತ್ತದ ನೆನಪುಗ ಳೊಂದಿಗೆ ಮತ್ತೆ ಮತ್ತೆ ಪುಟಿಯುವಂತೆ ಮಾಡುವತ್ತ, ಜೀವನ್ಮುಖಿಯಾಗಿ ಮಾಡುವತ್ತ ನಮ್ಮನ್ನು ಕರೆದೊಯ್ಯುವ ಬೆಳದಿಂಗಳು (ಹುಣ್ಣಿಮೆ) ನೀಡುವ ಖುಷಿ ಬಣ್ಣಿಸಲು ಅಸದಳ. ಹುಣ್ಣಿಮೆ ಎನ್ನುವುದು ಕೇವಲ ಚಂದ್ರ-ಭೂಮಿಯ ಚಲನೆಯಲ್ಲಾಗುವ ಒಂದು ಹಂತವಾಗಿದ್ದರೂ ಹಿಂದೂ ಸಂಪ್ರದಾಯದಲ್ಲಿ ಆಳವಾದ ಆಧ್ಯಾತ್ಮಿಕ ಮತ್ತು ಧಾರ್ಮಿಕ ಮಹತ್ವವನ್ನು ಹೊಂದಿ ರುವ ಪವಿತ್ರ ದಿನವಾಗಿದೆ. ಈ ಹಾಯುದೋಣಿಯಲ್ಲಿ ಬರುವ ವಿಭಿನ್ನ ಆಚರಣೆಯೇ ಜ್ಯೇಷ್ಠ ಮಾಸದ ಅಧಿಕ ಹುಣ್ಣಿಮೆ ಆಗಿದೆ. ಚೈತ್ರದಿಂದ ಫಾಲ್ಗುಣದವರೆಗೆ ಬರುವ 12 ಮಾಸಗಳಲ್ಲಿ ಕ್ರಮವಾಗಿ 12 ಹುಣ್ಣಿಮೆ ಬರುತ್ತದೆ. ಆದರೆ ಈ ಸಂವತ್ಸರದಲ್ಲಿ ಜ್ಯೇಷ್ಠ ಮಾಸದಲ್ಲಿ ಅಧಿಕ ಹುಣ್ಣಿಮೆಯೂ ಬಂದಿದೆ. (ಮೇ 31 ರಂದು ಆಚರಣೆ) ಎಲ್ಲ ಹುಣ್ಣಿಮೆಗಳಿಗೆ ಇದು ಭೂಷಣ ಪ್ರಾಯವಾಗಿದೆ. ಅಂದು ದೇಶದ ತುಂಬೆಲ್ಲಾ ಹಾಲಿನಂತಹಾ ಬೆಳದಿಂಗಳು ಲಭ್ಯ. ಹಾಗಾ

ಗಿಯೇ ಅಧಿಕ ಹುಣ್ಣಿಮೆ ಅನಂತ ಫಲಗಳನ್ನು ನಮಗೆ ನೀಡಲು ವರದಾನವಾಗಿ ಆಗಮಿಸಿದೆ ಎನ್ನಬಹುದು.

ಖಗೋಳ ಶಾಸ್ತ್ರದ ವ್ಯಾಖ್ಯಾನ ಏನು?

ಹುಣ್ಣಿಮೆ ಎಂದರೆ ಪ್ರತಿ ತಿಂಗಳಿನ ಚಾಂದ್ರ ದಿನ ದಂದು ಪೂರ್ಣ ಚಂದಿರ ಗೋಚರಿಸುವ ದಿನ. ಅಂದರೆ ಮಾಸದ ಮಧ್ಯದ ದಿನ. ಖಗೋಳ ಶಾಸ್ತ್ರದ ವ್ಯಾಖ್ಯಾನದ ಪ್ರಕಾರ ಸೂರ್ಯ, ಭೂಮಿ ಮತ್ತು ಚಂದ್ರನು ಒಂದೇ ರೇಖೆ ಯಲ್ಲಿ ಬಂದಾಗ ಚಂದ್ರನ ಸಂಪೂರ್ಣ ಮುಖವು ಭೂಮಿಗೆ ಗೋಚರವಾಗಿ ಹುಣ್ಣಿಮೆ ಸಂಭವಿಸುತ್ತದೆ. ಪೂರ್ಣಚಂದ್ರ ಮನನ್ನು ನೋಡಿ ಸಮುದ್ರವೇ ಉಕ್ಕೇರುತ್ತದೆ. ಪ್ರತಿ ಮಾಸದ ಎರಡು ಚಾಂದ್ರ ಪಕ್ಷಗಳ ನಡುವಿನ ವಿಭಾಗ ವಿದು. ಇದೇ ಪ್ರಕ್ರಿಯೆ ಅಧಿಕ ಹುಣ್ಣಿಮೆಯಂದೂ ಸಂಭವಿ ಸುತ್ತದೆ. ಯಾವುದೇ ಕೆಲಸದ ಆರಂಭಕ್ಕೆ ಚಾಂದ್ರದಿನ (ಹುಣ್ಣಿಮೆ) ಮಂಗಳಕರ ಎಂದೇ ಪಂಚಾಂಗವು ಪರಿಗಣಿ ಸಿದೆ.

ಶ್ರೀ ಕೃಷ್ಣನಿಗೆ ಸಮರ್ಪಿತವಾದ ದಿನ

ಅಧಿಕ ಜ್ಯೇಷ್ಠ ಮಾಸದ ಹುಣ್ಣಿಮೆಯನ್ನು ಅಧಿಕ ಜ್ಯೇಷ್ಠಾ ಪೂರ್ಣಿಮಾ ಎಂದೂ ಕರೆಯುತ್ತಾರೆ. ಹಿಂದೂ ಕ್ಯಾಲೆಂಡರ್‌ನಲ್ಲಿ 32 ತಿಂಗಳಿಗೊಮ್ಮೆ ಬರುವ ವಿಶೇಷ ಅಧಿಕ ಮಾಸದ ಹುಣ್ಣಿಮೆ ಇದು ಎಂಬುದೇ ಮಹತ್ವ ದ್ದಾಗಿದೆ. ಇದು ಶ್ರೀಕೃಷ್ಣನಿಗೆ ಸಮರ್ಪಿತವಾದ ದಿನವಾ ಗಿದೆ. ಈ ಸಂದರ್ಭದಲ್ಲಿ ಪೂಜೆ, ಧ್ಯಾನ, ದಾನ ಮತ್ತು ಜಪಗಳಿಗೆ ಹೆಚ್ಚಿನ ಫಲವಿದೆ ಎನ್ನುತ್ತಾರೆ ಪ್ರಾಚೀನ ಶಾಸ್ತ್ರ ಕಾರರು.

ಇಲ್ಲಿ ನಾವು ಗಮನಿಸಬೇಕಾದ ಅಂಶ ಎಂದರೆ ಅಧಿಕ ಮಾಸದಲ್ಲಿ ಬರುವ ಹುಣ್ಣಿಮೆಯು ಸಾಮಾನ್ಯ ಜ್ಯೇಷ್ಠ ಹುಣ್ಣಿಮೆಗಿಂತ ಭಿನ್ನವಾಗಿರುತ್ತದೆ. ಅಧಿಕ ಮಾಸದಲ್ಲಿ ಪುರು ಷೋತ್ತಮನೇ ಮಾಸದ ಅಧಿಪತಿ. ಈ ಸಂದರ್ಭ ಧಾರ್ಮಿಕ ಆಚರಣೆಗಳಿಗೇ ಹೆಚ್ಚಿನ ಮಹತ್ವ ಕೊಡಲಾಗಿದೆ. ಹಾಗಾಗಿ ಸಾಮಾನ್ಯವಾದ ಜ್ಯೇಷ್ಠ ಮಾಸದಲ್ಲಿ ಬರುವ ಏಕಾದಶಿ ಉಪವಾಸ ಮತ್ತು ದ್ವಾದಶಿ ಪಾರಣೆ ಹೊರತು ಪಡಿಸಿ ಉಳಿದ ಎಲ್ಲ ಹಬ್ಬ, ಹರಿದಿನ, ಆರಾಧನೆ, ಉತ್ಸವ ಗಳ ಆಚರಣೆ ಈ ಸಂದರ್ಭ ಕೇವಲ ಸಾಂಕೇತಿಕವಾಗಿ ಮಾತ್ರ ನಡೆಯುತ್ತದೆ. ನಿಜ ಜ್ಯೇಷ್ಠದಲ್ಲಿ ಅವೆಲ್ಲವೂ ವಿಜೃಂಭ



ಣೆಯಿಂದ ಆಚರಣೆಗೊಳ್ಳುತ್ತವೆ. ಈ ಅವಧಿಯಲ್ಲಿ ಲೌಕಿಕ ಸುಖಕ್ಕೆ ಸಂಬಂಧಿಸಿದ ಶುಭ ಕಾರ್ಯಗಳನ್ನು ನಿಷೇಧಿಸಲಾಗಿದೆ. ವಿವಾಹಕ್ಕೆ ಇದು ಸೂಕ್ತವಲ್ಲ. ಬ್ರಹ್ಮೋಪದೇಶಕ್ಕೆ ಸೂರ್ಯನ ಬಲವೇ ಮುಖ್ಯ. ಅದೂ ಈ ಮಾಸದಲ್ಲಿ ಇರುವುದಿಲ್ಲ. ಹೊಸ ಮನೆಯ ಪ್ರವೇಶ ಅಥವಾ ಅಲ್ಲಿ ವಾಸ ಮಾಡಲು ರವಿಯು ಚೈತನ್ಯಬೇಕು. ಈ ಮಾಸದಲ್ಲಿ ಸೂರ್ಯಶಕ್ತಿಯ ಚೈತನ್ಯದ ಕೊರತೆ ಇರುತ್ತದೆ. ನಾಮಕರಣ ಮುಹೂರ್ತವೂ ಈ ಅವಧಿಯಲ್ಲಿ ದೊರಕದು. ನಿತ್ಯ ಪೂಜೆಗಳು, ಹರಕೆ ತೀರಿಸುವುದು, ಸೀಮಂತ, ಆರತಿ ಅಥವಾ ಈಗಾಗಲೇ ನಿಗದಿಯಾದ ಶಾಂತಿ, ಹೋಮಗಳಿಗೆ ಯಾವುದೇ ಅಡ್ಡಿಯಿಲ್ಲ.

ಚಂದ್ರಮಾನ ಪಂಚಾಂಗದಲ್ಲಿ ಸೌರ ಸಂಕ್ರಾಂತಿ ನಡೆಯದ ತಿಂಗಳನ್ನು "ಅಧಿಕ ಮಾಸ"ಎಂದು ಹೇಳುತ್ತಾರೆ. ಇದು ಒಂದು ವರ್ಷ ದಲ್ಲಿ ಹೆಚ್ಚುವರಿ ತಿಂಗಳಾಗಿದೆ. ಇದಕ್ಕೆ ಪುರುಷೋತ್ತಮ ಮಾಸ ಎಂಬ ಹೆಸರೂ ಇದೆ.

ಅಧಿಕ ಮಾಸವು ಪ್ರತಿ 32 ತಿಂಗಳು 16 ದಿನಗಳಿಗೆ ಒಮ್ಮೆ ಬರು ತ್ತದೆ. ಈ ಬಾರಿ ಇದು ಜ್ಯೇಷ್ಠ ಮಾಸಕ್ಕೆ ಇದು ಒಲಿದು ಬಂದಿದೆ.

ಅಧಿಕಜ್ಯೇಷ್ಠ ಹುಣ್ಣಿಮೆಯಂದು ವಿಷ್ಣು ಪೂಜೆ, ಅರಳಿ ಮರದ ಕೆಳಗೆ ದೀಪಾರಾಧನೆ ಮತ್ತು ವಿಶೇಷ ದಾನ ಮಾಡುವುದರಿಂದ ಆರ್ಥಿಕ ಸಮೃದ್ಧಿ ದೊರಕುತ್ತದೆ, ಪಾಪ ನಾಶವಾಗುತ್ತದೆ ಎಂದು ನಂಬಲಾಗಿದೆ. ಸಾಕ್ಷಾತ್ ಶ್ರೀಹರಿ ಇದರಿಂದ ಸಂಪ್ರೀತಗೊಳ್ಳುತ್ತಾನೆ ಎಂಬುದು ಹಿಂದೂ ಗಳ ಅಚಲ ನಂಬಿಕೆ. ಅಂದು ವಟವೃಕ್ಷದ ಕೆಳಗೆ ಅಥವಾ ಅದು ಸಾಧ್ಯವಾಗದೆ ಇದ್ದಲ್ಲಿ ಮಠ, ಮಂದಿರ, ಮನೆಗಳಲ್ಲಿ ಲಕ್ಷ್ಮೀ ಸ್ತೋತ್ರ ಮತ್ತು ಕನಕಧಾರಾ ಸ್ತೋತ್ರ ಪಠನೆ ಮಾಡುವುದು ಸಂಪ್ರದಾಯ. ಗಮನೀಯ ಸಂಗತಿ ಎಂದರೆ ಹುಣ್ಣಿಮೆ ದಿನ. ವಟಸಾವಿತ್ರಿ ವ್ರತ (ಜ್ಯೇಷ್ಠಾ ಹುಣ್ಣಿಮೆ ವ್ರತ) ಮಾಡುವುದು ಪದ್ಧತಿ. ಈ ಬಾರಿ ಅಧಿಕ ಮಾಸ

ಬಂದಿರುವ ಕಾರಣ ಅದರ ಆಚರಣೆ ಗೌಣವಾಗಿದೆ. ಹುಣ್ಣಿಮೆ ದಿನ ಶಿವನಿಗೆ ಹಾಲು ಬೆರೆಸಿದ ನೀರಿನಿಂದ ಅಭಿಷೇಕ ಮಾಡುವುದು ವಿಶೇಷ. ಈ ದಿನದಂದು ಜೀಸಣಿಗೆ,ಎಳ್ಳು, ಉದ ಕುಂಭ (ನೀರಿನ ಕುಂಭ) ದಾನ ಮಾಡುವುದರಿಂದ ಕೋಟಿ ಕೋಟಿ ಪುಣ್ಯ ಪ್ರಾಪ್ತಿ ಆಗುತ್ತದೆ ಎಂಬುದು ನಂಬಿಕೆ.

ಪೂಜೆ ಮತ್ತು ಆಚರಣೆ :

ಅಧಿಕ ಮಾಸದ ಹುಣ್ಣಿಮೆಯಂದು ಜನರು ಗಂಗಾ, ಯಮುನಾ, ಕಾವೇರಿ, ಕೃಷ್ಣಾ, ತುಂಗಾ ಇತ್ಯಾದಿ ಪವಿತ್ರ ನದಿ ಗಳಲ್ಲಿ ಬ್ರಾಹ್ಮೀ ಮುಹೂರ್ತದಲ್ಲಿ ಸ್ನಾನ ಮಾಡುತ್ತಾರೆ. ನದೀ ತೀರ ದಲ್ಲೇ ಇಷ್ಟ ದೇವರ ಕುಲದೇವರ ಸ್ಮರಣೆ ಮಾಡಿ ಶಕ್ತ್ಯಾನುಸಾರ ಜಪಗಳನ್ನು ಮಾಡಿ ದಾನ, ಧರ್ಮಗಳನ್ನು ಮಾಡುತ್ತಾರೆ. ಇದ ರಿಂದ ಲಕ್ಷ್ಮೀ ದೇವಿಯು ಪ್ರಸನ್ನಳಾಗಿ ಅನುಗ್ರಹ ನೀಡುತ್ತಾಳೆ.

ಅಧಿಕಸ್ಯ ಅಧಿಕ ಫಲಂ :

ಅಧಿಕ ಮಾಸದಲ್ಲಿ ಅದರಲ್ಲೂ ಅಧಿಕ ಹುಣ್ಣಿಮೆ ದಿನ ಧನ, ಕನಕ, ವಸ್ತ್ರಗಳು ಮತ್ತು ವಿವಿಧ ಬಗೆಯ ಧಾನ್ಯಗಳನ್ನು ದಾನ ಮಾಡುವುದರಿಂದ ಸಾಮಾನ್ಯ ತಿಂಗಳುಗಳಿಗಿಂತ ಹೆಚ್ಚು ಪುಣ್ಯ ಲಭಿಸುತ್ತದೆ ಎಂದಿವೆ ಶಾಸ್ತ್ರಗಳು. ಅಧಿಕ ಮಾಸದ ಶುಭ ಸಂದ ರ್ಭದಲ್ಲಿ ಮಹಾವಿಷ್ಣುವಿನ ಸನ್ನಿಧಿಯಲ್ಲಿ ನಡೆಯುವ ವಿಧಿಗಳಲ್ಲಿ ಸಾಂಪ್ರದಾಯಿಕ ಕಜ್ಜಾಯ ದಾನ (ಅಪೂಪ ದಾನ) ಮಾಡು ವುದು ಇನ್ನೊಂದು ಪುಣ್ಯದಾಯಕ ಕಾರ್ಯ.

ಜ್ಯೋತಿಷ್ಯ ಶಾಸ್ತ್ರ ಏನು ಹೇಳುತ್ತದೆ?

ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಅಧಿಕ ಮಾಸದ ಈ ಅವಧಿ ಯಲ್ಲಿ ಸೂರ್ಯನ ಸಂಕ್ರಮಣ ಇರುವುದಿಲ್ಲ. ಆದ್ದರಿಂದ ಮದುವೆ ಉಪನಯನ, ಗೃಹ ಪ್ರವೇಶದಂತಹ ಶುಭ ಕಾರ್ಯ ಗಳನ್ನು ಯಾರೂ ಮಾಡುವುದಿಲ್ಲ. ಆದರೆ ಆಧ್ಯಾತ್ಮಿಕವಾಗಿ ಈ ಮಾಸಕ್ಕೆ ಬಹಳ ಮಹತ್ವವಿದೆ. ಸಾಧಕರಿಗೆ ಇದು ಪರ್ವಕಾಲ. ಈ ಸಮಯದಲ್ಲಿ ಮಾಡುವ 33 ಕಜ್ಜಾಯಗಳ (ಅಪೂಪ) ದಾನ ಮತ್ತು ವಿಷ್ಣುವಿನ ಆರಾಧನೆಗೆ ಕೋಟಿ ಪಟ್ಟು ಪುಣ್ಯ ಸಿಗುತ್ತದೆ ಎಂಬ ನಂಬಿಕೆಯಿದೆ. ಒಟ್ಟಾರೆ ಅಧಿಕ ಮಾಸವು ಆತ್ಮ ಶುದ್ಧಿ ಮತ್ತು ಭಗವಂತನ ಆರಾಧನೆಗೆ ಮೀಸಲಾದ ಸಮಯ.

ಅಧಿಕ ಎಂದರೆ ಏನು?

ಒಂದು ಚಾಂದ್ರಮಾನ ವರ್ಷದಲ್ಲಿ ಸುಮಾರು 354 ದಿನಗಳು ಇರುತ್ತವೆ. ಒಂದು ಸೌರಮಾನ ವರ್ಷದಲ್ಲಿ ಸುಮಾರು 365 ದಿನಗಳು ಇರುತ್ತವೆ. ಈ ಎರಡರ ನಡುವೆ ಪ್ರತಿವರ್ಷ ಸುಮಾರು 11 ದಿನಗಳ ವ್ಯತ್ಯಾಸ ಬರುತ್ತದೆ. ಈ ವ್ಯತ್ಯಾಸವನ್ನು ಸರಿಪಡಿಸಿ, ಹಬ್ಬಗಳು ಸರಿಯಾದ ಋತುಮಾನದಲ್ಲಿ ಬರುವಂತೆ ಮಾಡಲು ಪ್ರತಿ 32 ತಿಂಗಳು 16 ದಿನ ಮತ್ತು 4 ಗಂಟೆಗೊಮ್ಮೆ ಒಂದು ಹೆಚ್ಚುವರಿ ತಿಂಗಳನ್ನು ಸೇರಿಸಲಾಗುತ್ತದೆ. ಇದನ್ನೇ ಅಧಿಕ ಮಾಸ ಎನ್ನಲಾಗುತ್ತದೆ. ಸೂರ್ಯನು ಒಂದು ರಾಶಿಯಿಂದ ಇನ್ನೊಂದು ರಾಶಿಗೆ ಪ್ರವೇಶಿಸುವುದನ್ನು ಸಂಕ್ರಮಣ ಎನ್ನುತ್ತಾರೆ. ಯಾವ ತಿಂಗಳಿನಲ್ಲಿ ಸೂರ್ಯ ಸಂಕ್ರಮಣ ಇರುವುದಿಲ್ಲವೋ, ಆ ತಿಂಗಳು ಅಧಿಕ ಮಾಸ ಎಂದು ಪರಿಗಣಿತವಾಗುತ್ತದೆ.

ದೇವರೇ ಇಲ್ಲಿ ಅಧಿಪತಿಯಾದ :

ಅಧಿಕ ಮಾಸಕ್ಕೆ ಯಾವುದೇ ದೇವತೆ ಅಧಿಪತಿಯಾಗಿ ಇರುವುದಿಲ್ಲ. ಆದ್ದರಿಂದ ಇದನ್ನು ಮಲಮಾಸ ಎಂದು ಕರೆಯ ಲಾಗುತ್ತಿತ್ತು. ಆಗ ಸಾಕ್ಷಾತ್ ಶ್ರೀಹರಿಯು ಈ ತಿಂಗಳಿಗೆ ತನ್ನ ಹೆಸರಾದ ಪುರುಷೋತ್ತಮ ಎಂಬ ಹೆಸರನ್ನು ತಾನೇ ನೀಡಿದ. ಅವನೇ ಇದರ ಅಧಿಪತಿಯಾದ. ಆದ್ದರಿಂದ ವರ್ಷದ 12 ಮಾಸ ದಲ್ಲಿ ಮಾಡುವ ಪೂಜೆ, ಜಪ, ದಾನಗಳಿಗಿಂತ ಈ ಮಾಸದಲ್ಲಿ ಮಾಡುವ ಮೇಲಿನ ಎಲ್ಲ ವಿಧಿಗಳಿಗೆ ಕೋಟಿ ಕೋಟಿ ಪಟ್ಟು ಪುಣ್ಯ ಲಭಿಸುತ್ತದೆ ಎಂಬ ನಂಬಿಕೆ ಢಾಳಾಗಿವೆ. ಸಂಪ್ರದಾಯ ಪಾಲನೆ ಮಾಡುವವರಿಗಂತೂ ಇದು ಬಿಡುವಿಲ್ಲದ ಮಾಸವಾಗಿರುತ್ತದೆ. ಈ ಪವಿತ್ರ ಮಾಸವು ಆಧ್ಯಾತ್ಮಿಕ ಬೆಳವಣಿಗೆಗೆ ಸುವರ್ಣ ಅವ ಕಾಶ. ಲೌಕಿಕ ವ್ಯವಹಾರಗಳಿಗಿಂತ ಭಗವಂತನ ಸ್ಮರಣೆಗೆ ಈ ಸಮಯವನ್ನು ಮೀಸಲಿಡುವುದು ಭಾರತೀಯ ಸಂಸ್ಕೃತಿಯ ಅಚಲ ಆಶಯವಾಗಿದೆ.

ಅಧಿಕ ಮಾಸದ ಹುಣ್ಣಿಮೆ ಮಾಡುವ ಕಾರ್ಯಗಳು :

ಶ್ರೀವಿಷ್ಣು ಸಹಸ್ರನಾಮ ಪಠಣ, ಭಾಗವತ ಪಾರಾಯಣ, ಪುರುಷೋತ್ತಮನಾದ ಶ್ರೀಹರಿಯ ಆರಾಧನೆ, ತೀರ್ಥ ಕ್ಷೇತ್ರ ದರ್ಶನ ದೀಪ ದಾನ ಮಾಡುವುದು. ಪ್ರತಿದಿನ ಸಂಜೆ ದೇವರ ಮುಂದೆ ಅಥವಾ ತುಳಸಿ ಕಟ್ಟೆಯ ಎದುರು ಅಖಂಡ ದೀಪ ಬೆಳ ಗುವುದು.

ಅಧಿಕ ಮಾಸದಲ್ಲಿ 33 ಎಂಬ ಸಂಖ್ಯೆಗೆ ಹೆಚ್ಚಿನ ಪ್ರಾಮು ಖ್ಯತೆ ಇದೆ. ಏನೇ ದಾನ ಮಾಡಿದರೂ 33 ಸಂಖ್ಯೆಯಲ್ಲಿ ಮಾಡ ಬೇಕು ಎಂಬ ಪದ್ಧತಿ ಇದೆ. ಇದು (33 ಕೋಟಿ ದೇವತೆಗಳ ಸಂಕೇತವೇ ಆಗಿದೆ.) 33 ರ ವೈಶಿಷ್ಟ್ಯ ಇನ್ನೂ ಒಂದು ಇದೆ. ಅದು ಏನೆಂದರೆ ನಮ್ಮ ಪುರಾಣಗಳ ಪ್ರಕಾರ ಈ ಬ್ರಹ್ಮಾಂಡವನ್ನು ಆಳುವ ದೇವತೆಗಳ ಸಂಖ್ಯೆ 33 ಕೋಟಿ ಇದೆ. ಈ 33 ಸಂಖ್ಯೆಯು 33 ದೈವಿಕ ಶಕ್ತಿಗಳನ್ನು ಪ್ರತಿನಿಧಿಸುತ್ತದೆ. ಅವುಗಳು

ಯಾವುವು ಎಂದರೆ 12 ಆದಿತ್ಯರು (ದ್ವಾದಶಾದಿತ್ಯರು), 8 ವಸು ಗಳು (ಅಷ್ಟ ವಸುಗಳು) 11 ರುದ್ರರು (ಏಕಾದಶ ರುದ್ರರು) ಇಬ್ಬರು ಅಶ್ವಿನಿ ದೇವತೆಗಳು ಸೇರಿ ಒಟ್ಟು 33 ಆಗುತ್ತದೆ. 33 ಅಪ್ಪೂಪ ಗಳನ್ನು (ಅತಿರಸ) ದಾನ ಮಾಡುವುದರಿಂದ ಈ ಎಲ್ಲಾ ದೇವತೆ ಗಳ ಅನುಗ್ರಹ ಲಭಿಸುತ್ತದೆ ಮತ್ತು ಪಿತೃಗಳಿಗೆ ಮೋಕ್ಷ ಸಿಗುತ್ತದೆ ಎಂಬುದು ಇದರ ಹಿಂದಿನ ತತ್ವವಾಗಿದೆ. ಪ್ರತಿದಿನವೂ 33 ಅಪ್ಪೂಪ ದಾನ ಮಾಡಬೇಕು,ಸಾಧ್ಯವಾಗದಿದ್ದರೆ ಅಧಿಕ ಮಾಸದ ದ್ವಾದಶಿ ಅಥವಾ ಹುಣ್ಣಿಮೆ 33 ಅಪ್ಪೂಪಗಳನ್ನು ದಾನ ಮಾಡ ಬಹುದು. ಹಾಗಾಗಿ ಹುಣ್ಣಿಮೆ ಪ್ರಧಾನ ಘಟ್ಟವಾಗಿ ಪರಿಗಣಿತ ವಾಗಿದೆ.

ಪುರುಷೋತ್ತಮನಿಗೆ ಪ್ರಿಯವಾದ ಅಪ್ಪೂಪವನ್ನು ದಾನ ಮಾಡುವುದು ಅಶ್ವಮೇಧಯಾಗ ಮಾಡಿದಷ್ಟೇ ಫಲ ನೀಡುತ್ತದೆ ಎನ್ನುತ್ತಾರೆ ಪ್ರಾಜ್ಞರು. ಈ ದಿನ ಅಕ್ಕಿಗೋಧಿ ಅಥವಾ ಇತರೆ ಧಾನ್ಯಗಳನ್ನು ಸುವಸ್ತುಗಳನ್ನೂ ದಾನ ಮಾಡುತ್ತಾರೆ. ವನಿತೆಯ ರಿಗೆ ಮತ್ತು ಸಾಧಕ ಬ್ರಾಹ್ಮಣರಿಗೆ ಜಲ, ತಾಂಬೂಲ ದಾನ ಮಾಡುವ ಪದ್ಧತಿಯೂ ಇದೆ. ಸತ್ಪಾತ್ರರಿಗೆ ದಾನ ನೀಡುವಾಗ ಅಪ್ಪೂಪಗಳನ್ನು ಬರಿಗೈಯಲ್ಲಿ ಅಥವಾ ಕೇವಲ ಎಲೆಯಲ್ಲಿ ಇಟ್ಟು ನೀಡಬಾರದು. ಶಾಸ್ತ್ರದ ಪ್ರಕಾರ, ಕಂಚಿನ ತಟ್ಟೆ ಅಥವಾ ತಾಮ್ರದ ತಟ್ಟೆ ಬಳಸುವುದು ಶ್ರೇಷ್ಠವಾಗಿದೆ. ಒಟ್ಟಾರೆ ಅಧಿಕ ಮಾಸದ ಆಚ ರಣೆಯು ನಮ್ಮ ಗಮನವನ್ನು ಭಕ್ತಿ ಪ್ರಾರ್ಥನೆ ಮತ್ತು ಆಧ್ಯಾತ್ಮಿಕ ಶಿಸ್ತಿನ ಕಡೆಗೆ ಬದಲಾಯಿಸುತ್ತದೆ. ಆ ಸಣ್ಣ ಬದಲಾವಣೆಯೇ ಇಡೀ ಬದುಕಿನ ಅವಧಿಯ ಮನಸ್ಥಿತಿಯನ್ನು ಸುಧಾರಣೆಗೊಳಿಸಿ ನಮ್ಮನ್ನು ಸಾತ್ವಿಕ ಶಕ್ತಿಗಳನ್ನಾಗಿ ಪರಿವರ್ತನೆ ಮಾಡುತ್ತದೆ. ಅದಕ್ಕೆ ಪ್ರಮುಖ ಕಾಲವಾಗಿ ಬದುಕನ್ನು ಬೆಳಗಲಿದೆ ಈ ಅಧಿಕ ಜ್ಯೇಷ್ಠ ಹುಣ್ಣಿಮೆ. ಗರಿಷ್ಠ ಮಟ್ಟದ ಶಾಂತಿಯನ್ನು ಚಿಂತನಶೀಲತೆಯನ್ನು ಮತ್ತು ಅಲೌಕಿಕ ಆಲೋಚನೆಗಳನ್ನೂ ನಮ್ಮಲ್ಲಿ ಅಧಿಕವಾಗಿ ಹರಿಸಲಿದೆ ಈ ಹುಣ್ಣಿಮೆ. ಬನ್ನಿ ಭಗವಂತನು ನೀಡಿದ ಜನ್ಮವನ್ನು ಚಂದಿರನ ಬೆಳದಿಂಗಳ ಬೆಳಕಿನಲ್ಲಿ ಸಾರ್ಥಕ ಮಾಡಿಕೊ ಳ್ಳೋಣ,ಭವ್ಯ ಜೀವನವನ್ನು ನಮ್ಮದನ್ನಾಗಿಸಿಕೊಳ್ಳೋಣ. ನಮ್ಮ ವಂಶವನ್ನು,ದೇಶವನ್ನು, ಜಗತ್ತನ್ನು ಸದಾ ಸಾರ್ಥಕತೆಯ ಹಾದಿ ಯಲ್ಲಿ ನಡೆಸು ಎಂದು ಲೋಕ ಪಾಲಕನಾದ ಮಹಾ ವಿಷ್ಣುವಿ ನಲ್ಲಿ, ತಿರುಮಲೆಯ ಒಡೆಯ ಶ್ರೀನಿವಾಸನಲ್ಲಿ ಬೇಡೋಣ.

ಲೋಕಾ ಸಮಸ್ತಾ ಸುಖಿನೋ ಭವಂತು.



ತಿರುಮಲೆ ತಿರುಪತಿ ದೇವಸ್ಥಾನಗಳು

ಭಕ್ತರಿಗೆ ವಿಜ್ಞಪ್ತಿ

ಇತ್ತೀಚೆಗೆ ತಿರುಮಲೆಗೆ ಕಾಲ್ನಡಿಗೆಯಲ್ಲಿ ಬರುವ ಭಕ್ತರಲ್ಲಿ ಹೃದಯಕ್ಕೆ ಸಂಬಂಧಿಸಿದ ಅನಾರೋಗ್ಯ ವ್ಯಕ್ತಿಗಳಿಗೆ ಸೂಚನೆಗಳು. ಈ ಕಾರಣಕ್ಕಾಗಿ ತಿ.ತಿ.ದೇ., ಭಕ್ತರಿಗೆ ಹಲವಾರು ಸೂಚನೆಗಳನ್ನು ನೀಡುತ್ತಿದೆ. ಭಕ್ತರ ಆರೋಗ್ಯ ಮತ್ತು ಯೋಗ ಕ್ಷೇಮಕ್ಕಾಗಿ ಈ ಸೂಚನೆಗಳನ್ನು ಪಾಲಿಸಬೇಕೆಂದು ವಿನಂತಿಸ ಲಾಗಿದೆ.

1. 60 ವರ್ಷ ವಯಸ್ಸಿನವರು ಮತ್ತು ಮಧು ಮೇಹ, ಅಧಿಕ ರಕ್ತದೊತ್ತಡ, ಅಸ್ತಮಾ, ಫಿಟ್ಸ್ ಮತ್ತು ಸಂಧಿವಾತದಂತಹ ಕಾಯಿಲೆ ಇರುವವರು ತಿರುಮಲೆ ಬೆಟ್ಟವನ್ನು ಹತ್ತಬಾರದು.

2. ಸ್ಥೂಲಕಾಯ ಮತ್ತ ಕಾರ್ಡಿಯಾಕ್ ಸ್ಟಂಟ್ ಪ್ರಕ್ರಿಯೆಗೆ ಒಳಗಾದವರು ತಿರುಮಲೆ ಬೆಟ್ಟವನ್ನು ಹತ್ತ ಬಾರದು.

3. ತಿರುಮಲೆ ಬೆಟ್ಟವನ್ನು ಹತ್ತುವ ಸಮಯದಲ್ಲಿ ಅಧಿಕ ಒತ್ತಡ ಮತ್ತು ಎತ್ತರದಲ್ಲಿ ಕಡಿಮೆ ಆಮ್ಲಜನಕದ ಸಾಂದ್ರತೆಯಿಂದ ಹೃದಯದ ತೊಂದರೆಗಳು ಮತ್ತು ಅಸ್ತಮಾ ಹೆಚ್ಚಾಗಬಹುದು.

4. ದೀರ್ಘಕಾಲದ ಕಾಯಿಲೆ ಇರುವವರು ತಮ್ಮ ಔಷಧಿಗಳನ್ನು ತರಬೇಕು ಇದರಿಂದ ನಿಮ್ಮ ಆರೋಗ್ಯ ವನ್ನು ಕಾಪಾಡಿಕೊಳ್ಳಬಹುದು.


5. ತಿರುಮಲೆ ಬೆಟ್ಟವನ್ನು ಹತ್ತುವಾಗ ಯಾವುದೇ ರೀತಿಯ ತೊಂದರೆಯಾದರೆ ದಯವಿಟ್ಟು ವೈದ್ಯಕೀಯ ಕೇಂದ್ರಗಳಲ್ಲಿ ವೈದ್ಯಕೀಯ ಸೌಲಭ್ಯಗಳನ್ನು ಪಡೆದು ಕೊಳ್ಳಿ. ಅಲಿಪಿರಿ ನಡೆದು ಹೋಗುವ ಮಾರ್ಗದ 1500 ಮೆಟ್ಟಿಲುಗಳ ಬಳಿ ಗಾಳಿಗೋಪುರ ಮತ್ತು ಭಾಷ್ಯಕಾರರ ಸನ್ನಿಧಿ ಬಳಿ ವೈದ್ಯಕೀಯ ಕೇಂದ್ರಗಳಿವೆ.

6. ಯಾವುದೇ ವೈದ್ಯಕೀಯ ಸಹಾಯಕ್ಕಾಗಿ ತಿರು ಮಲೆಯಲ್ಲಿರುವ ಅಶ್ವಿನಿ ಆಸ್ಪತ್ರೆ ಮತ್ತು ಇತರ ವೈದ್ಯ ಕೀಯ ಕೇಂದ್ರಗಳಲ್ಲಿ 24/7 ವೈದ್ಯಕೀಯ ಸೌಲಭ್ಯ ವನ್ನು ಪಡೆಯಬಹುದು.

7. ದೀರ್ಘ ಕಾಲದ ಮೂತ್ರಪಿಂಡದ ಕಾಯಿಲೆಯ ರೋಗಿಗಳಿಗೆ ಯಾವುದೇ ತುರ್ತು ಸಂದರ್ಭದಲ್ಲಿ ತಿರು ಪತಿಯಲ್ಲಿರುವ (SVIMS) ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೌಲಭ್ಯಲಭ್ಯವಿದೆ.

ಹರಿಕಥಾಮೃತ ಸಾರ ಮಹಿಮೆ ಅಪಾರ

- ಶ್ರೀಮತಿ. ಪ್ರಿಯ ಪ್ರಾಣೇಶ ಹರಿದಾಸ
80504 36752



ಹಿಂದಿನ ಸಂಚಿಕೆಯಿಂದ

ಶ್ವಾಸ ಸಂಧಿ

ಹರಿಕಥಾಮೃತಸಾರದ ಶ್ವಾಸ ಸಂಧಿ ಸೂಚಿಸುವಂತೆ ಪ್ರತಿಜೀವಿಯ ಅಂತರ್ಯಾಮಿಯಾಗಿ ತತ್ವ ಅಭಿಮಾನಿ ದೇವತೆಗಳ ಅಂತರ್ಯಾಮಿಯಾಗಿ ಪ್ರಾಣ, ವ್ಯಾನ್ ಅಪಾನ, ಉದಾನ, ಸಮಾನ ಎಂಬ ಪಂಚ ವಾಯು ರೂಪದಲ್ಲಿ ಪಂಚರೂಪಾತ್ಮಕ ಭಗವಂತನು ಕಾರ್ಯಮಾಡಿಸುತ್ತಾ ತ್ರಿವಿಧ ಜೀವಿಗೆ ಕರ್ಮಾನುಸಾರವಾಗಿ ವಾಯು ದೇವರ ಮೂಲಕ ನಮಗೆ ಭೋಗ ಕೊಡುತ್ತಾನೆ. ಪ್ರತಿಯುಗದಲ್ಲಿ ಭಗವಂತನ ಅವತಾರದ ಜೊತೆ ಇತರ ದೇವತೆಗಳು ಅವತರಿಸುತ್ತಾರೆ. ಶ್ರೀಹರಿಯ ಭಕ್ತ ಮತ್ತು ಪರ ಶುಕ್ಲತ್ರಯರಲ್ಲಿ ಒಬ್ಬರಾದ ಹಾಗೂ ತ್ರೇತಾಯುಗ, ದ್ವಾಪರಯುಗ, ಕಲಿಯುಗದಲ್ಲಿ ಹೀಗೆ ಕ್ರಮವಾಗಿ ಹನುಮ, ಭೀಮ, ಮಧ್ವಾಚಾರ್ಯ ಜನಿಸಿ ಸೇವೆ ಗೈದವರು. ಹಾಗೇ ಶ್ರೀಪಾದರಾಜರು ರಚಿಸಿದ ಮಧ್ವನಾಮದಲ್ಲಿ ಹೇಳಿರುವಂತೆ ದೇಹದ ಯಾವ ಅಂಗಗಳು ಇಲ್ಲದಿದ್ದರೆ ಅವನು ಮನುಷ್ಯ ಎಂದೆನಿಸುವ, ಅದೇ ಆ ದೇಹದಲ್ಲಿ ಉಸಿರಾಟದ ಪ್ರಕ್ರಿಯೆ ಇರದಿದ್ದರೆ "ಹೆಣ" ಎನಿಸುತ್ತದೆ. ಆದ್ದರಿಂದ ಶ್ವಾಸ ಜಪ ನಿತ್ಯದಲ್ಲಿ ಭಗವಂತನ ಆಜ್ಞೆ ಧಾರಕನಾಗಿ ನಿಂತು ನಮ್ಮಲ್ಲಿ ಎಲ್ಲ ಕರ್ಮಗಳನ್ನು ಮಾಡಿಸುವ ಮುಖ್ಯ ಪ್ರಾಣದೇವರ ಬಗ್ಗೆ ಹೇಳಿದ್ದಾರೆ. ದ್ವಾಪರಯುಗದಲ್ಲಿ ರಾಮ ಭಕ್ತರಾಗಿ, ಅಖಣಾಷ್ಮರಾದ, "ದಾಸೋಹಂ ಕೋಸಲೇಂದ್ರೀಯಂ" ಶ್ರೇಷ್ಠ ಹರಿದಾಸರಾದ ಮುಖ್ಯ ಪ್ರಾಣರ ಬಗ್ಗೆ ಈ ಶ್ವಾಸ ಸಂಧಿಯಲ್ಲಿ ವಾಯುದೇವರು ತಮ್ಮ ಪತ್ನಿ ಭಾರತಿ ದೇವಿಯ ಜೊತೆ ಕಾರ್ಯನಿರ್ವಹಿಸುತ್ತಿರುವುದನ್ನು ಮತ್ತು ಮಹಿಮೆಯನ್ನು ಶ್ರೀಜಗನ್ನಾಥ ದಾಸರು ತಿಳಿಸಿದ್ದಾರೆ. ಪ್ರತಿ ಸಂಧಿಯಲ್ಲಿ ಹೇಳುವಂತೆ...

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮ ಭಗವದ್ಭಕ್ತರಿದನಾದರದಿ ಕೇಳುವುದ॥ಪ॥

ಆದ್ದರಿಂದ ನಾವೆಲ್ಲರೂ ವಿನಿತರಾಗಿ ಹರಿಕಥಾಮೃತಸಾರವನ್ನು ಓದೋಣ ಚಿಂತಿಸೋಣ ಭಾರತೀಶನು ಫಳಗೆಯೊಳು 360 ಸುರ ಜಪಗಳ ತಾ ರಚಿಸುವನು

ಸರ್ವ ಜೀವರೊಳಿದ್ದು ಬೇಸರದೆ
ಕಾರುಣಿಕ ಅವರವರ ಸಾಧನ ಪೂರೈಸಿ
ಭೂ ಸ್ವರ್ಗ ನರಕವ ಸೇರಿಸುವ
ಸರ್ವಜ್ಞ ಸಕಲೇಷ್ಟ ಪ್ರದಾಯಕನು

ಭಾರತಿ ಪತಿ ವಾಯುದೇವರು 24 ನಿಮಿಷಕ್ಕೆ ಅಂದರೆ ಒಂದು ಗಳಿಗೆಯಲ್ಲಿ 360 ಶ್ವಾಸ ಜಪದಂತೆ ದಿನದ ಲೆಕ್ಕ ಹೇಳುತ್ತಾರೆ. ಹಾಗೇ ಗಂಟೆಗೆ 900 ಶ್ವಾಸ ಜಪವನ್ನು ಭಗವಂತನ ರೂಪತ್ರಯಗಳಾದ ಅಗ್ರೇಶ, ಪ್ರಾದೇಶ, ಮೂಲೇಶಗಳು. ಈ ಮೂಲೇಶ ಎಂಬ ಭಗವಂತನ ನಮ್ಮ ಹೃದಯ ಕಮಲದಲ್ಲಿ ಇರುತ್ತಾನೆ. ಈ ಹಂಸನಾಮಕ ಶ್ರೀಹರಿಯ ಪಾದದ ಕೆಳಗೆ ಕುಳಿತು ನಮ್ಮಲ್ಲಿ ಶ್ವಾಸ ರೂಪನಾಗಿ ಇದ್ದು ಜೀವರ ಕಾರ್ಯ ನಡೆಸುತ್ತಾರೆ. ಒಂದು ಯಾಮ ಅಂದರೆ 3 ತಾಸು, ಅರ್ಧ ದಿನಕ್ಕೆ 4 ಯಾಮಕ್ಕೆ 10,800 ಶ್ವಾಸ ಮಾಡುತ್ತಾ, ಒಂದು ದಿನಕ್ಕೆ 21,600 ಶ್ವಾಸ ಜಪ ಜೀವರಲ್ಲಿ ಮಾಡುತ್ತಾರೆ. ಹೀಗೆ ವಾಯುದೇವರ ಪರಮೋಪಕಾರ ನಮ್ಮಲೇ ಇದೆ.

ತಿಂಗಳಲ್ಲಿ ಬರುವ ಕೃಷ್ಣ ಪಕ್ಷ ಮತ್ತು ಶುಕ್ಲ ಪಕ್ಷ ಎರಡು ಪಕ್ಷದ ಒಟ್ಟು ಶ್ವಾಸ ಜಪ 9 ಲಕ್ಷ 48 ಸಹಸ್ರ ಶ್ವಾಸ ಜಪ ನಮ್ಮಲ್ಲಿ ನಡೆದಿರುತ್ತದೆ. ಒಂದು ಋತುವಿಗೆ 12 ಲಕ್ಷದ 96 ಸಾವಿರ ಆಗುವುದು. ಇನ್ನು ಒಂದು ಅಯನಕೆ 38,88,000 ಶ್ವಾಸ ಜಪ ಮಾಡುತ್ತಾರೆ. ಇನ್ನು ವರುಷಕ್ಕೆ 77,76,000 ಜಪ ಮಾಡುತ್ತಾರೆ.

ಇನಿತುಪಾಸನೆ ಸರ್ವ ಜೀವರೊಳನಿಲದೇವನು ಮಾಡುತಿರೆ
ಚಿಂತನೆಯ ಮಾಡದೆ ಕಂಡನೀರೊಳು ಮುಳುಗಿ ನಿತ್ಯದಲಿ

ಮನೆಯೊಳಗೆ ಕೃಷ್ಣಾಜಿನಾದ್ಯಾಸನದಿ ಕುಳಿತು ವಿಶಿಷ್ಟ ಬಹು
ಸಜ್ಜನನೆನಿಸಿ ಜಪ ಮಣಿಗಳೆ ಎಣಿಸಿದರೇನು ಬೇಸರದೆ।

ಅಂದರೆ ವಾಯುದೇವರು ಸರ್ವ ಜೀವರಲ್ಲಿದ್ದು ಕಾರ್ಯ ಮಾಡಿಸುವನು ಎಂದು ಜ್ಞಾನ ಉಪಾಸನೆ ಮಾಡದೇ ತೋರಿ ಕೆಗೆ ನದಿಗಳಲ್ಲಿ ಮುಳಗಿ ಜಪತಪ ಮಾಡಿ ಅನುಸಂಧಾನ ಮಾಡಿ ದರೂ ಯಾವುದೇ ಫಲ ಬರುವುದಿಲ್ಲ. ಪ್ರಾಣಿ ಜೀವ ಸಂಕುಲ ಸಂಪನ್ನ ಬೆಳೆಯಬೇಕಾದರೆ ಚಂದ್ರ, ಸೂರ್ಯ, ಅಗ್ನಿ ಅವಶ್ಯ ವಾಗಿದೆ. ಈ ಮೂರು ದೇವತೆಗಳಿಂದ ತಮಸ್ಸು, ಸಾತ್ವಿಕ, ರಜಸ್ಸು ಹೊಂದಿರುವ ತ್ರಿವಿಧ ಜೀವಿಗಳು ಇರುತ್ತಾರೆ. ಚಂದ್ರ, ಸೂರ್ಯ, ಅಗ್ನಿ ಅಭಿಮಾನಿ ದೇವತೆಗಳ ಅಂತರ್ಗತನಾಗಿ ರುದ್ರ, ವಾಯು, ಲಕ್ಷ್ಮಿ ದೇವಿಯರು ಇರುತ್ತಾರೆ. ಇವರ ಅಂತರ್ಗತನಾಗಿ ಭಗವಂತನು ಶ್ರೀಕೃಷ್ಣ, ಹಯಗ್ರೀವ, ಪರಶುರಾಮ ರೂಪವಾಗಿ ಸಕಲ ಜೀವ ಸಂಪನ್ನವನ್ನು ಸಲಹುವನು. ಪ್ರಾಣಧಾರಣೆಗೆ ಸೂರ್ಯ,ಚಂದ್ರ, ಅಗ್ನಿ ಅವಶ್ಯರಾಗಿದ್ದಾರೆ.

ವಾಯುದೇವರ ವಿಶೇಷವೆಂದರೆ

ನಮ್ಮ ವಾಕ್ ಶಕ್ತಿಯಲ್ಲಿ ವಾಗ್ ಅಭಿಮಾನಿ ದೇವತೆ ಯಾದ ಅಗ್ನಿಯಲ್ಲಿದ್ದು ಮತ್ತು ಮಾತಾಡಲು ಜಿಹ್ವೆ (ನಾಲಿಗೆ) ಅಭಿ ಮಾನಿ ದೇವತೆಯಾದ ವರುಣದಲ್ಲಿದ್ದು ಮತ್ತು ಮನಸ್ಸಿನಲ್ಲಿದ್ದು ಮನೋಭಿಮಾನಿ ದೇವತೆಯಾದ ಇಂದ್ರನಲ್ಲಿದ್ದು ವಾಯು ದೇವರು ಭಗವಂತನ ಗುಣಗಳನ್ನು ಸ್ಮರಿಸುತ್ತಾ ಇರುವನು. ವಾಕ್ ಮತ್ತು ಮನೋಧಿಷ್ಟಾನಗಳಲ್ಲಿ ನರಸಿಂಹ ಮತ್ತು ಸಂಕರ್ಷಣ ರೂಪ ವಾಗಿ ಭಗವಂತ ಇರುತ್ತಾನೆ. ವೈಕುಂಠದ ಐದು ದಿಕ್ಕಿನಲ್ಲಿ ಪ್ರಾಣ, ವ್ಯಾನ,ಅಪಾನ,ಸಮಾನ,ಉದಾನ,ರೂಪನಾಗಿ ಪಂಚ ರೂಪಾ ತ್ಮಕನಾದ ಅನಿರುದ್ಧ ಪ್ರದ್ಯುಮ್ನ ಸಂಕರ್ಷಣ ವಾಸುದೇವ ನಾರಾ ಯಣನ ಆಜ್ಞೆಯಂತೆ ಪ್ರಾಣ ದೇವರು ಕಾರ್ಯನಿರ್ವಹಿಸುತ್ತಾರೆ.

ಶ್ರೀರಮಣನರಮನೆಯ ಪೂರ್ವ
ದ್ವಾರದಲ್ಲಿಹ ಸಂಜ್ಞ ಸೂರ್ಯಗ
ಭಾರತೀಪತಿ ಪ್ರಾಣನೊಳಗಿಹ
ಲಕುಮಿ ನಾರಾಯಣನ ॥
ಸೇರಿ ಮನುಜೋತ್ತಮರು
ಸರ್ವ ಶರೀರಗತ ನಾರಾಯಣನ
ಅವತಾರ ಗುಣಗಳ ತುತಿಸುತಲಿ
ಮೋದಿಪರು ಮುಕ್ತಿಯಲಿ॥

ವೈಕುಂಠದ ಪೂರ್ವದಲ್ಲಿ ಲಕ್ಷ್ಮಿ ನಾರಾಯಣ ಸನ್ನಿಧಾನ ದ್ವಾರದ ದಿಗ್ದೇವತೆಗಳಾದ ಸಂಜ್ಞಾ ಮತ್ತು ಸೂರ್ಯ ದಂಪತಿ ಇರುತ್ತಾರೆ. ಇವರು ಅಂತರ್ಗತರಾಗಿ ಭಾರತಿ ಮತ್ತು ಪ್ರಾಣದೇವ ದಂಪತಿಗಳು ಮನುಷೋತ್ತಮರ ಮುಖಾಂತರ ನಾರಾಯಣನ ಗುಣಗಳು ಸ್ತುತಿಸುತ್ತಾ ಮುಕ್ತಿಯಲ್ಲಿ ಸುಖಿಸುತ್ತಾರೆ. ವೈಕುಂಠದ ದಕ್ಷಿಣಕ್ಕೆ ಕೃತಿ ಮತ್ತು ಪ್ರದ್ಯುಮ್ನ ಇರುತ್ತಾರೆ. ಈ ದ್ವಾರಕಕ್ಕೆ ಶಶಿ ಮತ್ತು ರೋಹಿಣಿ ದಂಪತಿಗಳು ದ್ವಾರಪಾಲಕರಾಗಿರುತ್ತಾರೆ. ಭಾರತೀ ಪತಿಯು ವ್ಯಾನ ರೂಪದಿಂದ ಇಲ್ಲಿರುವ ಪಿತೃಗಣದ ಮುಖಾಂತರ ಗದಾಧರನನ್ನು ಸ್ತುತಿಸುತ್ತಾರೆ.

ವೈಕುಂಠದ ಪಶ್ಚಿಮ ದ್ವಾರಕ್ಕೆ ಜಯಾದೇವಿ ಸಂಕರ್ಷಣ ಇರುತ್ತಾರೆ. ಈ ದ್ವಾರಕ್ಕೆ ಸ್ವಾಹಾ ಮತ್ತು ಅಗ್ನಿ ದಂಪತಿಯು ದ್ವಾರ ಪಾಲಕರಾಗಿರುತ್ತಾರೆ. ಇವರು ಅಂತರ್ಗತರಾಗಿ ಭಾರತಿ ಪತಿಯು ಅಪಾನ ವಾಯುರೂಪದಿಂದ ಋಷಿಗಳ ಮೂಲಕ ಹೃದಯ ಕಮಲದಲ್ಲಿ ಧ್ಯಾನಿಸುತ್ತಾ ಇರುವರು.

ವೈಕುಂಠದ ಉತ್ತರ ದ್ವಾರಕ್ಕೆ ಶಾಂತಿದೇವಿ ಮತ್ತು ಅನಿ ರುದ್ಧನು ಇರುತ್ತಾನೆ. ಈ ದ್ವಾರಕ್ಕೆ ಶಚಿ ಮತ್ತು ಇಂದ್ರ ದಂಪತಿಗಳು ದ್ವಾರಪಾಲಕರಾಗಿರುತ್ತಾರೆ. ಇಲ್ಲಿ ಭಾರತಿ ಪತಿ ವಾಯುದೇವರು ಸಮಾನ ರೂಪದಿಂದ ಗಂಧರ್ವರ ಮೂಲಕ ಸ್ತುತಿಸುತ್ತಾರೆ. ಇನ್ನು ವೈಕುಂಠದ ಊರ್ಧ್ವದ್ವಾರಕ್ಕೆ ಮಾಯಾದೇವಿ ಮತ್ತು ವಾಸುದೇವ ಇರುತ್ತಾರೆ. ಇಲ್ಲಿ ಭಾರತಿ ಪತಿ ವಾಯುದೇವರು ಉದಾನ ರೂಪದಿಂದ ಗರುಡಶೇಷ, ಇಂದ್ರಾದಿ ದೇವತೆಗಳು ಪುಷ್ಕರದವರೆಗಿನ ದೇವತೆಗಳ ಮೂಲಕ ಭಗವಂತನ ದೇಹ ವೆಂಬ ಮಂದಿರದಲ್ಲಿ ಭಗವಂತನನ್ನು ನೋಡುತ್ತಾ ಸುಖಿಸು ವರು. ಕೊಳೆತು ಹೋಗುವ ಈ ದೇಹಕ್ಕೆ ಮುದ್ರಾದಿಗಳಿಂದ ಅಲಂಕರಿಸಿ ಡಂಬಾಚಾರದ ನಿಯಮಗಳನ್ನು ಮಾಡುತ್ತ ಜನ ರನ್ನು ಒಲಿಸಬಹುದು. ಆದರೆ ಭಗವಂತನನ್ನು ಒಲಿಸಲು ಸಾಧ್ಯ ವಿಲ್ಲ. ಶ್ರೀಮದ್ ಆಚಾರ್ಯರು ತಿಳಿಸಿದಂತೆ ತಿಳಿದು ನಡೆಯ ಬೇಕು. ದಾಸರು ಒಂದು ಉದಾಹರಣೆ ಕೊಟ್ಟು ಹೇಳುತ್ತಾರೆ.

ಜನನಿ ಸೌಷ್ಠ ಪದಾರ್ಥಗಳು ಭೋಜನವ ಮಾಡಲು ಗರ್ಭಗತ
ಶಿಶು ದಿನದಿನದಲಭಿವೃದ್ಧಿಯೈದುವ ತೆರದಿ ಜೀವರಿಗೆ ॥
ವನಜನಾಭನ ಸರ್ವ ರಸ ಉಂಡುಣಿಸಿ ಸಂರಕ್ಷಿಸುವ
ಜಾಹ್ನವಿ ಜನಕ ಜನ್ಮಾದಿ ಅಖಿಳ ದೋಷ ವಿದೂರ ಗಂಭೀರ॥

ಅಂದರೆ ಗರ್ಭವತಿ ತಾಯಿ ಉಂಡಂತಹ ಪದಾರ್ಥದ ರಸವನ್ನು ಉಂಡು ದಿನವೂ ಬೆಳದಂತೆ ದೋಷದೂರನಾದ ವನ ಜನಾಭನು ಅಂದರೆ ಭಗವಂತನು ಸರ್ವ ಪದಾರ್ಥಗಳಿದ್ದು ಅದರ ರಸವನ್ನುಂಡು ಜೀವರಿಗೆ ಉಣಿಸುತ್ತಾನೆ.

ಭಗವಂತ ಎಷ್ಟು ದಯಾಳು ಅಂದರೆ ಅನಂತ ಗುಣಗಳಲ್ಲಿ ಒಂದೇ ಗುಣವನ್ನು ನಾವು ಸ್ಮರಿಸಿದರೆ ನಮ್ಮನ್ನು ಉದ್ಧರಿಸುವನು. ತೊಡುವ ಹತ್ತಿ ಬಟ್ಟೆಗಳಲ್ಲಿಯೂ ಸಹ ಭಗವಂತನ ರೂಪ ಇದೆ ಎಂದು ಚಿಂತಿಸಬೇಕು. ಹತ್ತಿಯ ಗಿಡದಲ್ಲಿ ವಾಸುದೇವ ನಾಮಕನಾಗಿ, ಕಾಳು ತೆಗೆದ ಹತ್ತಿಯಲ್ಲಿ ಸಂಕರ್ಷಣ ನಾಮಕನಾಗಿ, ಹತ್ತಿಯ ಎಳೆಗಳಲ್ಲಿ ಪ್ರದ್ಯುಮ್ನ ನಾಮಕನಾಗಿ, ಬಟ್ಟೆಯಲ್ಲಿ ಅನಿರುದ್ಧ ನಾಮಕನಾಗಿ ಇದು ಒಟ್ಟಾರೆ ಬಟ್ಟೆಯಲ್ಲಿ ನಾರಾಯಣನ ರೂಪ ನಾಗಿ ಮಾನವರ ಮಾನವನ್ನು ರಕ್ಷಿಸುತ್ತಾನೆ.

ಲಲನೆಯಿಂದೊಡಗೂಡಿ ಜೈಲಗಳೊಳಗೆ ಓತಪ್ರೋತ ರೂಪದಿ
ನೆಲೆಸಿಹನು ಚತುರಾತ್ಮಕ ಜಗನ್ನಾಥ ವಿಠಲನು ॥
ಚಳಿ ಬಿಸಿಲು ಮಳೆ ಗಾಳಿಯಿಂದರೆ ಫಳಿಗೆ ಬಿಡದಲೇ ಕಾವನೆಂದರಿ
ದಿಳೆಯೊಳರ್ಚಿಸುತಿರು ಸದಾ ಸರ್ವಾಂತರಾತ್ಮಕನ॥

ಪಂಚರೂಪತ್ಮಾಕ ಪರಮಾತ್ಮ ಪತ್ನಿ ಸಹಿತವಾಗಿ ಸರ್ವಾಂತರ್ಯಾಮಿಯಾಗಿ ಇದ್ದು ಮತ್ತು ಬಟ್ಟೆಯಲ್ಲಿ ನಾಲ್ಕು ರೂಪದಿಂದ ಎಲ್ಲ ಕಾಲದಲ್ಲಿಯೂ ಅರೆ ಫಳಿಗೆ ಬಿಡದೆ ನಮ್ಮನ್ನು ಕಾಪಾಡುತ್ತಾನೆ. ಒಟ್ಟಾರೆ ಭಗವಂತನ ಸರ್ವಾಂತರ್ಯಾಮಿಯಾಗಿ ವಾಯುದೇವರ ಮೂಲಕ ನಮ್ಮನ್ನು ಸಲಹುತ್ತಾನೆ. ವಾಯುದೇವರ ಸೇವೆ ಇದ್ದಾಗ ಮಾನವ ಜೀವಿಯು ಎಲ್ಲದರ ಮರ್ಮವನ್ನು ತಿಳಿಯದು ಇಚ್ಛಾಶಕ್ತಿ, ಜ್ಞಾನಶಕ್ತಿ, ಕ್ರಿಯಾಶಕ್ತಿ ಮೂಲಕ ಹರಿ ವಾಯು ಗುರುಗಳ ಮೊರೆ ಹೋಗಿ ಅಹಂಕಾರ ಬಿಟ್ಟು ಗುರು ಹಿರಿಯರಾದಿ ಎಲ್ಲವನ್ನು ಎಲ್ಲರನ್ನು ಆದರಿಸಬೇಕು.

(ಮುಂದುವರೆಯುತ್ತದೆ)

ಗ್ರಂಥಾವಲೋಕನ



ಮಹಾಭಾರತ ದರ್ಶನ

(ಭಗವಾನ್ವ್ಯಾಸರು-ಪೆರುಂದೇವನಾರ್-ಪಂಪ)

ಇಂಗ್ಲಿಷಮೂಲಕೃತಿ : ಪುರಾಣ ಭಾಸ್ಕರ ಡಾ॥ ಕಂಬಾಲೂರು ವೆಂಕಟೇಶ ಆಚಾರ್ಯ-ಪ್ರಸ್ತುತ ಶ್ರೀ ವಿದ್ಯಾಸಾಗರಮಾಧವತೀರ್ಥರು
ಕನ್ನಡ ಅನುವಾದ : ಪ್ರೊ. ಎಸ್. ಬಿಳಿಗಿರಿವಾಸನ್
ಪ್ರಕಾಶಕರು : ಮಹತಿಪ್ರಕಾಶನ, ಮೈಸೂರು
ಪುಟ : 436
ಬೆಲೆ : ರೂ 600/-
ಪ್ರತಿಗಳಿಗೆ ಸಂಪರ್ಕಿಸಿ : 90366 12484

ಮಹಾಭಾರತ ದರ್ಶನ ಎಂಬ ಈ ಕೃತಿ ನಿಜವಾಗಿಯೂ ಮಹತ್ವದ ಮತ್ತು ಅಪೂರ್ವ ಗ್ರಂಥ. ಡಾ.ಕೆ.ವಿ. ಆಚಾರ್ಯರ ಇಂಗ್ಲಿಷ್ ಕೃತಿ Mahabharata and Variations ಕನ್ನಡ ಮತ್ತು ತಮಿಳು ಸಾಹಿತ್ಯಗಳ ಪರಿಪ್ರೇಕ್ಷ್ಯದಲ್ಲಿ ಅಪಾರ ಮೌಲ್ಯ ಹೊಂದಿರುವ ಸಂಶೋಧನಾ ಗ್ರಂಥ. ಮೂಲ ಮಹರ್ಷಿ ವೇದವ್ಯಾಸರ ಮಹಾಭಾರತವನ್ನು ಆಧಾರವಾಗಿ ಪಡೆದು, ಕನ್ನಡದ ಆದಿಕವಿ ಪಂಪನ ವಿಕ್ರಮಾರ್ಜುನ ವಿಜಯ ಹಾಗೂ ತಮಿಳು ಕವಿ ಪೆರುಂದೇವನಾರ ಭಾರತ ವೆಂಬ ಕೃತಿಗಳೊಂದಿಗೆ ಸಮಗ್ರ ತೌಲನಿಕ ಅಧ್ಯಯನ ನಡೆಸಲಾಗಿದೆ.

ಈ ಕೃತಿಯಲ್ಲಿ ತೌಲನಿಕ ಸಾಹಿತ್ಯ ಅಧ್ಯಯನದ ಆಳವೂ ಇದೆ. ಪುರಾಣಪರಿಜ್ಞಾನವೂ ಇದೆ. ಭಾಷಾತ್ಮಕ ಸಂವೇದನೆಯೂ ಇದೆ. ವ್ಯಾಸರ ಮೂಲ ಕಾವ್ಯದ ಧರ್ಮ-ನೀತಿ ಮೌಲ್ಯಗಳು, ಪಂಪನವೈರಾಗ್ಯ ಶೌರ್ಯಪರನೋಟ, ಪೆರುಂದೇವನಾರರಭಕ್ತಿ ಪರ ಅಭಿವ್ಯಕ್ತಿ - ಈ ಮೂರರಲ್ಲಿನ ಸಾದೃಶ್ಯ ವೈಶಿಷ್ಟ್ಯಗಳನ್ನು ಲೇಖಕರು ಆಳವಾಗಿ ಅನಾವರಣಗೊಳಿಸಿದ್ದಾರೆ.

ಈ ಗ್ರಂಥದ ವೈಶಿಷ್ಟ್ಯವೆಂದರೆ, ಮಹಾಭಾರತದ ಕಥಾ-ತತ್ತ್ವವು ವಿಭಿನ್ನ ಭಾಷಾ ಸಂಸ್ಕೃತಿಗಳಲ್ಲಿ ಹೇಗೆ ರೂಪಾಂತರ ಗೊಂಡಿದೆ ಎಂಬುದನ್ನು ವಿಶ್ಲೇಷಿಸುವಲ್ಲಿ ಈ ಕೃತಿ ಆಕರ ಸ್ವರೂಪದ ಸಂಶೋಧನಾಗ್ರಂಥವಾಗಿದೆ.

ಈ ಶ್ರೇಷ್ಠ ಕೃತಿಯ ಮಹತ್ತ್ವವನ್ನು ಮೊದಲಿಗರಾಗಿ ಅರಿತು ಕನ್ನಡಿಗರಿಗೆದಕ್ಕಿಸುವ ಕಾರ್ಯವನ್ನು ಪ್ರೊ. ಎಸ್.ಬಿಳಿಗಿರಿವಾಸನ್ ಮಾಡಿದ್ದಾರೆ. ಇಂಗ್ಲಿಷ್ಮೂಲದಗಂಭೀರ ತಾತ್ವಿಕತೆ ಮತ್ತು ಸಂಶೋಧನಾ ಶೈಲಿಯನ್ನು ಕನ್ನಡದಲ್ಲಿ ಸಮರ್ಪಕವಾಗಿ ವ್ಯಕ್ತಪಡಿಸುವುದು ಸುಲಭವಲ್ಲ. ಕನ್ನಡ, ತಮಿಳು ಮತ್ತು ಇಂಗ್ಲಿಷ್ ಮೂರು ಭಾಷೆಗಳ ಮೇಲಿನ ಸಮ ದಂಡಿಯಾದ ಪಾಂಡಿತ್ಯ ವಿಲ್ಲದೆ ಇಂತಹ ಭಾಷಾಂತರ ಸಾಧ್ಯವಿಲ್ಲ.

ತೌಲನಿಕ ಸಾಹಿತ್ಯ ಅಧ್ಯಯನ, ಪುರಾಣ ಸಂಶೋಧನೆ ಮತ್ತು ದಕ್ಷಿಣ ಭಾರತೀಯ ಸಾಹಿತ್ಯ ಪರಂಪರೆಯ ಅರಿವಿಗೆ ಈ ಗ್ರಂಥ ಅನಿವಾರ್ಯ ಪಠ್ಯವಾಗುತ್ತದೆ. ಒಟ್ಟಿನಲ್ಲಿ ಮಹಾಭಾರತ ದರ್ಶನ ಎಂಬುದು ಸಂಶೋಧಕರಿಗೂ ಅಧ್ಯಾಪಕರಿಗೂ, ವಿದ್ಯಾರ್ಥಿಗಳಿಗೂ ಮತ್ತು ಸಾಹಿತ್ಯಾಸಕ್ತರಿಗೂ ಅವಶ್ಯ ಓದಬೇಕಾದ ಮಹತ್ವದ ಕೃತಿ. ಕನ್ನಡ ಸಾಹಿತ್ಯ ಭಂಡಾರಕ್ಕೆ ಸೇರ್ಪಡೆಯಾದ ಅಮೂಲ್ಯ ಗ್ರಂಥವೆಂದು ನಿಶ್ಚಯವಾಗಿ ಹೇಳಬಹುದು.



ಹನುಮತ್ರಯರ ದರ್ಶನ

– ಹನುಮಂತ ಮ. ದೇಶಕುಲಕರ್ಣಿ
94803 64915

1. ಕದರ ಮಂಡಲಗಿ ಕಾಂತೇಶ :

ಬ್ಯಾಡಗಿ ತಾಲ್ಲೂಕಿನ ಕದರಮಂಡಲಗಿಯಲ್ಲಿ ನೇರವಾಗಿ ನಿಂತ ಮೂರ್ತಿ ಇರುವುದು ವಿಶೇಷ. ಬ್ಯಾಡಗಿ ತಾಲ್ಲೂಕಿನ ಕದರ ಮಂಡಲಗಿಯಲ್ಲಿ ಎದುರು ಮುಖದ ಮೂರ್ತಿ ಇರುವುದು ವಿಶೇಷ. ಕದರಮಂಡಲಗಿ ರಾಣೆಬೆನ್ನೂರಿನಿಂದ 12 ಕಿ.ಮೀ. ದೂರ ದಲ್ಲಿದೆ. ಕನಕದಾಸರ ಕಾಗಿನೆಲೆಗೆ ಹೋಗುವ ಮಾರ್ಗ ಮಧ್ಯ ದಲ್ಲಿದೆ. ಪ್ರತಿವರ್ಷ ಕಾರ್ತಿಕ ಮಾಸದಲ್ಲಿ ಕಾಂತೇಶ ಸ್ವಾಮಿಯ ರಥೋತ್ಸವ ನಡೆಯುತ್ತದೆ. ಮಾರ್ಗಶಿರ ಮಾಸದ ಮೊದಲನೇ ರವಿವಾರ ದೇವಸ್ಥಾನದ ಪಕ್ಕದ ಪುಷ್ಕರಣಿಯಲ್ಲಿ ತೆಪ್ಪೋತ್ಸವ ನಡೆಯುತ್ತದೆ.

ದೇವಸ್ಥಾನದಲ್ಲಿ ನಿತ್ಯ ಬೆಳಗಿನ ಜಾವದಿಂದ ರಾತ್ರಿ 8 ರ ವರೆಗೆ ಅಭಿಷೇಕ ಹಾಗೂ ಪೂಜೆ ಇತ್ಯಾದಿಗಳು ನಡೆಯುತ್ತದೆ. ಇಡೀ ದಿನ ದೇವರ ದರ್ಶನಕ್ಕೆ ಅವಕಾಶವಿದೆ. ಕದರಮಂಡಲಗಿ ದೇವಸ್ಥಾನದ ಎದುರಿಗಿರುವ ಶಿಲಾ ಧ್ವಜ ಸ್ತಂಭದಲ್ಲಿರುವ ಕ್ರಿ.ಶ. 1503 ರ ಶಾಸನದ ಪ್ರಕಾರ ಕದರಮಂಡಲಗಿ ಗ್ರಾಮದಲ್ಲಿ ಇತಿ ಹಾಸ ಪ್ರಸಿದ್ಧ.

ಕಾಂತೇಶ ಸ್ವಾಮಿಯನ್ನು ನಿತ್ಯ ಮೂರು ಅವತಾರಗಳಲ್ಲಿ ಅಲಂಕರಿಸಿ ಪೂಜೆ ಸಲ್ಲಿಸುವ ಪದ್ಧತಿ ಇಲ್ಲಿದೆ. ಹನುಮಾವ ತಾರ, ಭೀಮಾವತಾರ, ಮಧ್ವಾವತಾರಗಳಲ್ಲಿ ತ್ರಿಕಾಲದಲ್ಲಿ ಪೂಜೆ ಆಗುತ್ತದೆ. ಸೂರ್ಯೋದಯ ಪೂರ್ವದಲ್ಲಿ ಕಾಕಡಾ ರತಿ ಸೇವೆ ನಂತರ ಹನುಮಾವತಾರದ ಪೂಜಾ ಅಭಿಷೇಕ, ಬೆಳಗಿನ ನಾಲ್ಕು ತಾಸಿನೊಳಗಾಗಿ ಭೀಮಾವತಾರದ ಮಹಾ ಪೂಜೆಯು ನಡೆದು ನೈವೇದ್ಯ ಸಮರ್ಪಣೆ ಮಾಡುತ್ತಾರೆ. ರಾತ್ರಿ ಎಂಟು ಗಂಟೆಗೆ ಹರಿನಾಮ ಸಂಕೀರ್ತನೆಯ ಸಂಗೀತ ಸೇವೆಯ ಅವಧಿಯಲ್ಲಿ ಮಧ್ವಾತಾರದ ಪೂಜೆ ನಡೆಯುತ್ತದೆ.

ಪ್ರತಿ ಶುಕ್ರವಾರ ದೇವರಿಗೆ ತೈಲಾಭ್ಯಂಜನ ಹಾಗೂ ಹೂ - ಪೂಜೆ ನಡೆಯುತ್ತದೆ. ಕಾತೇಶನ ಪೂಜೆಯಲ್ಲಿ ಸೇವಂತಿಗೆ ಹೂವಿಗೆ ಮೊದಲ ಆದ್ಯತೆ. ಕದರಮಂಡಲಗಿ ಸುತ್ತ-ಮುತ್ತಲ ಗ್ರಾಮಗಳು ಸೇವಂತಿಗೆ ಹೂವಿಗೆ ಹೆಸರುವಾಸಿ. ಪ್ರತಿ ಶನಿ ವಾರ ಸಾಯಂಕಾಲ ಮಂಗಳಾರತಿ ನಂತರ ಸ್ವಾಮಿಯನ್ನು ರಂಗಮಂಟಪದ ತೂಗು ಮಂಚದಲ್ಲಿ ಕೂರಿಸಿ ಪೂಜೆ ಸಲ್ಲಿ ಸುತ್ತಾರೆ.

2. ಸಂತಾನ ಕರುಣಿಸುವ ಶಾಂತೇಶ

ಈ ಕ್ಷೇತ್ರಕ್ಕೆ ಬಂದರೆ ಕಾಶಿ ರಾಮೇಶ್ವರಕ್ಕೆ ಹೋದಷ್ಟೇ ಫಲ ಪ್ರಾಪ್ತಿಯಾಗುತ್ತದೆ. ಶಾಂತೇಶ ತಲೆಯ ಮೇಲಿದೆ ಶಕ್ತಿಶಾಲಿ ಸಾಲಿಗ್ರಾಮ. ಜಿಲ್ಲೆಯ ಹಲವು ಐತಿಹಾಸಿಕ ಸ್ಥಳಗಳಲ್ಲಿ ಒಂದು



ಸಾತೇನಹಳ್ಳಿ. ಇಲ್ಲಿಯ ಶಾಂತೇಶ ದೇವಸ್ಥಾನ ರಾಜ್ಯದೆಲ್ಲೆಡೆ ಪ್ರಸಿದ್ಧಿ. ಅದೇ ರೀತಿ ಇಲ್ಲಿಯ ಅರ್ಚಕರು ಪ್ರತಿ ವಿಜಯ ದಶಮಿಯಂದು ನೀಡುವ ಸಂತಾನಭಾಗ್ಯದ ಔಷಧಿಯೂ ಸಹ ಪ್ರಸಿದ್ಧಿ ಪಡೆದಿದೆ.

ಸಾತೇನಹಳ್ಳಿಯಲ್ಲಿ 12 ಶಾಸನಗಳು ದೊರಕಿವೆ. ಇಲ್ಲಿರುವ ದೇವಾಲಯಗಳಿಗೆ ನೀಡಿರುವ ದಾನ, ಮಾಡಿರುವ ಅಭಿವೃದ್ಧಿ ಕಾರ್ಯ, ವೀರ ಮರಣ ಹೊಂದಿದವರ ವಿವರ ಇತ್ಯಾದಿಗಳನ್ನು ಈ ಶಾಸನಗಳಲ್ಲಿ ತಿಳಿಸಲಾಗಿದೆ. ಪ್ರಸಕ್ತ ಕಾಲದಲ್ಲಿ ಸಾತೇನಹಳ್ಳಿ ಪ್ರಸಿದ್ಧಿ ಪಡೆದಿರುವುದು ಶಾಂತೇಶ ದೇವಾಲಯದಿಂದಾಗಿ, ಇದು ಹನುಮಂತನ ದೇವ ಸ್ಥಾನ ಮತ್ತು ಹನುಮನನ್ನೇ ಎಲ್ಲರೂ ಶಾಂತೇಶ ಎಂದು ಪೂಜಿಸುತ್ತಾರೆ. ಸಾತೇನಹಳ್ಳಿಗೆ ಜನರು ಆಗಮಿಸುವುದಾದರೆ ಅದು ಶಾಂತೇಶನ ದರ್ಶನ ಕ್ಕಾಗಿ.

ನವರಂಗದಲ್ಲಿ ಚಾಲುಕ್ಯ ಶೈಲಿಯ ನಾಲ್ಕು ಕಂಬಗಳಿವೆ. ಈ ಕಂಬ ಗಳ ಮೊದಲು ನೆಲದಲ್ಲಿ ಇಬ್ಬರು ವ್ಯಕ್ತಿಗಳು ದೇವರಿಗೆ ಸಾಷ್ಟಾಂಗ ನಮಸ್ಕಾರ ಮಾಡುವ ಕೆತ್ತನೆಯಿದೆ. ನವರಂಗದಲ್ಲಿರುವ ಎರಡು ದೇವಕೋಷ್ಠಗಳಲ್ಲಿ ಗಣಪತಿ ಮತ್ತು ಮೈಲಾರ ಲಿಂಗ ದೇವರ ಮೂರ್ತಿಗಳಿವೆ. ಅಂತರಾಳದ ದ್ವಾರವು ಜಾಲಂಧ್ರಗಳನ್ನು ಹೊಂದಿದ್ದು ಲಲಾಟದಲ್ಲಿ ಕೆತ್ತನೆ ನಶಿಸಿ ಹೋಗಿದೆ. ದ್ವಾರದ ಮೇಲಿನ ಅಡ್ಡ ಪಟ್ಟಿಯಲ್ಲಿ ಗಣೇಶ, ಬ್ರಹ್ಮ, ಶಿವ (ನಟರಾಜ) ಸೂರ್ಯ ಮತ್ತು ಮಹಿಷಮರ್ದಿನಿಯ ಕೆತ್ತನೆಯಿದೆ. ಗರ್ಭಗುಡಿಯ ದ್ವಾರವು ಪಂಚ ಶಾಖೆಗಳನ್ನು ಹೊಂದಿದ್ದು ಲಲಾಟದಲ್ಲಿ ಹನುಮಂತನ ಕೆತ್ತನೆಯಿದೆ. ಅಂತರಾಳದ ದ್ವಾರದ ಮೇಲಿರುವ ಕೆತ್ತನೆಯನ್ನೇ ಇಲ್ಲಿ ಪುನರಾವರ್ತಿಸ ಲಾಗಿದೆ.

ಮೂಲ ದೇವಾಲಯ ನವರಂಗ, ಅಂತರಾಳ ಮತ್ತು ಗರ್ಭಗುಡಿಗಳನ್ನು ಮಾತ್ರ ಹೊಂದಿತ್ತು. ಈಗ ಭರ್ಜರಿ ಮುಖ ಮಂಟಪವನ್ನು ನಿರ್ಮಿಸಲಾಗಿದೆ. ಗರ್ಭಗುಡಿಯ ಮೇಲಿರುವ ಕದಂಬ ಶೈಲಿಯ ಗೋಪುರಕ್ಕೂ ಬಣ್ಣ ಬಳಿಯ ಲಾಗಿದೆ. ಇತಿಹಾಸಕಾರರ ಪ್ರಕಾರ ಇದು ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯವಾಗಿದ್ದು, ಗರ್ಭಗುಡಿಯಲ್ಲಿರುವ ಹನುಮಂತನ ವಿಗ್ರಹ ವಿಜಯ ನಗರ ಅರಸರ ಕಾಲದ್ದಾಗಿದೆ.

ಇಲ್ಲಿ ಸಂತಾನಹೀನ ಮಹಿಳೆಯರಿಗೆ ಇದೇ ವಿಜಯದಶಮಿಯಂದು ಶಾಂತೇಶ ದೇವರ (ಆಂಜನೇಯ) ಪ್ರಸಾದ ನೀಡಲಾಗುತ್ತದೆ. ಇಲ್ಲಿ ಮಧ್ಯಾಹ್ನ 2 ಗಂಟೆಯಿಂದ ನಾಲ್ಕು ಗಂಟೆಯವರಿಗೆ ಮಾತ್ರ ಪ್ರಸಾದ ನೀಡಲಾಗುತ್ತದೆ. ಈ ಅರ್ಚಕರ ಪೂರ್ವಜರ ಕಾಲದಿಂದಲೂ ಇಲ್ಲಿ ಗಿಡಮೂಲಿಕೆಗಳನ್ನು ಬಳಸಿ ಸಿದ್ಧಗೊಳಿಸಿದ ಶಾಂತೇಶನ ಪ್ರಸಾದ ನೀಡುತ್ತಾ ಬರಲಾಗಿದೆ. ಮಕ್ಕಳೇ ಆಗುವುದಿಲ್ಲ ಎಂದು ವೈದ್ಯರೇ ಕೈಚೆಲ್ಲಿದ ಪ್ರಕರಣಗಳಲ್ಲಿ ಜನರು ಇಲ್ಲಿ ಬಂದು ಪ್ರಸಾದ ಸೇವಿಸಿದಾಗ ಸಂತಾನ ಹೊಂದಿರುವುದುಂಟು. ನವರಾತ್ರಿಯ ಒಂಬತ್ತು ದಿನಗಳ ಕಾಲ ಪೂಜೆ, ಹೋಮ, ಹವನ ಮಾಡಿ ಪ್ರಸಾದ ಮಾಡಲಾಗುತ್ತದೆ. ಮಹಿಳೆಯರಿಗೆ ತೆಂಗಿನಕಾಯಿ ಉಡಿ ತುಂಬಿದ ಬಳಿಕ ಬಾಳೆ ಹಣ್ಣಿನೊಂದಿಗೆ ಪ್ರಸಾದವನ್ನು ಅರ್ಚಕರು ನೀಡುತ್ತಾರೆ. ಇನ್ನು ಈ ಔಷಧಿಯಿಂದ ಮಕ್ಕಳನ್ನು ಪಡೆದವರು ಮೂರು ವರ್ಷಗಳ ಕಾಲ ಶಾಂತೇಶನ ದೇವಸ್ಥಾನಕ್ಕೆ ಬಂದು ತಮ್ಮ ಹರಕೆ ತೀರಿಸುತ್ತಾರೆ.

ಯಾವುದೇ ಧರ್ಮ ಭೇದವಿಲ್ಲದೇ ಎಲ್ಲ ವರ್ಗದ ಜನರು ವಿಜಯದಶಮಿ ದಿನದಂದು ಈ ದೇವಸ್ಥಾನಕ್ಕೆ ಬಂದು ಪ್ರಸಾದ ಸ್ವೀಕರಿಸುವುದು ವಿಶೇಷ! ಸಾತೇನಹಳ್ಳಿಗೆ ಬರುವ ಬಸ್ಸಿಗೆ ಶಾಂತೇಶ ದೇವಸ್ಥಾನವೇ ನಿಲುಗಡೆ ಎಂದು ಹೆಸರಿಸಲಾಗಿದೆ.

3. ಶಿಕಾರಿಪುರದ ಭ್ರಾಂತೇಶ :

ಶಿವಮೊಗ್ಗದ ಶಿಕಾರಿಪುರವೇ ಹುಚ್ಚುರಾಯ ಎಂದರೆ ಹನುಮಂತ ದೇವರ ಹೆಸರು. ಹನುಮಪ್ಪ ನನ್ನು ಸ್ಥಾಪಿಸಿದ್ದು ವ್ಯಾಸರಾಯರು. ಅವನಿಗೆ ಭ್ರಾಂತೇಶನೆಂದೂ ಕರೆಯುತ್ತಾರೆ. ಭ್ರಾಂತೇಶ, ಶಾಂತೇಶ (ಸಾತೇನಹಳ್ಳಿ) ಹಾಗೂ ಕಾಂತೇಶ (ಕದಲಮಂಡಗಿ) ಈ ಮೂರು ಹನುಮಪ್ಪನನ್ನು ಒಂದೇ ದಿನ ನೋಡಬೇಕೆಂದು ವಾಡಿಕೆಯಿದೆ.

ಅಗಸನಿಗೆ ಕನಸಿನಲ್ಲಿ ಇಲ್ಲಿಯ ಕೆರೆಯಲ್ಲಿ ನೀನು ಬಟ್ಟೆ ಒಗೆಯುವ ಕಲ್ಲಿನ ಕೆಳಗೆ ನಾನಿದ್ದೇನೆ ಎಂದು ಹನುಮಪ್ಪ ಹೇಳಿದನಂತೆ, ನೋಡಿದರೆ ಅದು ಸತ್ಯವಿತ್ತಂತೆ ನಂತರ ಅದನ್ನು ಸ್ಥಾಪಿಸಿದ ರಂತೆ ಎಂದು ಒಂದು ಕತೆ. ಈ ಹನುಮಪ್ಪನ ಹಣೆಯ ಮೇಲೆ ಸಾಲಿಗ್ರಾಮವಿದೆ.

ಈ ಭ್ರಾಂತೇಶನಿಗೆ ಉತ್ಸವ ನಡೆಯುವುದು ಚೈತ್ರ ಶುದ್ಧ ಹುಣ್ಣಿಮೆಯಂದು. ಅದನ್ನು ದವನದ ಹುಣ್ಣಿಮೆಯೆಂದೂ ಕರೆಯುತ್ತಾರೆ. ಅಂದು ಹನುಮ ಜಯಂತಿ. ಹಾಗಾಗಿ ಹನುಮನಿಗೆ ಮೂರು ದಿನ ರಥೋತ್ಸವ ಹಾಗೂ ನಾಲ್ಕನೇ ದಿನ ತೆಪ್ಪೋತ್ಸವ ಜರುಗುತ್ತದೆ. ಮತ್ತೊಂದು ಕಥೆಯ ಪ್ರಕಾರ ವೀರ ಶೈವ ಮತದ ಹುಚ್ಚಪ್ಪಸ್ವಾಮಿ ಎಂಬುವರಿಂದ ನಿರ್ಮಾಣಗೊಂಡಿತೆನ್ನಲಾಗಿದೆ. ತೀರ್ಥಹಳ್ಳಿ ತಾಲ್ಲೂಕಿನ ಕವಲೆ ದುರ್ಗ ಮಠದಿಂದ ಒಂದು ಶಿಕಾರಿಪುರದ ನೆಲವಾಗಿಲಿನಲ್ಲಿ ನೆಲೆಸಿದ್ದ ಹುಚ್ಚಪ್ಪ ಸ್ವಾಮಿ ಸ್ಥಳೀಯ ಬ್ರಾಹ್ಮಣ ಕುಟುಂಬಗಳೊಂದಿಗೆ ಸೌಹಾರ್ದ ಸಂಬಂಧ ಹೊಂದಿ ಬ್ರಾಹ್ಮಣ ದೀಕ್ಷೆ ಪಡೆದು ಮಠವೊಂದನ್ನು ಸ್ಥಾಪಿಸಿಕೊಂಡಿದ್ದನೆನ್ನಲಾಗಿದೆ. ಒಂದು ದಿನ ಹುಚ್ಚಪ್ಪ ಸ್ವಾಮಿಯ ಕನಸಿನಲ್ಲಿ ಹನುಮಂತ ದೇವರು ಕಾಣಿಸಿಕೊಂಡು ಊರಿನ ದೊಡ್ಡ ಕೆರೆಯಲ್ಲಿ ತನ್ನ ವಿಗ್ರಹವಿದ್ದು ಅದನ್ನು ಹೊರತೆಗೆದು ಪ್ರತಿಷ್ಠಾಪಿಸುವಂತೆ ಹೇಳಿದಂತೆ ಆಗುತ್ತದೆ.

ಕದರಮಂಡಲಗಿ ಕಾಂತೇಶ ತೆಪ್ಪೋತ್ಸವ



ಈ ವಿಷಯವನ್ನು ಹುಚ್ಚಪ್ಪಸ್ವಾಮಿ ಊರಿನ ಪ್ರಮುಖರಿಗೆ ತಿಳಿಸಲಾಗಿ ಕೆಲವರು ಅಪಹಾಸ್ಯ ಮಾಡಿ ನಕ್ಕರೂ, ಕೆಲವರಿಗೆ ಅದನ್ನು ಪರೀಕ್ಷಿಸುವ ಮನಸ್ಸಾಗುತ್ತದೆ. ಅವರು ಗ್ರಾಮಸ್ಥರು ನೆರವಿನೊಂದಿಗೆ ಹುಚ್ಚಪ್ಪಸ್ವಾಮಿ ಹೇಳಿದ ಸ್ಥಳದಲ್ಲಿ ಪರಿಶೀಲಿಸಿದಾಗ ಅಲ್ಲಿ ಕಲ್ಲಿನ ಬಾನಿಯೊಂದು ಮಗುಚಿ ಕೊಂಡಿರುವ ಸ್ಥಿತಿಯಲ್ಲಿರುವುದು ಕಂಡು ಬರುತ್ತದೆ. ಅದನ್ನು ಮಗುಚಿ ನೋಡಿದಾಗ ಅಲ್ಲಿ ಮನೋಹರವಾದ ಆಂಜನೇಯನ ವಿಗ್ರಹ ಗೋಚರವಾಗುತ್ತದೆ. ಅದನ್ನು ಹೊರ ತೆಗೆದು ಎಲ್ಲಿ ಪ್ರತಿಷ್ಠಾಪಿಸಬೇಕು ಎಂಬ ಬಗ್ಗೆ ಚರ್ಚೆಯಾಗುತ್ತದೆ.

ಹುಚ್ಚಪ್ಪ ಸ್ವಾಮಿಯವರ ಮಠದಲ್ಲೇ ಪ್ರತಿಷ್ಠಾಪಿಸಬೇಕೆಂದು ತೀರ್ಮಾನವಾದಾಗ ದೇವರಿಗೆ ತನ್ನ ಹೆಸರನ್ನೇ ಇಡುವುದಾದರೆ ಅದಕ್ಕೆ ಅವಕಾಶ ಕೊಡುವುದಾಗಿ ಅವರು ಹೇಳುತ್ತಾರೆ. ಹೀಗಾಗಿ ಹುಚ್ಚರಾಯ ಸ್ವಾಮಿ ಎಂದೇ ಆಂಜನೇಯ ಇಲ್ಲಿ ಹೆಸರಾಗಿದ್ದಾನೆ. ಸುಮಾರು ಆರು ಅಡಿ ಉದ್ದ, ನಾಲ್ಕು ಅಡಿ ಅಗಲ ಮತ್ತು ಆಳವಿರುವ ಕಲ್ಲಿನ ಬಾನಿಯನ್ನು ಈಗಲೂ ದೇವಸ್ಥಾನದಲ್ಲಿ ಕಾಣಬಹುದಾಗಿದೆ.

ತಿದ್ದುಪಡಿ

ಏಪ್ರಿಲ್ ತಿಂಗಳಲ್ಲಿನಲ್ಲಿ ಪ್ರಕಟವಾದ ಮೊದಲಕಲ್ ಶೇಷದಾಸರು ಎಂಬ ಲೇಖನದಲ್ಲಿ ಶಾಲಿವಾಹನ ಶಕ 139 ಎಂದು ಅಚ್ಚಾಗಿದೆ. ಇದನ್ನು 1739 ಎಂದು ಓದಿಕೊಳ್ಳಬೇಕಾಗಿ ವಿನಂತಿ. ಮುದ್ರಣ ದೋಷಕ್ಕಾಗಿ ವಿಷಾಧಿಸುತ್ತೇವೆ.















♦ ‘ಸಪ್ತಗಿರಿ’ ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.

♦ ‘ಸಪ್ತಗಿರಿ’ ಪತ್ರಿಕೆಯಲ್ಲಿ ಅನೇಕ ಆಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.

♦ ‘ಸಪ್ತಗಿರಿ’ ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.

♦ ‘ಸಪ್ತಗಿರಿ’ ಪತ್ರಿಕೆಯ ವಾರ್ಷಿಕ ಚಂದಾ ರೂ. 240/-

♦ ‘ಸಪ್ತಗಿರಿ’ ಪತ್ರಿಕೆಯ ಆಜೀವ ಚಂದಾ (12 ವರ್ಷಗಳು ಮಾತ್ರ) ರೂ. 2400/-

♦ ‘ಸಪ್ತಗಿರಿ’ ವಿದೇಷಿ ವಾರ್ಷಿಕ ಚಂದಾ ರೂ. 1030/-

♦ ‘ಸಪ್ತಗಿರಿ’ ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./**Online(ttdevasthanams.ap.gov.in)** ಮೂಲಕ ಮಾಡಬಹುದು.

♦ ‘ಸಪ್ತಗಿರಿ’ ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು, ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ. ಅಂಚೆ ಮೂಲಕ, ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.

♦ ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್,ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯ ಬೇಕು.

♦ ‘ಸಪ್ತಗಿರಿ’ ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್**(Chiefeditortpt@gmail.com)** ಅನ್ನು ಸಂಪ್ರದಿಸಬೇಕು.

♦ ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ 0877-226435,0877-2264360

♦ ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್, ತಿರುಪತಿ-517507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.

♦ ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.



ಹನುಮಾನ್ ಚಾಲೀಸಾ

ಹನುಮಂತನನ್ನು ಸ್ಮರಿಸುವುದರಿಂದ ಉತ್ತಮ ಬುದ್ಧಿಶಕ್ತಿ, ಸತ್ಕಾರ್ಯಗಳು, ಉತ್ತಮ ದೈಹಿಕ ಶಕ್ತಿ, ಧೈರ್ಯ, ನಿರ್ಭಯತೆ, ರೋಗ ಮುಕ್ತ ಸ್ಥಿತಿ, ಜಡತ್ವದಿಂದ ಮುಕ್ತ ಸ್ಥಿತಿ ಮತ್ತು ಮಾತಿನಲ್ಲಿ ವಾಗ್ಮಿತೆ ಸಿಗುತ್ತದೆ. ಈ ಮಹಾನ್ ಪ್ರಯೋಜನಗಳನ್ನು ಜನಸಾಮಾನ್ಯರಿಗೆ ನೀಡುವ ಸದುದ್ದೇಶದಿಂದ ಸಂತ ತುಳಸೀದಾಸರು "ಹನುಮಾನ್ ಚಾಲೀಸಾ" ವನ್ನು ರಚಿಸಿದರು. ಇದನ್ನು ನಿತ್ಯವು ಪಠಿಸಿದರೆ ಭಯವು ದೂರವಾಗುತ್ತದೆ. ಕಾರ್ಯಸಿದ್ಧಿ, ವಿಜಯವು ಲಭಿಸುತ್ತದೆ. ಆದ್ದರಿಂದ ಸಪ್ತಗಿರಿ ಓದುಗರಿಗೆ ಪ್ರತ್ಯೇಕವಾಗಿ ನೀಡುತ್ತಿದೆ! ಹನುಮಜ್ಜಯಂತಿ ಸಂದರ್ಭವಾಗಿ ಹನುಮಾನ್ ಭಕ್ತರಿಗೆಲ್ಲರಿಗೂ ಶುಭಾಶಯಗಳು.

ಶ್ರೀ ಗುರು ಚರಣ ಸರೋಜ ರಜ
ನಿಜಮನ ಮುಕುರ ಸುಧಾರಿ
ವರಣೌ ರಘುವರ ವಿಮಲ ಯಶ
ಜೋ ದಾಯಕ ಫಲಚಾರಿ ॥

ಅರ್ಥ : ನನ್ನ ಶ್ರೀ ಗುರುವಿನ ಪಾದ ಕಮಲಗಳ ಧೂಳಿನಿಂದ ನನ್ನ ಮನಸ್ಸನ್ನುವ ಕನ್ನಡಿಯನ್ನು ಸ್ವಚ್ಛಗೊಳಿಸಿ (ಶುದ್ಧಿ ಗೊಳಿಸಿ) ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಫಲಗಳನ್ನು ನೀಡುವಂತಹ ರಘು ವಂಶದ ಶ್ರೇಷ್ಠನಾದ ಶ್ರೀರಾಮನ ನಿರ್ಮಲ ವಾದ ಕೀರ್ತಿಯನ್ನು ವರ್ಣಿಸುತ್ತೇನೆ.

ಬುದ್ಧಿಹೀನ ತನು ಜಾನಿಕೇ
ಸುಮಿರೌ ಪವನಕುಮಾರ
ಬಲ ಬುದ್ಧಿ ವಿದ್ಯಾ ದೇಹು ಮೋಹಿ
ಹರಹು ಕಲೇಶ ವಿಕಾರ ॥

ಅರ್ಥ : ನಾನು ಬುದ್ಧಿಹೀನನೆಂದು ತಿಳಿದು, ಪವನ ಪುತ್ರನಾದ ಹನುಮಂತನನ್ನು ಸ್ಮರಿಸುತ್ತೇನೆ. ಎಲೈ ಹನುಮಂತನೇ, ನನಗೆ ಬಲ, ಬುದ್ಧಿ ಮತ್ತು ವಿದ್ಯೆಯನ್ನು ನೀಡು ಹಾಗೂ ನನ್ನ ಲ್ಲಿರುವ ಸಕಲ ಕಷ್ಟಗಳನ್ನು ಮತ್ತು ಮನಸ್ಸಿನ ವಿಕಾರಗಳನ್ನು (ದೋಷಗಳನ್ನು) ದೂರ ಮಾಡು.

ಚೌಪಾಈ
ಜಯ ಹನುಮಾನ ಜ್ಞಾನಗುಣಸಾಗರ।
ಜಯ ಕಪೀಶ ತಿಹುಲೋಕ ಉಜಾಗರ ॥೧॥

ಜ್ಞಾನ ಮತ್ತು ಗುಣಗಳ ಸಾಗರನಾದ ಹನುಮಂತನಿಗೆ ಜಯವಾಗಲಿ. ಮೂರೂ ಲೋಕಗಳಲ್ಲಿ ಪ್ರಖ್ಯಾತನಾದ ವಾನರ ಶ್ರೇಷ್ಠನಿಗೆ ಜಯವಾಗಲಿ.

ರಾಮದೂತ ಅತುಲಿತ ಬಲಧಾಮಾ।
ಅಂಜನಿಪುತ್ರ ಪವನಸುತ ನಾಮಾ ॥2॥

ನೀನು ಶ್ರೀರಾಮನ ದೂತ ಹಾಗೂ ಅಪ್ರತಿಮ ಬಲದ ಅವಾಸಸ್ಥಾನ (ಮನೆ). ಅಂಜನಾದೇವಿಯ ಪುತ್ರನಾದ ನಿನ್ನನ್ನು 'ಪವನ ಸುತ' (ವಾಯುಪುತ್ರ) ಎಂಬ ಹೆಸರಿನಿಂದ ಕರೆ ಯುತ್ತಾರೆ.

ಮಹಾವೀರ ವಿಕ್ರಮ ಬಜರಂಗೀ
ಕುಮತಿ ನಿವಾರ ಸುಮತಿಕೇ ಸಂಗೀ ॥3॥

ಮಹಾವೀರನಾದ, ಪರಾಕ್ರಮಿಯಾದ ನಿನ್ನ ದೇಹವು ವಜ್ರದಂತೆ ಕಠಿಣವಾಗಿದೆ (ಬಜ ರಂಗಿ). ನೀನು ಕೆಟ್ಟ ಬುದ್ಧಿಯನ್ನು ದೂರ ಮಾಡು ವವನು ಮತ್ತು ಒಳ್ಳೆಯ ಬುದ್ಧಿಯುಳ್ಳವರ ಒಡ ನಾಡಿಯಾಗಿದ್ದೀಯೆ.

ಕಂಚನ ವರಣ ವಿರಾಜ ಸುವೇಶಾ
ಕಾನನಕುಂಡಲ ಕುಂಚಿತ ಕೇಶಾ ॥4॥

ನೀನು ಬಂಗಾರದ ಬಣ್ಣದ ಮೈಕಾಂತಿ ಯಿಂದ ಶೋಭಿಸುತ್ತಿದ್ದೀಯೆ ಮತ್ತು ಸುಂದರ ವಾದ ಉಡುಪನ್ನು ಧರಿಸಿದ್ದೀಯೆ. ನಿನ್ನ ಕಿವಿಯಲ್ಲಿ ಕುಂಡಲಗಳು ಹೊಳೆಯುತ್ತಿವೆ ಮತ್ತು ನಿನ್ನ ಕೇಶ ರಾಶಿಯು ಸುರುಳಿಯಾಗಿದೆ.

ಹಾಥ ವಜ್ರ ಔ ಧ್ವಜಾ ವಿರಾಜೈ।
ಕಾಂಧೇ ಮೂಂಜ ಜನೇವೂ ಸಾಜೈ ॥5॥

ನಿನ್ನ ಕೈಗಳಲ್ಲಿ ವಜ್ರಾಯುಧ ಮತ್ತು ಧ್ವಜವು ಶೋಭಿಸುತ್ತಿವೆ. ನಿನ್ನ ಹೆಗಲ ಮೇಲೆ 'ಮೂಂಜ' ಎಂಬ ಹುಲ್ಲಿನಿಂದ ತಯಾರಿಸಿದ ಜನಿ ವಾರವು ರಾರಾಜಿಸುತ್ತಿದೆ.

ಶಂಕರ ಸುವನ ಕೇಸರೀನಂದನ
ತೇಜ ಪ್ರತಾಪ ಮಹಾ ಜಗವಂದನ ॥6॥

ನೀನು ಶಿವನ ಅಂಶದವನು (ಅಂಶಾವ ತಾರ) ಮತ್ತು ಕೇಸರಿಯ ಮಗನು. ನಿನ್ನ ತೇಜಸ್ಸು ಮತ್ತು ಪರಾಕ್ರಮವು ಈ ಜಗತ್ತಿನಿಂದಲೇ ಪೂಜಿಸಲ್ಪಡುತ್ತದೆ.

ವಿದ್ಯಾವಾನ ಗುಣೀ ಅತಿಚಾತುರ
ರಾಮ ಕಾಜ ಕರಿವೇಕೋ ಆತುರ ॥7॥

ನೀನು ಮಹಾ ವಿದ್ವಾಂಸನು ಗುಣ ವಂತನು ಮತ್ತು ಅತ್ಯಂತ ಚತುರನು. ಶ್ರೀರಾಮನ ಕಾರ್ಯಗಳನ್ನು ಪೂರೈಸಲು ನೀನು ಸದಾ ಕಾತರನಾಗಿರುತ್ತೀಯೆ.


ಪ್ರಭು ಚರಿತ್ರ ಸುನಿವೇಕೋ ರಸಿಯಾ।
ರಾಮಲಖನ ಸೀತಾ ಮನ ಬಸಿಯಾ ॥8॥

ಶ್ರೀರಾಮನ ಚರಿತ್ರೆಯನ್ನು ಕೇಳುವು ದರಲ್ಲಿ ನೀನು ಆನಂದಪಡುತ್ತೀಯೆ. ಶ್ರೀರಾಮ, ಲಕ್ಷ್ಮಣ ಮತ್ತು ಸೀತಾಮಾತೆಯು ಸದಾ ನಿನ್ನ ಹೃದಯದಲ್ಲಿ ನೆಲೆಸಿದ್ದಾರೆ.



ಸೂಕ್ಷ್ಮರೂಪ ಧರಿ ಸಿಯಹಿ ದಿಖಾವಾ
ವಿಕಟರೂಪ ಧರಿ ಲಂಕ ಜರಾವಾ ॥9॥

ಲಂಕೆಯಲ್ಲಿ ನೀನು ಅತ್ಯಂತ ಚಿಕ್ಕ (ಸೂಕ್ಷ್ಮ) ರೂಪವನ್ನು ಧರಿಸಿ ಸೀತಾ ದೇವಿಗೆ ಕಾಣಿಸಿಕೊಂಡೆ. ಆದರೆ ಲಂಕೆಯನ್ನು ಸುಡುವಾಗ ಭೀಕರವಾದ (ವಿಕಟ) ರೂಪವನ್ನು ತಾಳಿದೆ.



ಭೀಮರೂಪ ಧರಿ ಅಸುರ ಸಂಹರೇ।
ರಾಮಚಂದ್ರಕೇ ಕಾಜ ಸಂವಾರೇ ॥10॥

ಅತ್ಯಂತ ಬೃಹತ್ (ಭೀಮ) ರೂಪವನ್ನು ತಾಳಿ ರಾಕ್ಷಸರನ್ನು ಸಂಹರಿಸಿದೆ ಮತ್ತು ಈ ಮೂಲಕ ಶ್ರೀರಾಮಚಂದ್ರನ ಸಕಲ ಕಾರ್ಯಗಳನ್ನು ಯಶಸ್ವಿಯಾಗಿ ನೆರವೇರಿಸಿದೆ.




ಲಾಯ ಸಜೀವನ ಲಖನ ಜಿಯಾಯೇ
ಶ್ರೀರಘುವೀರ ಹರಷಿ ವುರ ಲಾಯೇ ॥11॥

ನೀನು ಸಂಜೀವಿನಿ ಮೂಲಿಕೆಯನ್ನು ತಂದು ಲಕ್ಷ್ಮಣನ ಪ್ರಾಣವನ್ನು ಉಳಿಸಿದೆ. ಇದರಿಂದ ಅತ್ಯಂತ ಹರ್ಷಗೊಂಡ ಶ್ರೀರಾಮಚಂದ್ರನು ನಿನ್ನನ್ನು ಪ್ರೀತಿಯಿಂದ ಅಪ್ಪಿಕೊಂಡನು.


ರಘುಪತಿ ಕೀನ್ಹೀ ಬಹುತ ಬಡಾಯೀ।
ತುಮ ಮಮ ಪ್ರಿಯ ಭರತ ಸಮಭಾಯೀ ॥12॥

ರಘುಪತಿಯಾದ ಶ್ರೀರಾಮನು ನಿನ್ನನ್ನು ಬಹುವಾಗಿ ಶ್ಲಾಘಿಸಿದನು. "ನೀನು ನನಗೆ ನನ್ನ ತಮ್ಮನಾದ ಭರತನಷ್ಟೇ ಪ್ರಿಯನಾದವನು" ಎಂದು ರಾಮನು ನಿನ್ನನ್ನು ಹೊಗಳಿದನು.



ಸಹಸ ವದನ ತುಮ್ಹರೋ ಯಶಗಾವೈ।
ಅಸ ಕಹಿ ಶ್ರೀಪತಿ ಕಂಠ ಲಗಾವೈ ॥13॥

"ಸಾವಿರ ಮುಖವುಳ್ಳ ಆದಿಶೇಷನು ನಿನ್ನ ಕೀರ್ತಿಯನ್ನು ಹಾಡುತ್ತಾನೆ." ಎಂದು ಹೇಳುತ್ತಾ ಶ್ರೀಪತಿಯಾದ ರಾಮನು ನಿನ್ನನ್ನು ಗಾಢವಾಗಿ ಆಲಂಗಿಸಿಕೊಂಡನು.



ಸನಕಾದಿಕ ಬ್ರಹ್ಮಾದಿ ಮುನೀಶಾ
ನಾರದ ಶಾರದ ಸಹಿತ ಅಹೀಶಾ ॥14॥

ಸನಾಕದಿ ಮುನಿಗಳು, ಬ್ರಹ್ಮಾದಿ ದೇವತೆಗಳು, ನಾರದರು, ಸರಸ್ವತಿ ದೇವಿ ಮತ್ತು ಆದಿಶೇಷನು ಸಹ ನಿನ್ನ ಮಹಿಮೆಯನ್ನು ವರ್ಣಿಸಲು ಅಶಕ್ತರಾಗಿದ್ದಾರೆ (ಅಂದರೆ ನಿನ್ನ ಮಹಿಮೆಯೆಷ್ಟು ಅಪಾರ).

ಯಮ ಕುಬೇರ ದಿಗಪಾಲ ಜಹಾಂತೇ।
ಕವಿ ಕೋವಿದ ಕಹಿ ಸಕೇ ಕಹಾಂತೇ ॥15॥

ಯಮಧರ್ಮರಾಜ, ಕುಬೇರ ಮತ್ತು ದಿಕ್ಪಾಲಕರು ಕೂಡ ನಿನ್ನನ್ನು ಸ್ತುತಿಸುತ್ತಾರೆ. ಇನ್ನು ಸಾಮಾನ್ಯ ಕವಿಗಳು ಮತ್ತು ಪಂಡಿತರು ನಿನ್ನ ಕೀರ್ತಿಯನ್ನು ಪೂರ್ಣವಾಗಿ ವರ್ಣಿಸಲು ಹೇಗೆ ತಾನೇ ಸಾಧ್ಯ?

ತುಮ ಉಪಕಾರ ಸುಗ್ರೀವ ಹಿಕೀನ್ಹಾ।
ರಾಮ ಮಿಲಾಯ ರಾಜಪದ ದೀನ್ಹಾ ॥ 16॥

ನೀನು ಸುಗ್ರೀವನಿಗೆ ಮಹತ್ತರವಾದ ಉಪಕಾರ ಮಾಡಿದೆ. ಅವನನ್ನು ಶ್ರೀರಾಮನಿಗೆ ಪರಿಚಯಿಸಿ, ಅವನಿಗೆ ಮರಳಿ ರಾಜ್ಯ ಸಿಗುವಂತೆ (ರಾಜ ಪದವಿ) ಮಾಡಿದೆ.

ತುಮ್ಹರೋ ಮಂತ್ರ ವಿಭೀಷಣ ಮಾನಾ।
ಲಂಕೇಶ್ವರ ಭಯ ಸಬಜಗ ಜಾನಾ ॥17॥

ನಿನ್ನ ಉಪದೇಶವನ್ನು (ಮಂತ್ರ) ವಿಭೀಷಣನು ಪಾಲಿಸಿದನು, ಆ ಕಾರಣದಿಂದಲೇ ಅವನು ಲಂಕೆಯ ರಾಜನಾದನು ಎಂಬ ವಿಷಯ ಇಡೀ ಜಗತ್ತಿಗೆ ತಿಳಿದಿದೆ.

ಯುಗ ಸಹಸ್ರ ಯೋಜನ ಪರಭಾನೂ।
ಲೀಲ್ಯೋ ತಾಹಿ ಮಧುರ ಫಲ ಜಾನೂ ॥18॥

ಸಾವಿರಾರೂ ಯೋಜನ ದೂರದಲ್ಲಿದ್ದ ಸೂರ್ಯನನ್ನು ನೀನು ಒಂದು ಸಿಹಿಯಾದ ಹಣ್ಣೆಂದು ಭಾವಿಸಿ ನುಂಗಲು ಹಾರಿದ್ದೆ. (ಇದು ಹನುಮಂತನ ಬಾಲ್ಯದ ಪರಾಕ್ರಮವನ್ನು ಸೂಚಿಸುತ್ತದೆ).

ಪ್ರಭು ಮುದ್ರಿಕಾ ಮೇಲಿಮುಖ ಮಾಹೀ।
ಜಲಧಿ ಲಾಂಘಿಗಯೇ ಅಚರಜ ನಾಹೀ ॥19॥

ಶ್ರೀರಾಮನ ಮುದ್ರಿಕೆಯನ್ನು (ಉಂಗುರ) ಬಾಯಿಯಲ್ಲಿ ಇಟ್ಟುಕೊಂಡು ನೀನು ನೂರು ಯೋಜನ ವಿಸ್ತಾರದ ಸಮುದ್ರವನ್ನು ಹಾರಿದಾಟಿದೆ. ನಿನ್ನಂತಹ ಶಕ್ತನಿಗೆ ಇದರಲ್ಲಿ ಆಶ್ಚರ್ಯವೇನೂ ಇಲ್ಲ.

ದುರ್ಗಮ ಕಾಜ ಜಗತಕೇ ಜೇತೇ ।
ಸುಗಮ ಅನುಗ್ರಹ ತುಮ್ಹರೇ ತೇತೇ ॥20॥

ಈ ಜಗತ್ತಿನಲ್ಲಿ ಮಾಡಲು ಅಸಾಧ್ಯವೆನಿಸುವ (ದುರ್ಗಮ) ಕೆಲಸಗಳೆಲ್ಲವೂ ನಿನ್ನ ಅನುಗ್ರಹವಿದ್ದರೆ ಅತ್ಯಂತ ಸುಲಭವಾಗಿ (ಸುಗಮ) ನೆರವೇರುತ್ತವೆ.

ರಾಮ ದುವಾರೇ ತುಮ ರಖಿವಾರೇ ।
ಹೋತ ನ ಆಜ್ಞಾ ಬಿನು ಪೈಸಾರೇ ॥2॥

ಶ್ರೀರಾಮನ ದ್ವಾರಕ್ಕೆ ನೀನೇ ಕಾವಲುಗಾರ (ರಕ್ಷಕ). ನಿನ್ನ ಅನುಮತಿ ಇಲ್ಲದೆ ಯಾರೂ ರಾಮನ ಸನ್ನಿಧಿಯನ್ನು ಪ್ರವೇಶಿಸಲು ಸಾಧ್ಯವಿಲ್ಲ.(ಅಂದರೆ ರಾಮನ ಕೃಪೆ ಪಡೆಯಲು ಹನುಮಂತನ ಕೃಪೆ ಮೊದಲು ಬೇಕು).

ಸಬ ಸುಖ ಲಹೈ ತುಮ್ಹಾರೀ ಶರಣಾ ।
ತುಮ ರಕ್ಷಕ ಕಾಹೂಕೋ ಡರನಾ ॥22॥

ನಿನ್ನ ಶರಣು ಬಂದವರಿಗೆ ಸಕಲ ಸುಖಗಳೂ ಲಭಿಸುತ್ತವೆ. ನೀನೇ ರಕ್ಷಕನಾಗಿರುವಾಗ ಯಾರಿಗೂ ಹೆದರುವ ಅವಶ್ಯಕತೆಯೇ ಇಲ್ಲ.

ಆಪನ ತೇಜ ಸಂಹಾರೋ ಆಪೈ ।
ತೀನೋಂ ಲೋಕ ಹಾಂಕ ತೇಂ ಕಾಂಪೈ ॥23॥

ನಿನ್ನ ಅಪಾರವಾದ ತೇಜಸ್ಸನ್ನು ನಿಯಂತ್ರಿಸಲು ನಿನಗೆ ಮಾತ್ರ ಸಾಧ್ಯ. ನೀನು ಒಮ್ಮೆ ಸಿಂಹ ಗರ್ಜನೆ ಮಾಡಿದರೆ ಸಾಕು, ಮೂರೂ ಲೋಕಗಳು ನಡುಗುತ್ತವೆ.

ಭೂತಪಿಶಾಚ ನಿಕಟ ನಹಿಂ ಆವೈ ।
ಮಹಾವೀರ ಜಬನಾಮ ಸುನಾವೈ ॥24॥

"ಮಹಾವೀರ" ಎಂಬ ನಿನ್ನ ನಾಮವನ್ನು ಜಪಿಸಿದರೆ ಸಾಕು, ಭೂತ-ಪ್ರೇತ-ಪಿಶಾಚಿಗಳಂತಹ ದುಷ್ಟ ಶಕ್ತಿಗಳು ಹತ್ತಿರ ಸುಳಿಯುವುದಕ್ಕೂ ಹೆದರುತ್ತವೆ.

ನಾಸೈ ರೋಗ ಹರೈ ಸಬ ಪೀರಾ ।
ಜಪತ ನಿರಂತರ ಹನುಮತ ವೀರಾ ॥25॥

ನಿರಂತರವಾಗಿ ಹನುಮಂತನ ನಾಮವನ್ನು ಜಪಿಸುವ ಭಕ್ತರ ಸಮಸ್ತ ರೋಗಗಳು ನಾಶವಾಗುತ್ತವೆ ಮತ್ತು ಅವರ ಎಲ್ಲಾ ನೋವುಗಳೂ ದೂರವಾಗುತ್ತವೆ.

ಸಂಕಟತೇ ಹನುಮಾನ ಛುಡಾವೈ ।
ಮನ ಕ್ರಮ ವಚನ ಧ್ಯಾನ ಜೋ ಲಾವೈ ॥26॥

ಮನಸ್ಸು,ಕೆಲಸ (ಕರ್ಮ)ಮತ್ತು ಮಾತುಗಳಿಂದ ಯಾರೂ ಹನುಮಂತನನ್ನು ಶ್ರದ್ಧೆಯಿಂದ ಧ್ಯಾನಿಸುತ್ತಾರೋ, ಅವರನ್ನು ಹನುಮಂತನು ಸಕಲ ಸಂಕಷ್ಟಗಳಿಂದ ಪಾರು ಮಾಡುತ್ತಾನೆ.

ಸಬ ಪರ ರಾಮ ತಪಸ್ವೀ ರಾಜಾ।
ತಿನಕೇ ಕಾಜ ಸಕಲ ತುಮ ಸಾಜಾ ॥27॥

ತಪಸ್ವಿಗಳಲ್ಲಿ ಶ್ರೇಷ್ಠನಾದ ರಾಜ ರಾಮಚಂದ್ರನೇ ಎಲ್ಲರಿಗೂ ಅಧಿಪತಿ. ಅಂತಹ ರಾಮನ ಕಠಿಣವಾದ ಕಾರ್ಯಗಳನ್ನೆಲ್ಲಾ ನೀನೇ ಸುಲಭವಾಗಿ ಪೂರೈಸಿಕೊಟ್ಟಿದ್ದೀಯೆ.

ಔರ ಮನೋರಥ ಜೋ ಕೋಯೀ ಲಾವೈ।
ತಾಸು ಅಮಿತ ಜೀವನ ಫಲ ಪಾವೈ ॥28॥

ಯಾರಾದರೂ ತಮ್ಮ ಮನದ ಆಸೆಯನ್ನು (ಮನೋರಥ) ನಿನ್ನ ಮುಂದೆ ತೋಡಿಕೊಂಡರೆ, ಅವರು ಜೀವನದ ಅಮಿತವಾದ (ಅಪಾರವಾದ) ಫಲಗಳನ್ನು ಪಡೆದುಕೊಳ್ಳುತ್ತಾರೆ.

ಚಾರೋಂ ಯುಗ ಪ್ರತಾಪ ತುಮ್ಹಾರಾ
ಹೈ ಪರಸಿದ್ಧ ಜಗತ ಉಜಿಯಾರಾ ॥29॥


ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ನಾಲ್ಕೂ ಯುಗಗಳಲ್ಲಿ ನಿನ್ನ ಪ್ರತಾಪವು ಹರಡಿದೆ. ನಿನ್ನ ಕೀರ್ತಿಯು ಇಡೀ ಜಗತ್ತನ್ನೇ ಪ್ರಕಾಶಿಸುವಂತೆ ಮಾಡಿದೆ.

ಸಾಧು ಸಂತಕೇ ತುಮ ರಖಿವಾರೇ।
ಅಸುರ ನಿಕಂದನ ರಾಮ ದುಲಾರೇ ॥30॥

ನೀನು ಸಾಧು ಸಂತರನ್ನು ರಕ್ಷಿಸುವವನು ಮತ್ತು ರಾಕ್ಷಸರನ್ನು (ಅಸುರರನ್ನು) ನಾಶಮಾಡುವವನು. ನೀನು ಶ್ರೀರಾಮನಿಗೆ ಅತ್ಯಂತ ಪ್ರಿಯನಾದವನು.

ಅಷ್ಟ ಸಿದ್ಧಿ ನವನಿಧಿಕೇ ದಾತಾ ।
ಅಸವರ ದೀನ್ಹ ಜಾನಕೀ ಮಾತಾ ॥31॥

ಎಂಟು ಸಿದ್ಧಿಗಳನ್ನು ಮತ್ತು ಒಂಬತ್ತು ನಿಧಿಗಳನ್ನು ಯಾರಿಗಾದರೂ ನೀಡಬಲ್ಲ ಶಕ್ತಿ ನಿನಗಿದೆ. ಇಂತಹ














ಮಹಾನ್ ವರವನ್ನು ನಿನಗೆ ಜಾನಕೀ ಮಾತೆಯಾದ ಸೀತಾದೇವಿಯು ನೀಡಿದ್ದಾಳೆ.


ರಾಮ ರಸಾಯನ ತುಮ್ಹರೇ ಪಾಸಾ।
ಸಾದಾರತುಮ ರಘುಪತಿ ಕೇ ದಾಸಾ ॥32॥

ರಾಮನಾಮವೆಂಬ ಔಷಧಿಯು (ರಸಾಯನ)ಸದಾ ನಿನ್ನ ಬಳಿಯಿದೆ. ನೀನು ಯಾವಾಗಲೂ ರಘುಪತಿಯಾದ ಶ್ರೀರಾಮನ ಪರಮ ಭಕ್ತನಾಗಿ (ದಾಸನಾಗಿ) ನೆಲೆಸಿದ್ದೀಯೆ.



ತುಮ್ಹರೇ ಭಜನ ರಾಮಕೋ ಪಾವೈ।
ಜನ್ಮ ಜನ್ಮ ಕೇ ದುಖ ಬಿಸರಾವೈ ॥33॥

ನಿನ್ನನ್ನು ಭಜಿಸುವುದರಿಂದ ಭಕ್ತರಿಗೆ ಶ್ರೀರಾಮನ ಕೃಪೆ ಲಭಿಸುತ್ತದೆ ಮತ್ತು ಅವರ ಜನ್ಮ ಜನ್ಮಾಂತರಗಳ ದುಃಖಗಳೆಲ್ಲವೂ ಮರೆತು ಹೋಗುತ್ತವೆ (ದೂರವಾಗುತ್ತವೆ).



ಅಂತಕಾಲ ರಘುಪತಿ ಪುರ ಜಾಯೀ
ಜಹಾಂ ಜನ್ಮಿ ಹರಿಭಕ್ತ ಕಹಾಯೀ ॥34॥

ನಿನ್ನ ಭಕ್ತರು ಅಂತ್ಯಕಾಲದಲ್ಲಿ ಶ್ರೀರಾಮನ ಪರಂಧಾಮವನ್ನು (ವೈಕುಂಠ) ಸೇರುತ್ತಾರೆ. ಅಲ್ಲಿ ಅವರು ಹರಿ ಭಕ್ತರೆಂಬ ಹೆಸರಿನಿಂದ ಶಾಶ್ವತವಾಗಿ ನೆಲೆಸುತ್ತಾರೆ.



ಔರ ದೇವತಾ ಚಿತ್ತನ ಧರಯೀ।
ಹನುಮತ ಸೇಯಿ ಸರ್ವಸುಖಕರಯೀ ॥35॥

ಬೇರೆ ಯಾವುದೇ ದೇವತೆಗಳನ್ನು ಮನಸ್ಸಿನಲ್ಲಿ ಸ್ಮರಿಸದಿದ್ದರೂ ಸಹ ಕೇವಲ ಹನುಮಂತನನ್ನು ಸೇವಿಸುವುದರಿಂದಲೇ ಭಕ್ತರು ಸಕಲ ಸುಖಗಳನ್ನು ಪಡೆದುಕೊಳ್ಳುತ್ತಾರೆ.



ಸಂಕಟ ಕಟೈ ಮಿಟೈ ಸಬ ಪೀರಾ।
ಜೋ ಸುಮಿರೈ ಹನುಮತ ಬಲವೀರಾ ॥36॥

ಶಕ್ತಿಶಾಲಿಯಾದ ಹನುಮಂತನನ್ನು ಯಾರು ಸ್ಮರಿಸುತ್ತಾರೋ, ಅವರ ಸಕಲ ಸಂಕಷ್ಟಗಳು ನಿವಾರಣೆಯಾಗುತ್ತವೆ ಮತ್ತು ದೈಹಿಕ ಹಾಗೂ ಮಾನಸಿಕ ನೋವುಗಳು (ಪೀಡೆಗಳು) ನಾಶವಾಗುತ್ತವೆ.

ಜೈ ಜೈ ಜೈ ಹನುಮಾನ ಗೋಸಾಯೀ।
ಕೃಪಾ ಕರೋ ಗುರು ದೇವ ಕೀ ನಾಯೀ ॥37॥

ಇಂದ್ರಿಯಗಳನ್ನು ಗೆದ್ದ ಹನುಮಂತನೇ (ಗೋಸಾಯಿ), ನಿನಗೆ ಜಯವಾಗಲಿ. ಒಬ್ಬ ಸದ್ಗುರುವಿನಂತೆ ನನ್ನ ಮೇಲೆ ನಿನ್ನ ಕೃಪೆಯನ್ನು ತೋರು.

ಜೋ ಶತವಾರ ಪಾಠಕರ ಜೋಯೀ।
ಛೂಟಹಿಬಂದಿ ಮಹಾಸುಖ ಹೋಯೀ ॥38॥

ಯಾರು ಈ ಚಾಲೀಸಾವನ್ನು ನೂರು ಬಾರಿ (ಶತವಾರ) ಪಠಿಸುತ್ತಾರೋ, ಅವರು ಸಂಸಾರವೆಂಬ ಬಂಧನದಿಂದ ಮುಕ್ತರಾಗಿ ಮಹಾನ್ ಸುಖವನ್ನು (ಮೋಕ್ಷವನ್ನು) ಪಡೆಯುತ್ತಾರೆ.

ಜೋ ಯಹ ಪಡೈ ಹನುಮಾನ ಚಾಲೀಸಾ।
ಹೋಯ ಸಿದ್ಧಿ ಸಾಖೀ ಗೌರೀಸಾ ॥39॥

ಯಾರು ಈ ಹನುಮಾನ್ ಚಾಲೀಸಾವನ್ನು ಓದುತ್ತಾರೋ ಅವರಿಗೆ ಸಕಲ ಕಾರ್ಯಗಳಲ್ಲಿ ಸಿದ್ಧಿ ಲಭಿಸುತ್ತದೆ. ಇದಕ್ಕೆ ಗೌರೀಪತಿಯಾದ ಶಿವನೇ ಸಾಕ್ಷಿ.

ತುಲಸೀದಾಸ ಸದಾ ಹರಿಚೇರಾ।
ಕೀಜೈನಾಥ ಹೃದಯ ಮಡಡೇರಾ ॥40॥

ತುಲಸೀದಾಸರಾದ ನಾನು ಸದಾ ಶ್ರೀಹರಿಯ ಸೇವಕನಾಗಿದ್ದೇನೆ. ಎಲೈ ಹನುಮಂತನೇ, ನನ್ನ ಹೃದಯದಲ್ಲಿ ನೀನು ಶಾಶ್ವತವಾಗಿ ನೆಲೆಸು.

ದೋಹಾ

ಪವನತನಯ ಸಂಕಟ ಹರಣ
ಮಂಗಳ ಮೂರುತಿ ರೂಪ ॥
ರಾಮ ಲಖನ ಸೀತಾ ಸಹಿತ
ಹೃದಯ ಬಸಹು ಸುರ ಭೂಪ ॥

ಅರ್ಥ: ಸಂಕಷ್ಟಗಳನ್ನು ಹರಿಸುವ ಪವನಪುತ್ರನೇ, ಮಂಗಳಕರವಾದ ರೂಪವನ್ನು ಹೊಂದಿರುವವನೇ, ದೇವತೆಗಳಿಗೂ ಅಧಿಪತಿಯಾದವನೇ! ನೀನು ಶ್ರೀರಾಮ, ಲಕ್ಷ್ಮಣ ಮತ್ತು ಸೀತಾ ದೇವಿಯೊಡನೆ ಸದಾ ನನ್ನ ಹೃದಯದಲ್ಲಿ ನೆಲೆಸಿರು.

ಶ್ರೀ ಶ್ರೀನಿವಾಸ ತೀರ್ಥರು

ಡಾ॥ ರೂಪಶ್ರೀ ಶಶಿಕಾಂತ್
89041 26661

ಯದುನಾಥ ಪದಾಂಬೋಜ
ಸಂಸಕ್ತೋ ಹಂಸರಾಣ್ಮದೇ।
ಶ್ರೀನಿವಾಸ ಗುರುರ್ಭೂಯಾದ್
ವಾಸವೀಸೂನು ಪೂಜಕಃ॥

ವೈಶಾಖ ಮಾಸದ ಕೃಷ್ಣ ಪಕ್ಷದ ಪಂಚಮಿಯಂದು ತಮ್ಮ ಗುರುಗಳಾದ ವ್ಯಾಸ ತೀರ್ಥರ ಬೃಂದಾವನಕ್ಕೆ ಒರಗಿಕೊಂಡು ದೇಹ ತ್ಯಾಗ ಮಾಡಿದ ಅತ್ಯಂತ ಗುರು ಭಕ್ತ ರಾದ ಶ್ರೀನಿವಾಸ ತೀರ್ಥರ ಆರಾಧನೆ. ವ್ಯಾಸತೀರ್ಥರ ಬೃಂದಾವನದ ಜೊತೆಯಲ್ಲೇ ನವ ಬೃಂದಾವನದಲ್ಲಿ ಅವರ ಬೃಂದಾವನವಿದೆ. ಶ್ರೀಮತ್ ವ್ಯಾಸರಾಜ ಗುರು ಸಾರ್ವ ಭೌಮರ ಕುರಿತಾದ ಗ್ರಂಥವನ್ನು ಇವರು ಬರೆದಿದ್ದಾರೆ. ಅಲ್ಲದೆ ಪರಮ ಗುರುಗಳಾದ ಬ್ರಹ್ಮಣ್ಯ ತೀರ್ಥರ ಬಗ್ಗೆ ಸ್ತುತಿಯನ್ನು ರಚನೆ ಮಾಡಿದ್ದಾರೆ.



ವ್ಯಾಸತೀರ್ಥರ ಅನೇಕ ಅನೇಕ ಶಿಷ್ಯರ ವೃಂದದಲ್ಲಿ ಅತ್ಯಂತ ಮೇಧಾವಿಗಳಾಗಿ ಬಹಳ ಸೊಗಸಾಗಿ ಭಾಗವತಕ್ಕೆ ವ್ಯಾಖ್ಯಾನವನ್ನು ಮಾಡಿದಂತಹ ವೈರಾಗ್ಯ ಶಿಖಾಮಣಿಗಳಾದ ಇವರಿಗೆ, ವ್ಯಾಸತೀರ್ಥರು ಪಟ್ಟಾಭಿಷೇಕವನ್ನು ಮಾಡಿ ಶ್ರೀನಿವಾಸತೀರ್ಥ ಎಂಬ ಹೆಸರಿನಿಂದ ಸನ್ಯಾಸವನ್ನು ಕೊಟ್ಟರು. ತಾವು 12 ವರ್ಷ ಶ್ರೀನಿವಾಸ ದೇವರ ಪೂಜೆ ಮಾಡಿದ್ದ ನೆನಪಿಗಾಗಿ ಶಿಷ್ಯನಿಗೆ ಶ್ರೀನಿವಾಸತೀರ್ಥ ಎಂದು ನಾಮ ಕರಣ ಮಾಡಿದರು. ವ್ಯಾಸರಾಯರ ತಿರುಪತಿಯ ಧರ್ಮಾಧಿಕಾರ ಅಪಾರ ಶಿಷ್ಯ ವೃಂದ, ಅಪಾರವಾದ ಸಂಪತ್ತು ಮತ್ತು ರಾಜ ಗುರುತ್ವ ಎಲ್ಲವೂ ತಮ್ಮ ಗುರುಗಳು ಕಾಲವಾದ ನಂತರ 1539 ರಲ್ಲಿ ಶ್ರೀನಿವಾಸ ತೀರ್ಥರಿಗೆ ಬಂದಿತು.

ಶ್ರೀವ್ಯಾಸರಾಜರಿಂದ ನರಸಿಂಹ ಮಂತ್ರೋಪದೇಶವನ್ನು ಪಡೆದುಕೊಂಡಿದ್ದ ಪುಣ್ಯಾತ್ಮರು. ಮಂತ್ರ ಜಪದಿಂದ ಅಪಾರ ಸಿದ್ಧಿಯನ್ನು ಪಡೆದಿದ್ದಂತಹ ಇವರು ಅಚ್ಚುತರಾಯ ಮತ್ತು ರಾಮರಾಯ ಇಬ್ಬರ ಕಾಲದಲ್ಲೂ ರಾಜಗುರುಗಳಾಗಿದ್ದರು. ಅವರ ಗುರುಕುಲದಲ್ಲಿ ಬ್ರಹ್ಮಚಾರಿಗಳು ಗೃಹಸ್ಥರು ಮತ್ತು ಸನ್ಯಾಸಿಗಳು ಎಲ್ಲರಿಗೂ ಪಾಠ ಪ್ರವಚನ ನಡೆಯುತ್ತಿತ್ತು ಅಪಾರ ಪಾಂಡಿತ್ಯದಿಂದ 7 ಬಾರಿ ಚಂದ್ರಿಕಾ ಗ್ರಂಥವನ್ನು ಪಾಠ ಮಾಡಿದ್ದರು. ಕುಂದಾಪುರದಲ್ಲಿ ಸಿಕ್ಕಿರುವ ಒಂದು ಶಾಸನದಲ್ಲಿ ವ್ಯಾಸತೀರ್ಥರ ಶಿಷ್ಯಂದಿರಾದ ಶ್ರೀನಿವಾಸತೀರ್ಥರಿಗೆ ಗ್ರಾಮವನ್ನು ನೀಡಲಾಗಿದೆ ಎಂಬ ಉಲ್ಲೇಖವಿದೆ.

25 ವರ್ಷಗಳ ಕಾಲ ಪೀಠದಲ್ಲಿದ್ದ ಇವರು 1564 ರಲ್ಲಿ ತಮ್ಮ ಶಿಷ್ಯನಿಗೆ ಸನ್ಯಾಸ ದೀಕ್ಷೆಯನ್ನು ಕೊಟ್ಟು ರಾಮತೀರ್ಥ ಎಂದು ನಾಮಕರಣ ಮಾಡಿದರು. ಮುಂದೆ ಬರುವ ಕಾಲ ಭಯಾನಕವಾಗಿರುತ್ತದೆ. ಎಷ್ಟೇ ಕಷ್ಟ ಬಂದರೂ ಗುರುಕುಲವನ್ನು ಮುಂದುವರಿಸಬೇಕು ರಕ್ಷಣೆಗೆ ಬಂದವರಿಗೆಲ್ಲ ರಕ್ಷಣೆ ಅನ್ನದಾನ ನೀಡಬೇಕು ಎಂಬ ಉಪದೇಶವನ್ನು ತಮ್ಮ ಶಿಷ್ಯಂದಿರಿಗೆ ಕೊಟ್ಟು 1564ರಲ್ಲಿ ಚೈತ್ರ ಮಾಸದ ಶುಕ್ಲ ಪಕ್ಷದ ದ್ವಿತೀಯದ ದಿನ ರಾಮತೀರ್ಥರಿಗೆ ನರಸಿಂಹ ಮಂತ್ರ ಉಪದೇಶವನ್ನು ನೀಡಿದರು. ಆದ್ದರಿಂದಲೇ ಆ ದಿನ ಇಂದಿಗೂ ವ್ಯಾಸರಾಜ ಮಠದಲ್ಲಿ ಶ್ರೇಷ್ಠ ದಿನವಾಗಿದೆ.ಬರುವ ರಕ್ತಾಕ್ಷಿ ನಾಮ ಸಂವತ್ಸರದಲ್ಲಿ ಸಾಮ್ರಾಜ್ಯ ಪತನವಾಗುತ್ತದೆ ಎಂಬ ವಿಚಾರವನ್ನು ತಿಳಿಸಿ ಯಾವುದೇ ಕಾರಣಕ್ಕೂ ಹೆದರಬಾರದು. ಹೆದರಿಕೆ ಆದರೆ ಸಿಂಹಾಸನದ ಮೇಲೆ ಆಸೀನರಾದ ವ್ಯಾಸರಾಯರ ಸ್ಮರಣೆಯನ್ನು ಮಾಡಬೇಕು. ಅವರ ಸ್ಮರಣೆ ಮಾತ್ರದಿಂದ ಭಯ ನಿವಾರಣೆಯಾಗುತ್ತದೆ ಎಂಬ ಬೋಧನೆಯನ್ನು ನೀಡುತ್ತಾರೆ. ಅಪಾರವಾದ ಗುರುಭಕ್ತರಾದ ಇವರು ದರ್ಬಾರ್ ಮಾಡುವ ಸಂದರ್ಭದಲ್ಲಿ ತಮ್ಮ ಗುರುಗಳ ಪಾದರಕ್ಷೆಯನ್ನು ಸಿಂಹಾಸನದ ಮೇಲೆ ಇಡು ತ್ತಿದ್ದರು. ಗುರುಭಕ್ತಿಯ ಪ್ರತೀಕವಾದ ಇವರು ತಮ್ಮ ಗುರುಗಳ ಬೃಂದಾವನದ ಪಕ್ಕದಲ್ಲಿ ಬೃಂದಾವನಸ್ಥರಾಗಿ ದ್ದಾರೆ.



ಇಂಥ ಶ್ರೀನಿವಾಸತೀರ್ಥರ ಆರಾಧನೆ ವೈಶಾಖ ಕೃಷ್ಣ ಪಂಚಮಿಯ ದಿನ ಬರುತ್ತದೆ. ಇವರ ಮಹಿಮೆಗಳನ್ನು ತಿಳಿದು ನಮಿಸೋಣ. ನಿಮ್ಮಂತಹ ಗುರುಭಕ್ತಿ, ಜ್ಞಾನ, ವೈರಾಗ್ಯ ಮತ್ತು ಕರ್ತವ್ಯ ನಿಷ್ಠೆ ನಮಗೂ ಕರುಣಿಸಿ ಎಂದು ಬೇಡುತ್ತಾ ಅವರಿಗೆ ಶರಣಾಗೋಣ. ಅಗ್ನಿದೇವನ ಅವತಾರ ಎಂದು ಇವರನ್ನು ಕರೆದಿದ್ದಾರೆ. ಅವರ ಸ್ಮರಣೆ ಮಾತ್ರದಿಂದ ಭಯಗಳು ನಿವಾರಣೆಯಾಗುತ್ತದೆ ಎಂಬ ನಂಬಿಕೆ ಇದೆ. ಅವರ ಆರಾಧನೆಯ ಪರ್ವಕಾಲದಲ್ಲಿ ಅವರನ್ನು ಸ್ಮರಿಸಿ ಧನ್ಯರಾಗೋಣ.

ಶ್ರೀ ವೆಂಕಟೇಶ್ವರಸ್ವಾಮಿ ಗೋವಿಂದನಾಮಗಳು

ಶ್ರೀ ಶ್ರೀನಿವಾಸ ಗೋವಿಂದಾ
ಶ್ರೀ ವೆಂಕಟೇಶ ಗೋವಿಂದಾ
ಭಕ್ತವತ್ಸಲ ಗೋವಿಂದಾ
ಭಾಗವತಪ್ರಿಯ ಗೋವಿಂದಾ
ನಿತ್ಯನಿರ್ಮಲ ಗೋವಿಂದಾ
ನೀಲಮೇಘಶ್ಯಾಮ ಗೋವಿಂದಾ
ಪುರಾಣಪುರುಷ ಗೋವಿಂದಾ
ಪುಂಡರೀಕಾಕ್ಷ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ನಂದನಂದನ ಗೋವಿಂದಾ
ನವನೀತಚೋರ ಗೋವಿಂದಾ
ಪಶುಪಾಲಕ ಶ್ರೀ ಗೋವಿಂದಾ
ಪಾಪವಿಮೋಚನ ಗೋವಿಂದಾ
ದುಷ್ಟಸಂಹಾರ ಗೋವಿಂದಾ
ದುರಿತನಿವಾರಣ ಗೋವಿಂದಾ
ಶಿಷ್ಟಪರಿಪಾಲಕ ಗೋವಿಂದಾ
ಕಷ್ಟನಿವಾರಣ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ವಜ್ರಮಕುಟಧರ ಗೋವಿಂದಾ
ವರಾಹಮೂರ್ತಿ ಗೋವಿಂದಾ
ಗೋಪೀಜನಲೋಲ ಗೋವಿಂದಾ
ಗೋವರ್ಧನೋದ್ಧಾರ ಗೋವಿಂದಾ
ದಶರಥನಂದನ ಗೋವಿಂದಾ
ದಶಮುಖಮರ್ದನ ಗೋವಿಂದಾ
ಪಕ್ಷಿವಾಹನ ಗೋವಿಂದಾ
ಪಾಂಡವಪ್ರಿಯ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ಮತ್ಸ್ಯಕೂರ್ಮ ಗೋವಿಂದಾ
ಮಧುಸೂದನ ಹರಿ ಗೋವಿಂದಾ
ವರಾಹ ನರಸಿಂಹ ಗೋವಿಂದಾ
ವಾಮನ ಭೃಗುರಾಮ ಗೋವಿಂದಾ
ಬಲರಾಮಾನುಜ ಗೋವಿಂದಾ
ಬೌದ್ಧಕಲ್ಕಿಧರ ಗೋವಿಂದಾ
ವೇಣುಗಾನಪ್ರಿಯ ಗೋವಿಂದಾ
ವೆಂಕಟರಮಣ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ಸೀತಾನಾಯಕ ಗೋವಿಂದಾ
ಶ್ರಿತಪರಿಪಾಲಕ ಗೋವಿಂದಾ
ದರಿದ್ರಜನಪೋಷಕ ಗೋವಿಂದಾ
ಧರ್ಮಸಂಸ್ಥಾಪಕ ಗೋವಿಂದಾ
ಅನಾಥರಕ್ಷಕ ಗೋವಿಂದಾ
ಆಪತ್‌ಬಾಂಧವ ಗೋವಿಂದಾ
ಶರಣಾಗತವತ್ಸಲ ಗೋವಿಂದಾ
ಕರುಣಾಸಾಗರ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ಕಮಲದಳಾಕ್ಷ ಗೋವಿಂದಾ
ಕಾಮಿತಫಲದಾ ಗೋವಿಂದಾ
ಪಾಪವಿನಾಶಕ ಗೋವಿಂದಾ
ಪಾಹಿಮುರಾರೆ ಗೋವಿಂದಾ
ಶ್ರೀಮುದ್ರಾಂಕಿತ ಗೋವಿಂದಾ
ಶ್ರೀವತ್ಸಾಂಕಿತ ಗೋವಿಂದಾ
ಧರಣೀನಾಯಕ ಗೋವಿಂದಾ
ದಿನಕರತೇಜ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ಪದ್ಮಾವತಿಪ್ರಿಯ ಗೋವಿಂದಾ
ಪ್ರಸನ್ನಮೂರ್ತಿ ಗೋವಿಂದಾ
ಅಭಯಹಸ್ತಪ್ರದರ್ಶನ ಗೋವಿಂದಾ
ಮತ್ಸ್ಯಾವತಾರ ಗೋವಿಂದಾ
ಶಂಖಚಕ್ರಧರ ಗೋವಿಂದಾ
ಶಾರ್ಙ್ಗಗದಾಧರ ಗೋವಿಂದಾ
ವಿರಜಾಸ್ನ ತೀರ್ಥ ಗೋವಿಂದಾ
ವಿರೋಧಿಮರ್ದನ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ಸಾಲಗ್ರಾಮಧರ ಗೋವಿಂದಾ
ಸಹಸ್ರನಾಮ ಗೋವಿಂದಾ
ಲಕ್ಷ್ಮೀವಲ್ಲಭ ಗೋವಿಂದಾ
ಲಕ್ಷ್ಮಣಾಗ್ರಜ ಗೋವಿಂದಾ
ಕಸ್ತೂರಿ ತಿಲಕ ಗೋವಿಂದಾ
ಕಾಂಚನಾಂಬರಧರ ಗೋವಿಂದಾ
ಗರುಡವಾಹನ ಗೋವಿಂದಾ
ಗಜರಾಜರಕ್ಷಕ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ವಾನರಸೇವಿತ ಗೋವಿಂದಾ
ವಾರಧಿಬಂಧನ ಗೋವಿಂದಾ
ಎಳುಬೆಟ್ಟದ ಒಡೆಯ ಗೋವಿಂದಾ
ಏಕಸ್ವರೂಪ ಗೋವಿಂದಾ
ಶ್ರೀರಾಮಕೃಷ್ಣ ಗೋವಿಂದಾ
ರಘುಕುಲನಂದನ ಗೋವಿಂದಾ
ಪ್ರತ್ಯಕ್ಷದೇವ ಗೋವಿಂದಾ
ಪರಮದಯಾಕರ ಗೋವಿಂದಾ
ಗೋವಿಂದ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ವಜ್ರಕವಚಧರ ಗೋವಿಂದಾ
ವೈಜಯಂತಿಮಾಲ ಗೋವಿಂದಾ
ಬಡ್ಡಿಯಕಾಸಿನ ಗೋವಿಂದಾ
ವಸುದೇವತನಯ ಗೋವಿಂದಾ
ಬಿಲ್ವಪತ್ರಾರ್ಚಿತ ಗೋವಿಂದಾ
ಭಿಕ್ಷುಕ ಸಂಸ್ತುತ ಗೋವಿಂದಾ
ಸ್ತ್ರೀಪುಂರೂಪ ಗೋವಿಂದಾ
ಶಿವಕೇಶವಮೂರ್ತಿ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ಬ್ರಹ್ಮಾಂಡರೂಪ ಗೋವಿಂದಾ
ಭಕ್ತರಕ್ಷಕ ಗೋವಿಂದಾ
ನಿತ್ಯಕಲ್ಯಾಣ ಗೋವಿಂದಾ
ನೀರಜನಾಭ ಗೋವಿಂದಾ
ಹಾಥೀರಾಮಪ್ರಿಯ ಗೋವಿಂದಾ
ಹರಿಸರ್ವೋತ್ತಮ ಗೋವಿಂದಾ
ಜನಾರ್ದನಮೂರ್ತಿ ಗೋವಿಂದಾ
ಜಗತ್ಸಾಕ್ಷಿರೂಪ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ಅಭಿಷೇಕಪ್ರಿಯ ಗೋವಿಂದಾ
ಆಪನ್ನಿವಾರಣ ಗೋವಿಂದಾ
ರತ್ನಕಿರೀಟ ಗೋವಿಂದಾ
ರಾಮಾನುಜನುತ ಗೋವಿಂದಾ
ಸ್ವಯಂಪ್ರಕಾಶ ಗೋವಿಂದಾ
ಆಶ್ರಿತಪಕ್ಷ ಗೋವಿಂದಾ
ನಿತ್ಯಶುಭಪ್ರದ ಗೋವಿಂದಾ
ನಿಖಿಲಲೋಕೇಶ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ಆನಂದರೂಪ ಗೋವಿಂದಾ
ಆದ್ಯಂತರಹಿತ ಗೋವಿಂದಾ
ಇಹಪರದಾಯಕ ಗೋವಿಂದಾ
ಇಭರಾಜರಕ್ಷಕ ಗೋವಿಂದಾ
ಪರಮದಯಾಳೋ ಗೋವಿಂದಾ
ಪದ್ಮನಾಭ ಹರಿ ಗೋವಿಂದಾ
ತಿರುಮಲೆವಾಸ ಗೋವಿಂದಾ
ತುಲಸೀವನಮಾಲ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ
ಶೇಷಾದ್ರಿನಿಲಯ ಗೋವಿಂದಾ
ಶೇಷಶಾಯಿಯೆ ಗೋವಿಂದಾ
ಶ್ರೀ ಶ್ರೀನಿವಾಸ ಗೋವಿಂದಾ
ಶ್ರೀ ವೆಂಕಟೇಶ ಗೋವಿಂದಾ
ಗೋವಿಂದಾ ಹರಿ ಗೋವಿಂದಾ
ಗೋಕುಲನಂದನ ಗೋವಿಂದಾ

ಸರ್ವೇ ಜನಾ ಸುಖಿನೋಭವಂತು

ಮಾಗಳ ಹಾಗೂ ಹೊಳಲಿನ ಸುಂದರ ದೇವಾಲಯಗಳು

– ಕೆಂಗೇರಿ ಚಕ್ರಪಾಣಿ
94483 86886

ನೂತನವಾಗಿ ರಚಿತವಾಗಿರುವ ವಿಜಯನಗರ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ, ತಾಲ್ಲೂಕು ಕೇಂದ್ರದಿಂದ ಸುಮಾರು 18 ಕಿ.ಮೀ. ದೂರದಲ್ಲಿರುವ ಮಾಗಳವು ಒಂದು ಪ್ರಾಚೀನ ಅಗ್ರಹಾರ. ಈ ಗ್ರಾಮದ ಆಡಳಿತ ವ್ಯವಸ್ಥೆಯನ್ನು ಹನ್ನೊಂದನೆಯ ಶತಮಾನದಲ್ಲಿ ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಪತ್ನಿ ಪದ್ಮಲಾದೇವಿ ನೋಡಿಕೊಳ್ಳುತ್ತಿದ್ದಳು. ಮಾಗಳದಲ್ಲಿರುವ ಸೂರ್ಯ ದೇವಾಲಯವು ಹೊಯ್ಸಳ ಶೈಲಿಯಲ್ಲಿರುವ ಕಲಾತ್ಮಕ ದೇವಾಲಯ. ಈ ದೇವಾಲಯವನ್ನು ದಿ. 18-07-1309 ರಲ್ಲಿ ಹೊಯ್ಸಳ ದೊರೆ ಎರಡನೆಯ ಬಲ್ಲಾಳನ ಕಾಲದಲ್ಲಿ ಅಲ್ಲಿಯ ಮಹಾಜನ ಕಲಿಮಯ್ಯನ ಮಗ ಮಾರ ಮರಸನು ನಿರ್ಮಿಸಿರುತ್ತಾನೆ. ಸೂರ್ಯ ದೇವಾಲಯವು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ್ದು ಕಲಾತ್ಮಕವಾಗಿದೆ. ಈ ದೇವಾಲಯದ ಭುವನೇಶ್ವರಿ, ಅಲಂಕೃತ ಬಾಗಿಲುವಾಡಗಳು ಚಿತ್ತಾಕರ್ಷಕವಾಗಿವೆ. ಗರ್ಭಗುಡಿಯಲ್ಲಿರುವ ಸೂರ್ಯನ ಮೂರ್ತಿ ಬಹುಸುಂದರ ಶಿಲ್ಪ ಸಪ್ತಾಶ್ವದ ಮೇಲಿರುವ ಸೂರ್ಯದೇವನು ಕೈಗಳಲ್ಲಿ ಕಮಲಗಳನ್ನು ಹಿಡಿದಿದ್ದು, ಇಕ್ಕೆಲಗಳಲ್ಲಿ ಆತನ ಪತ್ನಿಯರು ಉಷೆ ಮತ್ತು ಪ್ರತ್ಯುಷೆಯರಿದ್ದಾರೆ.

ಮಾಗಳ ಸಮೀಪ ರಂಗಾಪುರ ಎಂಬ ಸ್ಥಳದಲ್ಲಿ ತುಂಗಭದ್ರಾ ತೀರದಲ್ಲಿ ಉಗ್ರನರಸಿಂಹ ದೇವರ ದೇವಾಲಯವಿದೆ. ದೇವಾಲಯವು ಮೂಲತಃ ಒಂಭತ್ತನೆಯ ಶತಮಾನಕ್ಕೆ ಸೇರಿದ್ದು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಈ ದೇವಾಲಯಕ್ಕೆ ದತ್ತಿ ನೀಡಲಾಗಿದೆ. ದೇವಾಲಯವು ವಾಸ್ತು ಶಿಲ್ಪದ ದೃಷ್ಟಿಗಿಂತ ಮೂರ್ತಿ ಶಿಲ್ಪದ ಹಿನ್ನೆಲೆಯಲ್ಲಿ ಗಮನಿಸಲೇಬೇಕಾದ ಆಲಯ.

ಇಲ್ಲಿರುವ ಷಡ್ಬಾಹು ಉಗ್ರನರಸಿಂಹ ವಿಗ್ರಹವಂತೂ ನೋಡುಗರನ್ನು ತಲ್ಲಣಗೊಳಿಸಿ ವಿಸ್ಮಯ ಚಿತ್ತರನ್ನಾಗಿಸುತ್ತದೆ. ನರಸಿಂಹನು ದುರುಳನಾದ ಹಿರಣ್ಯಕಶಿಪುವನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಕರುಳನ್ನು ಸೀಳುತ್ತಿರುವ ಪರಿ ಅಮೋಘವಾಗಿದೆ. ಸ್ವಾಮಿಯು ಹಲವಾರು ಆಯುಧಗಳನ್ನು ಧರಿಸಿದ್ದರೂ ದುರುಳನ್ನು ಸಂಹರಿಸುತ್ತಿರುವುದು ಉಗುರಿನಲ್ಲಿಯೇ ಎಂಬುದು ಗಮನಿಸಬೇಕಾದ ಅಂಶ. ನರಸಿಂಹನು ಮೇಲಿನ ಎರಡು ಬಾಹುಗಳಿಂದ ಕರುಳಿನ ಮಾಲೆಯನ್ನು ಧರಿಸಿಕೊಳ್ಳುತ್ತಿದ್ದರೆ ಕೆಳಗಿನ ಬಾಹುಗಳಲ್ಲಿ ದುರುಳನ ಉದರವನ್ನು ಸೀಳುತ್ತಿರುವನು ಮಧ್ಯದ ಬಾಹುಗಳಲ್ಲಿ ಶಂಖ, ಚಕ್ರಗಳನ್ನು ದೇವನು ಧರಿಸಿರುವನು.

ಸ್ವಾಮಿಯ ಮುಖಾರವಿಂದವು ತೇಜೋಮಯವಾಗಿದೆ. ಉಗ್ರನರಸಿಂಹನ ಎದುರು ಪ್ರಣಾಮ ಭಂಗಿಯಲ್ಲಿರುವ ಭಕ್ತ ಪ್ರಹ್ಲಾದನ ಪ್ರತ್ಯೇಕ ಮೂರ್ತಿಯಿದೆ. ಮಾಗಳದ ನರಸಿಂಹ ದೇವನನ್ನು ಉಲ್ಲೇಖಿಸುವ ಶಾಸನ ಸಾ.ಶ. 1090 ರದು. ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಪತ್ನಿ ಪದ್ಮಲಾದೇವಿ ಮಾಗಳದಲ್ಲಿ ಆಡಳಿತ ಮಾಡುತ್ತಿರುವ 200 ಜನ ಮಹಾಜನರ (ಊರ ಪ್ರಮುಖರು) ಕೋರಿಕೆಯ ಮೇರೆಗೆ ಪುಲಿಮಯ ನಾಯಕನೆಂಬ ಅಧಿಕಾರಿಗೆ ಆದೇಶಿಸಿ ನರಸಿಂಹದೇವರ ಪೂಜಾಕಾರ್ಯಕ್ಕೆ ಭೂಮಿಯನ್ನು ದಾನವಾಗಿ ನೀಡಿರುತ್ತಾಳೆ. ಶಾಸನದಲ್ಲಿ ಪದ್ಮಲಾದೇವಿಯನ್ನು ದ್ವಿತೀಯ ಲಕ್ಷ್ಮೀಸಮಾನೆ ಅಗಣ್ಯಪುಣ್ಯ ಲಾವಣ್ಯ ಲೀಲೆ, ಅರ್ತಿಜನಚಿಂತಾಮಣಿ, ಪ್ರತ್ಯಕ್ಷ ಪಾರ್ವತಿ, ಪತಿವ್ರತೆಯರಲ್ಲಿ ಅರುಂಧತಿ, ಅಭಿನವ ಸರಸ್ವತಿ ರೂಪದಲ್ಲಿ ವಿಧ್ಯಾದರಿ ಎಂದು ಹಾಡಿ ಹೋಗಳಿದೆ. ಮಾಗಳದ





ಉಗ್ರನರಸಿಂಹಸ್ವಾಮಿಯ ಮೂರ್ತಿಯು, ನರಸಿಂಹದೇವನ ಮೂರ್ತಿ ಶಿಲ್ಪದ ಬೆಳವಣಿಗೆಯಲ್ಲಿ ಗಮನಿಸಬೇಕಾದ ಅಪೂರ್ವವಾದ ವಿಗ್ರಹವಾಗಿರುತ್ತದೆ. ನರಸಿಂಹ ದೇವಾಲಯದ ಆವರಣದಲ್ಲಿ ಅಪರೂಪದ ಭಂಗಿಯಲ್ಲಿರುವ ಮಾರುತಿಯ ಮೂರ್ತಿಯಿದೆ. ತುಂಗಾನದಿಯ ತೀರದಲ್ಲಿರುವ ನೃಸಿಂಹ ಆಲಯವು ನರಸಿಂಹ ದೇವನ ಜಾಗೃತ ಸ್ಥಳವೆಂದು ಪ್ರಸಿದ್ಧಿಯನ್ನು ಹೊಂದಿದೆ.

ಹೊಳಲುವಿನ ಅನಂತಶಯನಗುಡಿ



ಶ್ರೀ ಮಹಾವಿಷ್ಣುವಿನ ಮೂರ್ತಿ ಶಿಲ್ಪದ ಪ್ರಭೇದಗಳಲ್ಲಿ ಸ್ಥಾನಕ (ನಿಲುವಿನ ಭಂಗಿಯಲ್ಲಿ)ಅಸೀನ (ಕುಳಿತಿರುವ ಭಂಗಿ) ಶಯನ (ಮಲಗಿರುವ) ಹಾಗೂ ಯಾನಕ (ಚಲಿಸುತ್ತಿರುವ) ಮೂರ್ತಿಗಳೆಂಬ ನಾಲ್ಕು ಬಗೆ ಇವುಗಳಲ್ಲಿ ಯೋಗ, ಭೋಗ, ವೀರ ಎಂಬ ಉಪ ಪ್ರಭೇದಗಳಿವೆ. ಯೋಗ ರೂಪದಲ್ಲಿರುವ ವಿಷ್ಣು ಮೂರ್ತಿಯನ್ನು ಯೋಗಿಗಳೂ, ಋಷಿಗಳೂ ಆರಾಧಿಸುವರೆಂದೂ ಭೋಗರೂಪದಲ್ಲಿರುವ ಮೂರ್ತಿಯನ್ನು ಲೌಕಿಕ ಸುಖಗಳನ್ನು ಬಯಸುವವರು ಆರಾಧಿಸುವರೆಂದೂ ಶಾಸ್ತ್ರ ಗ್ರಂಥಗಳಲ್ಲಿ ಹೇಳಲಾಗಿದೆ.

ಮಹಾವಿಷ್ಣುವಿನ ಶಯನ ಮೂರ್ತಿಗಳಿಗೆ ಅನಂತಶಯನ, ಶೇಷಶಾಯಿ, ಅನಂತ ನಾರಾಯಣ, ಅನಂತ ಪದ್ಮನಾಭ, ರಂಗನಾಥ ಮುಂತಾದ ಹೆಸರುಗಳಿವೆ. ಮಹಾವಿಷ್ಣುವು ಒಬ್ಬನೇ ಆಲದ ಎಲೆಯ ಮೇಲೆ ಮಲಗಿದ್ದರೆ ಯೋಗ ಶಯನಮೂರ್ತಿ ಕ್ಷೀರ ಸಾಗರ ಮಧ್ಯದಲ್ಲಿ ಮಹಾವಿಷ್ಣುವು ಅನಂತನೆಂಬ ಸರ್ಪದ ಮೇಲೆ ಮಲಗಿದ್ದರೆ ಅನಂತ ಶಯನ, ನಾಭಿಯಿಂದ ಬ್ರಹ್ಮನು ಉದಯಿಸುತ್ತಿದ್ದರೆ ಅನಂತಪದ್ಮನಾಭ, ವಿಷ್ಣುವು ಅನಂತನ ಮೇಲೆ ಮಲಗಿ ದೇವನ ಪತ್ನಿಯರು ಪಾದದ ಬಳಿಯಿದ್ದರೆ ಭೋಗ ಶಯನ ಮೂರ್ತಿ ಪತ್ನಿ ಸಹಿತ ನಾರಾಯಣನು ಮಧುಕೈಟಭರು, ಆಯುಧ ಪುರುಷರೊಂದಿಗಿದ್ದರೆ ವೀರಶಯನ ಮೂರ್ತಿ ಎಂಬ ಉಪಪ್ರಭೇದಗಳು ವಿಷ್ಣುವಿನ ಶಯನ ಮೂರ್ತಿಗಳಲ್ಲಿವೆ. ಶಯನಭಂಗಿಯಲ್ಲಿರುವ ನಾರಾಯಣನು ಕೇವಲ ಸರ್ಪದ ಮೇಲೆ ಪವಡಿಸಿದ್ದರೆ ರಂಗನಾಥನೆನಿಸಿಕೊಳ್ಳುವನು. ನಾಭಿಯಿಂದ ಬ್ರಹ್ಮದೇವನು ಹೊರ ಬರುತ್ತಿದ್ದರೆ ಅನಂತಪದ್ಮನಾಭನೆನಿಸಿಕೊಂಡರೂ ಕರ್ನಾಟಕದ ಕೆಲವು ದೇವಾಲಯಗಳಲ್ಲಿರುವ ಅನಂತಪದ್ಮನಾಭನಿಗೆ ರಂಗನಾಥ ಎಂದೇ ಕರೆಯುವರು.



ದೇವಿಪುರಾಣದಲ್ಲಿ ಅನಂತಪದ್ಮನಾಭನ ಉದಯದ ಬಗ್ಗೆ ಮಾಹಿತಿ ದೊರೆಯುವುದು. ಆಲದ ಎಲೆಯ ಮೇಲೆ ಮಲಗಿರುವ ವಿಷ್ಣುವು ಒಬ್ಬನೇ ಮಲಗಿದ್ದಾಗ ಸತ್ವಗುಣವನ್ನು ಹೊಂದಿರುವನು, ನಂತರ ಅವನ ನಾಭಿಯಿಂದ ಅರಳಿದ ಕಮಲವು ಹೊರ ಬಂದಿದ್ದು, ಅದರಲ್ಲಿ ಬ್ರಹ್ಮನು ಉದಯಿಸುವನು,ಬ್ರಹ್ಮನು ರಜೋಗುಣವನ್ನು ಪ್ರತಿ ನಿಧಿಸುವನು. ಬ್ರಹ್ಮನ ಎರಡು ಹುಬ್ಬುಗಳ ನಡುವೆ ಉದಯಿಸುವ ರುದ್ರನು ತಮೋಗುಣವನ್ನು ಪ್ರತಿನಿಧಿಸುವನು. ಹೀಗೆ ತ್ರಿಮೂರ್ತಿಗಳು ಸೃಷ್ಟಿ,ಸ್ಥಿತಿ, ಲಯ ಕ್ರಿಯೆಗೆ ಕಾರಣ ಕರ್ತರಾದರೆಂದು ದೇವಿ ಪುರಾಣದಲ್ಲಿ ತಿಳಿದು ಬರುವುದು. (ಶ್ರೀ ವಿಷ್ಣುಕೋಶ, ಪ್ರೊ.ಎಸ್.ಕೆ. ರಾಮಚಂದ್ರರಾವ್).






ಕನ್ನಡನಾಡಿನ ಅನಂತಶಯನ ಮೂರ್ತಿಗಳಲ್ಲಿ ಪ್ರಸಿದ್ಧವಾದ ಮೂರ್ತಿಯು ವಿಜಯನಗರ ಜಿಲ್ಲೆಯ ಹೂವಿನ ಹಡಗಲಿ ತಾಲ್ಲೂಕಿನ ಹೊಳಲು ಎಂಬ ಗ್ರಾಮದಲ್ಲಿದೆ. ಇಲ್ಲಿ ನೆಲೆಸಿರುವ ಅನಂತಪದ್ಮನಾಭನ ಮೂರ್ತಿಯು ಕಲ್ಯಾಣ ಚಾಲುಕ್ಯರ ಕಾಲದ ಒಂದು ಸುಂದರ ಕಲಾಕೃತಿ. ಪ್ರಸ್ತುತ ವಿಗ್ರಹವು ಸುಮಾರು ಒಂಬತ್ತ ಅಡಿ ಉದ್ದವಿದೆ. ಅನಂತಪದ್ಮನಾಭನು ಸರ್ಪಶಯನನಾಗಿ ಪವಡಿಸಿರುವನು. ಚತುರ್ಭುಜನಾಗಿರುವ ದೇವನು ತನ್ನ ಬಲಮೇಲಿನ ಕೈಯನ್ನು ತಲೆಗೆ ಅನಿಸಿಕೊಂಡು ಮಲಗಿರುವನು. ಅಲಂಕೃತ ಕಿರೀಟವನ್ನು ಧರಿಸಿರುವ ಪದ್ಮನಾಭನ ಮುಖಾರವಿಂದವು ಕಲಾತ್ಮಕವಾಗಿ ಮೂಡಿ ಬಂದಿದೆ. ಕೊರಳಿಗೆ ಧರಿಸಿರುವ ಮಣಿಹಾರ, ಕೈಕಡಗ, ಉದರ ಭಂದ, ಕಾಲ್ಕಡಗ, ಧರಿಸಿರುವ ವಸ್ತ್ರ ಬಹಳ ಸುಂದರವಾಗಿದೆ. ಅನಂತಪದ್ಮನಾಭಸ್ವಾಮಿಯ ಗರ್ಭಗುಡಿಯಲ್ಲಿ ಚತುರ್ಮುಖ ಬ್ರಹ್ಮದೇವ ಮತ್ತು ಲಕ್ಷ್ಮಿದೇವಿಯವರ ಮೂರ್ತಿಗಳೂ ಇವೆ. ಬಹಳ ಆಕರ್ಷಕವಾಗಿರುವ ಹೊಳಲುವಿನ ಅನಂತಪದ್ಮನಾಭ ದೇವಾಲಯವು ಇತ್ತೀಚಿನ ದಿನಗಳಲ್ಲಿ ಬಹಳ ಜನಪ್ರಿಯವಾಗುತ್ತಿದ್ದು, ಅಪಾರ ಸಂಖ್ಯೆಯ ಭಕ್ತರು ದಿನವೂ ಆಗಮಿಸಿ ಸ್ವಾಮಿಯ ದರ್ಶನವನ್ನು ಪಡೆಯುತ್ತಿರುವರು. ದೇವಾಲಯದ ಬದಿಯಲ್ಲಿ ಬರುವ ಭಕ್ತರಿಗಾಗಿ ಆಧುನಿಕ ಸೌಲಭ್ಯಗಳು ಕೊಠಡಿಗಳನ್ನು ಹೊಳಲು ಅನಂತಪದ್ಮನಾಭ ಸ್ವಾಮಿಯ ದೇವಾಲಯದ ಆಡಳಿತ ಮಂಡಳಿಯವರು ನಿರ್ಮಿಸಿರುವುದು ಉಲ್ಲೇಖನೀಯ.

ಹೀಗೆ ಬನ್ನಿ:

ವಿಜಯನಗರ ಜಿಲ್ಲೆಯ ಮಾಗಳದ ಉಗ್ರನರಸಿಂಹನನ್ನು ದರ್ಶಿಸಲು ದಾವಣಗೆರೆ, ಹರಪನಹಳ್ಳಿ ಮಾರ್ಗವಾಗಿ ಹೂವಿನ ಹಡಗಲಿಗೆ ಬರಬೇಕು ನಂತರ ಹದಿನೈದು ಕಿ.ಮೀ. ದೂರದಲ್ಲಿರುವ ಹೀರೇಹಡಗಲಿಗೆ ಬಂದು ಹಿರೇಹಡಗಲಿಗೆ ಎಂಟು ಕಿ.ಮೀ. ದೂರದಲ್ಲಿರುವ ಮಾಗಳಕ್ಕೆ ಬಂದು ಉಗ್ರನರಸಿಂಹ ದೇವರನ್ನು ದರ್ಶಿಸಿ ನಂತರ ಹಿರೇಹಡಗಲಿಗೆ ಮರಳಿ ಬಂದು ಹದಿನೇಳು ಕಿ.ಮೀ. ದೂರದಲ್ಲಿರುವ ಹೊಳಲುವಿನ ಅನಂತಶಯನಸ್ವಾಮಿಯನ್ನು ದರ್ಶಿಸಬಹುದು. ನಂತರ ಸಮೀಪದಲ್ಲಿರುವ ಕಾರಣೀಕ ಕ್ಷೇತ್ರ ಮೈಲಾರ ಮತ್ತು ಕಲಾತ್ಮಕ ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯಗಳನ್ನು ದರ್ಶಿಸಬಹುದು.



ಜೂನ್ -2026 ತಿಂಗಳಲ್ಲಿ ಬರುವ ಹಬ್ಬ ಹರಿ ದಿನಗಳು

02 ರಿಂದ 13 ರ ವರೆಗೆ ಶ್ರೀ ಯಮುನಾ ನದಿ ಪುಷ್ಕರ

05 ನಾಗುಲಾಪುರಂ, ಶ್ರೀ ವೇದನಾರಾಯಣಸ್ವಾಮಿಯವರ ಪುಷ್ಪಯಾಗ

06 - 13 ರ ವರೆಗೆ ಕಾರ್ವೇಟಿನಗರಂ, ಶ್ರೀವೇಣುಗೋಪಾಲ ಸ್ವಾಮಿಯವರ ಪುಷ್ಪಯಾಗ


22 ತಿರುಪತಿ, ಶ್ರೀಗೋವಿಂದರಾಜಸ್ವಾಮಿಯವರ ಪುಷ್ಪಯಾಗ

25-29 ರ ವರೆಗೆ ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ತೆಪ್ಪೋತ್ಸವಗಳು


25 ರಿಂದ ಜುಲೈ 3 ರ ವರೆಗೆ ಅಪ್ಪಲಾಯಗುಂಟ, ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

26-28 ರ ವರೆಗೆ ತಿರುಮಲೆ ಸ್ವಾಮಿಯವರ ಜ್ಯೇಷ್ಠಾಭಿಷೇಕ

ಅಧಿಕ ಮಾಸದಲ್ಲಿ ದೀಪದಾನದ ಮಹಿಮೆ ಅಪಾರ



-ಶ್ರೀಧರ ರಾಯಸಂ





ಈ ವರ್ಷ ಜೇಷ್ಠ ಮಾಸದಲ್ಲಿ ಅಧಿಕಮಾಸ ಪ್ರಾರಂಭವಾಗುತ್ತದೆ. ಸ್ಮೃತಿ ಮುಕ್ತಾವಳಿ ವಾಕ್ಯದ ಪ್ರಕಾರ ಚಾಂದ್ರಮಾನದಲ್ಲಿ ಒಂದೂ ಸಂಕ್ರಮಣ ಸಂಭವಿಸುವುದಿಲ್ಲವೋ ಅದಕ್ಕೆ ಅಧಿಕಮಾಸ ಎಂದು ಸಹ ಕರೆಯುವರು. ಪುರುಷೋತ್ತಮ ರೂಪಿ ಪರಮಾತ್ಮ ಈ ಮಾಸದ ನಿಯಾಮಕ ಎಂದು ಆದುದರಿಂದ ಈ ಮಾಸಕ್ಕೆ ಪುರುಷೋತ್ತಮಮಾಸ ಎಂದೂ ಕರೆಯುವರು,ಅನೇಕ ಮಂಗಳ ಕಾರ್ಯಗಳು ನಿಷಿದ್ಧ. ಆದರೇ ಅನೇಕ ದಾನಗಳು ಅವುಗಳ ಸಂಪೂರ್ಣ ಫಲ ಪುಣ್ಯ ಪ್ರಾಪ್ತಿ ಆಗುತ್ತದೆ. ಉಪವಾಸ ವ್ರತ ಏಕಭುಕ್ತ, ನಕ್ತ ಭೋಜನ, ಆಯಾಚಿತ, ಧಾರಣ-ಪಾರಣ, ಈ ಐದು ವ್ರತಗಳು ಒಂದೊಂದನ್ನು ಒಂದು ತಿಂಗಳು ಪೂರ್ತಿ ಮಾಡಿದರೇ, ವಿಶೇಷ ಪುಣ್ಯ ಪ್ರಾಪ್ತಿ ಲಭಿಸುತ್ತದೆ. ಮೂವತ್ತು ಮೂರು ತಿಂಗಳಿಗೊಮ್ಮೆ ಈ ಅಧಿಕ ಮಾಸವು ಬರುತ್ತದೆ. ಒಂದು ತಿಂಗಳು ಪ್ರತಿದಿನ ತಾಂಬೂಲ ದಾನದಿಂದ ಸೌಭಾಗ್ಯ ಪ್ರಾಪ್ತಿ ಒಂದು ತಿಂಗಳು ದೇವರ, ಗುರುಗಳ ಮುಂದೆ ದೀಪ ದಾನ ಮಾಡಿದರೆ ಲಕ್ಷ್ಮೀ ಒಲಿಯುವಳು. ಪ್ರತಿ ದಿನ ಗಂಗಾ ಮೊದಲಾದ ಮಹಾನದಿಗಳಲ್ಲಿ ಪ್ರಾತಃಸ್ನಾನ ಮಾಡಿದರೇ, ಸರ್ವ ಪಾಪ ನಾಶ ಹೊಂದುವುದು ಒಂದು ತಿಂಗಳು ಪ್ರತಿ ದಿನ 33 ಅಪೂಪ (ಅತಿರಸ) ದಾನ ಮಾಡಿದರೇ ಅನಿಷ್ಟ ನಿವೃತ್ತಿ ಮತ್ತು ಇಷ್ಟಾರ್ಥ ಸಿದ್ಧಿ ಪಡೆಯುವರು. ದಾನ ಕೊಡಲು ಸಾಧ್ಯವಾಗದಿದ್ದರೆ ಒಂದು ದಿನವಾದರೂ ಬಾಗಣ (33 ಅಪೂಪಗಳನ್ನು ಪಾತ್ರೆ ಸಹಿತ) ಕೊಡಬೇಕು. ದಾನ ಕೊಡಲು ಶುಕ್ಲ, ಕೃಷ್ಣ ಪಕ್ಷ ದ್ವಾದಶಿ, ಹುಣ್ಣಿಮೆ, ಅಮಾವಾಸ್ಯೆ ನವಮಿ, ಚತುರ್ದಶಿ, ತಿಥಿಗಳು ಶ್ರೇಷ್ಠ. ಅಧಿಕ ಮಾಸದ ಮಹಿಮೆ ಅದರಲ್ಲೂ ದೀಪ ದಾನದ ಮಹಿಮೆ ಒಬ್ಬ ಮಹಾರಾಜನ ಕಥೆಯಿಂದ ನಾವು ತಿಳಿದು ಅದರಂತೆ ಅಧಿಕ ಮಾಸದಲ್ಲಿ ದೀಪದಾನ ಮಾಡಿ ಶ್ರೀಮಹಾಲಕ್ಷ್ಮೀಯನ್ನು ಒಲಿಸಿಕೊಳ್ಳ ಬಹುದು.

ಈ ಹಿಂದೆ ಚಿತ್ರಬಾಹು ಎಂಬ ಮಹಾರಾಜ ಸರ್ವ ಧರ್ಮ ತಿಳಿದುಕೊಂಡು ಭಗವದ್ಭಕ್ತನಾಗಿ ಪತ್ನಿಯೊಂದಿಗೆ ಕಥಾ ಶ್ರವಣ ಮಾಡಿಕೊಂಡು ಐಶ್ವರ್ಯ ಪಡೆದಿದ್ದನು. ಅವನ ಪತ್ನಿ ಚಂದ್ರಕಲಾ ಸಹ ಭಗವದ್ಭಕ್ತಳಾಗಿದ್ದಳು. ಶ್ರೀಕೃಷ್ಣ ಪರಮಾತ್ಮನಲ್ಲಿ ತುಂಬಾ ಭಕ್ತಿ ತೋರಿಸುತ್ತಿದ್ದರು. ಒಂದು ದಿನ, ಚಿತ್ರಬಾಹು ದೂರದಲ್ಲಿ ಬರುವ ಅಗಸ್ತ್ಯ ಋಷಿಗಳನ್ನು ಕಂಡು ನಮಸ್ಕರಿಸಿ, ಸತ್ಕರಿಸಿ ನನ್ನ ಜನ್ಮ ಸಫಲವಾಯಿತೆಂದು ಹೇಳಿದನು. ಅದಕ್ಕೆ ಅಗಸ್ತ್ಯ ಋಷಿಗಳು ಸಂತಸದಿಂದ "ಹೇ ರಾಜನ್ ನೀನು ಧರ್ಮದಿಂದ ರಾಜ್ಯವನ್ನು ಆಳುತ್ತಿರುವೆ. ನಿನ್ನ ಪ್ರಜೆಗಳು ಧನ್ಯರು. ನೀನು ವಿಷ್ಣು ಭಕ್ತನೆಂದು ತಿಳಿಯಿತು. ನಿನ್ನ ಪತ್ನಿಯೂ ಸಹ ಭಗವದ್ಭಕ್ತಳು. ಪ್ರತಿವ್ರತೆಯಾಗಿರುವಳು. ನಿನಗೆ ಸುಖ ಸಮೃದ್ಧಿಯಾಗಲಿ" ಎಂದು ಆಶೀರ್ವಾದ ಮಾಡಿ ಅಗಸ್ತ್ಯ ಋಷಿಗಳು ಹೊರಡಲು ಸಿದ್ಧರಾದರು. ಆಗ ಮಹಾರಾಜನು, ಸ್ವಾಮಿ, ನನಗೆ ಸಕಲ ಸಂಪತ್ತು, ಸುಖೀ ರಾಜ್ಯ, ಪತಿ ವ್ರತೆಯಾದ ಪತ್ನಿ ಪಡೆದಿರುವೆನು. ಇದಕ್ಕೆ ನಾನೇನು ಪುಣ್ಯ ಮಾಡಿರಬಹುದು ಹೇಳಿರಿ ಎಂದು ಕೇಳಿಕೊಂಡನು. ಅದಕ್ಕೆ ಅಗಸ್ತ್ಯ ಋಷಿಗಳು. ಹೇ ರಾಜನ್



ಈ ಹಿಂದೆ ಮಣಿಗ್ರೀವ ಎಂಬ ದುಷ್ಟ ಹಿಂಸೆ ಮಾಡುತ್ತಾ, ಪರ ಸ್ತ್ರೀಯರನ್ನು ಕೆಡಿಸಿ. ದುರಾಚಾರಿಯಾಗಿದ್ದನು. ಅವನಿಗೆ ಸುಂದರಿ ಎಂಬ ಪತ್ನಿಯಿದ್ದಳು. ಪತಿ ದುಷ್ಟ ಆಗಿದ್ದರೂ ಸುಂದರಿ ಪತಿವ್ರತೆಯಾಗಿ, ಅವನ ಸೇವೆಯನ್ನು ಸಹ ತಪ್ಪದೇ ಮಾಡುತ್ತಿದ್ದಳು. ಬಂಧುಗಳು ದೂರಸರಿದರು. ಅಲ್ಲಿನ ರಾಜನು ಸಹ ಕೋಪಿಸಿಕೊಂಡು ಅವನ ಸಂಪತ್ತನ್ನು ಅಪಹರಿಸಿದನು. ಬಂಧುಗಳು ಸಹ ಅವನ ಸಂಪತ್ತನ್ನು ದೋಚಿಬಿಟ್ಟರು. ಎಲ್ಲರಿಂದ ತಿರಸ್ಕರಿಸಲ್ಪಟ್ಟ ಮಣಿಗ್ರೀವ ಪತ್ನಿಯೊಂದಿಗೆ ಕಾಡಿಗೆ ಹೊರಟನು. ಅಲ್ಲಿ ಹೊಟ್ಟೆ ಪಾಡಿಗೆ ಪ್ರಾಣಿಗಳನ್ನು ಸಂಹರಿಸಿ ಜೀವಿಸುತ್ತಿದ್ದರು. ದುರ್ಗಮ ಕಾಡಿನಲ್ಲಿ ಒಬ್ಬ ಉಗ್ರದೇವ ಎಂಬ ಬ್ರಾಹ್ಮಣ ಹಾದಿ ತಪ್ಪಿಸಿಕೊಂಡು, ಬಸಿಲಿನಲ್ಲಿ ಸಾಯುವಂತೆ ಆಗಿದ್ದನು. ಆಗ ಮಣಿಗ್ರೀವ ಮತ್ತು ಅವನ ಪತ್ನಿ ಅವನನ್ನು ಕರೆದುಕೊಂಡು ಶುಶ್ರೂಷೆಯನ್ನು ಮಾಡಲು ತಮ್ಮ ಗುಡಿಸಲಿಗೆ ಕರೆದುಕೊಂಡು ಹೋದರು. ಮಣಿಗ್ರೀವನೂ ಮತ್ತು ಅವನ ಪತ್ನಿ ಅವನಿಗೆ ಸೇವೆ ಮಾಡಿದರು. ಆ ಬ್ರಾಹ್ಮಣ ಮೂರ್ಛೆಯಿಂದ ಎಚ್ಚೆತ್ತು ನಾನು ಎಲ್ಲಿದ್ದೇನೆ ಎಂದು ಪ್ರಶ್ನಿಸಿದ. ಅದಕ್ಕೆ ಮಣಿಗ್ರೀವನು 'ಹೇ, ಬ್ರಾಹ್ಮಣ ಇಲ್ಲಿ ಒಂದು ಮನೋಹರವಾದ ಸರೋವರವಿದೆ. ಸ್ನಾನವನ್ನು ಮಾಡಿ ಬನ್ನಿರಿ. ಫಲಹಾರ ಸ್ವೀಕರಿಸಿ. ನಾನೇ ನಿಮ್ಮನ್ನು ರಕ್ಷಿಸಿದ್ದು' ಎಂದು ಹೇಳಿ ಅವರನ್ನು ಸರೋವರದ ಹತ್ತಿರ ಕರೆದುಕೊಂಡು ಹೋದನು. ಆ ಬ್ರಾಹ್ಮಣನು ಸ್ನಾನದ ನಂತರ, ಸಂಧ್ಯಾವಂದನೆ ಮಾಡಿ, ದೇವರ್ಷಿ ಪಿತೃತರ್ಪಣ ಮಾಡಿದ. ಮಣಿಗ್ರೀವ ಮತ್ತು ಆತನ ಪತ್ನಿ ಉಗ್ರ ದೇವನಿಗೆ ಅತಿಥಿ ಸತ್ಕಾರ ಮಾಡಿದರು. ಮಾವಿನ ಹಣ್ಣುಗಳನ್ನು ಹುಡುಕಿ ತಂದು ಆ ಬ್ರಾಹ್ಮಣನಿಗೆ ತಿನ್ನಲು ನೀಡಿದರು. ಸಂತೋಷದಿಂದ ಉಗ್ರದೇವನು, ಆಶ್ಚರ್ಯಪಟ್ಟು, ನೀವು ಯಾರು? ನನಗೆ ಏಕೆ ಸತ್ಕಾರ ಮಾಡುವಿರಿ?ಎಂದು ಪ್ರಶ್ನಿಸಿದರು. ಆಗ ಮಣಿಗ್ರೀವನು ತನ್ನ ವೃತ್ತಾಂತ ಹೇಳಿ, ಎಲ್ಲಾ ಬಂಧುಗಳು ದೂರಾದರು ಎಂದು ಆತನ ಕಾಲನ್ನು ಒತ್ತಿದನು. ಸಂತೋಷದಿಂದ ಉಗ್ರದೇವನು ತಾನು ಪ್ರಯಾಗಕ್ಕೆ ಹೊರಟ ಸಮಯದಲ್ಲಿ ದಾರಿ ತಪ್ಪಿ ಕಾಡಿಗೆ ಪ್ರವೇಶ ಮಾಡಿದೆ. ನೀರಡಿಕೆಯಿಂದ ನಾನು ಬಳಲುತ್ತಿರುವ ಸಮಯದಲ್ಲಿ, ನೀವು ನನ್ನನ್ನು ಉಪಚರಿಸಿದಿರಿ. ನಿಮಗೆ ಆದ ವಿಷಯವೇನು? ಯಾಕೆ ಕಾಡಿನಲ್ಲಿ ವಾಸಿಸುತ್ತಿರುವ ಸಂಗತಿ ಏನು ಎಂದು ಪ್ರಶ್ನೆ ಮಾಡಿದರು. ಉಗ್ರದೇವನು ನಿಮ್ಮ ದುಃಖವನ್ನು ಪರಿಹರಿಸಿ ನಾನು ಪ್ರಯಾಗಕ್ಕೆ ಹೊರಡುವೆನು ಎಂದು ಹೇಳಿದರು. ಮಣಿಗ್ರೀವನು ತನ್ನ ವೃತ್ತಾಂತ ಹೇಳಿ, ತಾನು ಸುಖದಿಂದ ಇರಲು, ದಾರಿದ್ರ್ಯ ಪರಿಹೃತವಾಗಿ ಮೊದಲಿನಂತೆ ಇರಲು ಉಪಾಯ ತಿಳಿಸಿರಿ ಎಂದು ಬೇಡಿಕೊಂಡನು. ಆಗ ಉಗ್ರದೇವನು, ನಿನ್ನ ದರಿದ್ರ ನಾಶವಾಗಲು ಮುಂದೆ ಬರುವ ಅಧಿಕಮಾಸ ದಂಪತಿಗಳು ತಪ್ಪದೇ ಪ್ರತಿನಿತ್ಯ ಒಂದು ತಿಂಗಳು ದೀಪವಿಡಬೇಕು. ಎಳ್ಳೆಣ್ಣೆ ದೀಪವಿಡಬೇಕು. ಕಾಡಿನಲ್ಲಿ ಇದು ಅಸಾಧ್ಯ. ಹೀಗಾಗಿ ನೀವು ಇಂಗುದಿ ಎಂಬ ಫಲದ ಎಣ್ಣೆಯಿಂದ ದೀಪ ವಿಡಬೇಕು. ಒಂದು ತಿಂಗಳು ಸರೋವರದಲ್ಲಿ ಸ್ನಾನ ಮಾಡಿ, ದೀಪವಿಡಬೇಕು. ಈ ದೀಪ ದಾನದಿಂದ ಎಲ್ಲಾ ದರಿದ್ರ ನಾಶವಾಗಿ, ಶುಭ ಉಂಟಾಗುತ್ತದೆ ಎಂದು ಹೇಳಿದರು. ಹೀಗೆ ಹೇಳಿ, ಉಗ್ರದೇವ ಅವರಿಗೆ ಆಶೀರ್ವಾದ ಮಾಡಿ, ಹೊರಟು ಬಿಟ್ಟನು. ಅವರು ಹೇಳಿದಂತೆ ಆ ದಂಪತಿಗಳು ಅಧಿಕ ಮಾಸ ಬರಲು, ಒಂದು ತಿಂಗಳು ದೀಪ ದಾನವನ್ನು ಮಾಡಿದರು ಕಾಲ ಕ್ರಮೇಣ ಸುಖ ಅನುಭವಿಸಿ, ದಂಪತಿಗಳು ಮೃತರಾಗಿ ಇಂದ್ರಲೋಕ ಸೇರಿದರು. ಮಣಿಗ್ರೀವನೇ ಮುಂದೆ ವೀರಬಾಹು ರಾಜನ ಮಗನಾದ ಚಿತ್ರಬಾಹು ಎಂಬ ಹೆಸರಿನವನಾಗಿ, ಹುಟ್ಟಿದ. ಅವನ ಪತ್ನಿಯೇ ಚಂದ್ರಕಲೆಯಾಗಿ ಹುಟ್ಟಿದಳು. ಹೀಗಾಗಿ ಅಧಿಕ ಮಾಸದಲ್ಲಿ ದೀಪದಾನ ಮಾಡಿದ ಫಲದಿಂದ ಹೇ ಚಿತ್ರಬಾಹು, ನೀನು ಸಕಲ ಸುಖಗಳನ್ನು ಅನುಭವಿಸುತ್ತಿರುವೆ ಎಂದು ಅಗಸ್ತ್ಯ ಋಷಿಗಳು ಅವನ ಪೂರ್ವ ಚರಿತ್ರೆಯನ್ನು ಹೇಳಿ ಆಶೀರ್ವಾದ ಮಾಡಿ ಹೊರಟರು. ಹೀಗೆ ಅಧಿಕ ಮಾಸದಲ್ಲಿ ಅತಿ ಶೀಘ್ರಫಲ ನೀಡುವ ದೀಪದಾನದ ಮಹಿಮೆಯಿಂದ ನಮ್ಮ ಅಭೀಷ್ಟೆಗಳು ಪೂರೈಸುವವು.



ನವತಿರುಪ್ಪದಿ - ನವತಿರುಪತಿಗಳು -1 ಶ್ರೀ ವೈಕುಂಠಂ

ಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್
ಅನುವಾದ : ಸೂರ್ಯವಂಶಿ

ಪಾಂಡ್ಯರಾಜರು ಆಳ್ವಿಕೆ ನಡೆಸಿದ ಮಧುರೈನಗರಿಂದ ತಿರುನಲ್ವೇಲಿಯವರೆಗೂ ಕಂಡು ಬರುತ್ತಿರುವ ದಿವ್ಯದೇಶಗಳನ್ನು ಪಾಂಡ್ಯನಾಡು ದಿವ್ಯದೇಶಗಳೆಂದು ಬಣ್ಣಿಸುತ್ತಾರೆ. ತೂತ್ತುಕುಡಿ ಜಿಲ್ಲೆಯ ಸುತ್ತಮುತ್ತಲು ನೆಲೆಗೊಂಡಿರುವ ಒಂಭತ್ತು ಕ್ಷೇತ್ರಗಳನ್ನು ನವ ತಿರುಪತಿಗಳು ಎನ್ನುತ್ತಾರೆ. ಅದರಲ್ಲಿ ಶ್ರೀವೈಕುಂಠಂ ಎಂಬ ದಿವ್ಯದೇಶವೂ ಒಂದಾಗಿದೆ. ಈ ದಿವ್ಯ ದೇಶವು ತಿರುನಲ್ವೇಲಿಯಿಂದ ತಿರುಚ್ಚೆಂದೂರ್‌ಗೆ ಹೋಗುವ ಮಾರ್ಗದಲ್ಲಿ 26 ಕಿ.ಮೀ. ದೂರದಲ್ಲಿ ತಾಮ್ರಪರ್ಣಿ ನದಿಗೆ ಉತ್ತರದಿಕ್ಕಿನಲ್ಲಿ ಸುಮಾರು 5 ಎಕರೆಗಳ ಸ್ಥಳದಲ್ಲಿ ಪೂರ್ವದಿಕ್ಕನ್ನು ನೋಡುತ್ತಿರುವಂತೆ, ಮೂರು ಪ್ರಾಕಾರಗಳನ್ನು ಒಳಗೊಂಡಿದ್ದು, 110 ಅಡಿಗಳ ಎತ್ತರವಾದ ಒಂಭತ್ತು ಕೋಣೆಗಳು, ಎತ್ತರವಾದ ರಾಜಗೋಪುರದೊಂದಿಗೆ, ಪ್ರಾಕಾರಗಳೊಂದಿಗೆ ವಿರಾಜಮಾನವಾಗಿದೆ. ಸಂತಾನ ಕೃಷ್ಣ ಲಕ್ಷ್ಮೀನರಸಿಂಹ, ತಿರುವೇಂಕಡಮುಡಯಾನ್, ಗರುಡದೇವರು, ಹನುಮಂತ, ಮೊದಲಾದ ದೇವತೆಗಳ ಪ್ರತ್ಯೇಕ ಸನ್ನಿಧಿಯೊಂದಿಗೆ ಈ ದೇವಾಲಯ ಶೋಭಾಯಮಾನವಾಗಿದೆ.

ಈ ಆಲಯ ತೀರ್ಥವನ್ನು ಭೃಗು ತೀರ್ಥ, ತಾಮ್ರ ಪರ್ಣಿತೀರ್ಥ, ಮತ್ತು ಕಲಶತೀರ್ಥ ಎಂದು ಕರೆಯುತ್ತಾರೆ. ವಿಮಾನ ಗೋಪುರವನ್ನು ಸುಂದರ ವಿಮಾನವೆಂದು ವರ್ಣಿಸುತ್ತಾರೆ. ಸಾಧಾರಣವಾಗಿ ಭಗವಂತನು ಆದಿಶೇಷನ ಮೇಲೆ ಶಯನಿಸಿರುವಂತೆ ಅನೇಕ ದಿವ್ಯದೇಶಗಳಲ್ಲಿ ನಮಗೆ ದರ್ಶನ ಭಾಗ್ಯವನ್ನು ಕರುಣಿಸಿದರೆ, ಇಲ್ಲಿ ಮೂಲ ಮೂರ್ತಿಗೆ ಆದಿಶೇಷನು ಛತ್ರಿಯನ್ನು ಹಿಡಿದಂತೆ ಇದ್ದು ಪೂರ್ವದಿಕ್ಕನ್ನು ನೋಡುತ್ತಿದ್ದಾನೆ. ಹಾಗೇ ನಿಂತಿರುವ ಭಂಗಿಯಲ್ಲಿ ಶ್ರೀ ವೈಕುಂಠನಾಥನು, ಕಳ್ಳಪಿರಾನ್ ಎಂಬ ಪವಿತ್ರವಾದ ಹೆಸರಿನೊಂದಿಗೆ ಭಕ್ತರಿಗೆ ಸೇವಾ ಭಾಗ್ಯವನ್ನು ಕರುಣಿಸುತ್ತಿದ್ದಾನೆ. ಈ ಸ್ವಾಮಿಯನ್ನು ಚೊರನಾಥಃ ಎಂದೂ ಕರೆಯುತ್ತಾರೆ. ಹಾಗೇ ಅಮ್ಮನವರು ವೈಕುಂಠವಲ್ಲಿ, ಭೂಮಿದೇವಿ, ಚೋರನಾಯಕಿ ಎಂಬ ಹೆಸರಿನಲ್ಲಿ, ಕುಳಿತಿರುವ ಭಂಗಿಯಲ್ಲಿ ಭಕ್ತರನ್ನು ಅನುಗ್ರಹಿಸುತ್ತಿದ್ದಾಳೆ. ಅನೇಕ ಅದ್ಭುತವಾದ ಹೆಸರಿನಿಂದ ಕರೆಯಲ್ಪಡುತ್ತಿರುವ ಈ ಸ್ವಾಮಿಗೆ ಚೊರನಾಥ ಎಂಬ ಹೆಸರು ಹೇಗೆ ಬಂತು ಎಂಬ ವಿಷಯ ಬಹುಳ ಆಸಕ್ತಿಕರವಾಗಿದೆ.

ವಿಶೇಷಾಂಶಗಳು :

ಭಗವಂತನ, ಮೂಲಮೂರ್ತಿ :	ವೈಕುಂಠನಾಥನು, ಕಳ್ಳಪಿರಾನ್, ಚೋರನಾಥಃ ಆದಿಶೇಷನು ಕೊಡೆಯನ್ನು ಹಿಡಿದು ಪೂರ್ವದಿಕ್ಕಿನಲ್ಲಿ ನಿಂತಿರುವ ಭಂಗಿಯಲ್ಲಿ ನೆಲಸಿರುವರು.
ಉತ್ಸವ ಮೂರ್ತಿ :	ಶ್ರೀ ಭೂನೀಳಾ ಸಮೇತ ಶ್ರೀ ವೈಕುಂಠನಾಥಸ್ವಾಮಿ - ನಿಂತಿರುವ ಭಂಗಿಯಲ್ಲಿ
ಅಮ್ಮನವರ ಮೂಲ ಮೂರ್ತಿ :	ವೈಕುಂಠವಲ್ಲಿ, ಕುಳಿತಿರುವ ಭಂಗಿಯಲ್ಲಿ
ಉತ್ಸವಮೂರ್ತಿ :	ಚೋರನಾಯಕಿ
ತೀರ್ಥ :	ಕಲಶತೀರ್ಥ, ಭೃಗುತೀರ್ಥ, ತಾಮ್ರಬರ್ಣಿ ತೀರ್ಥ
ವಿಮಾನ :	ಚಂದ್ರವಿಮಾನ
ವಿಶೇಷ :	1. ಮಾವಿನ ಮರ ಸ್ಥಳ ವೃಕ್ಷ 2. ಈ ದೇವಾಲಯ ದರ್ಶನ ಸೂರ್ಯ ದೋಷ ನಿವೃತ್ತಿ
ಮಂಗಳಾಶಾಸನ:	ನಮ್ಮಾಳ್ವಾರರು

ಸ್ಥಳಪುರಾಣ :

ನಮ್ಮಾಳ್ವಾರರು ತಾವು ರಚಿಸಿರುವ ಪಾಶುರದಲ್ಲಿ ಈ ಸ್ವಾಮಿಯನ್ನು ಸ್ತುತಿಸಿದ್ದಾರೆ. ವೈಕುಂಠನಾಥನು ಕಾಲದೂಷಕ ಎಂಬ ಚೋರನನ್ನು ಅನುಗ್ರಹಿ

ಸುವುದಕ್ಕಾಗಿ ತಾನೇ ಒಬ್ಬ ಚೋರನಾಗಿ ಬದಲಾದನಂತೆ. ಕಾಲ ದೂಷಕನೆಂಬ ಒಬ್ಬ ಕಳ್ಳ ಪ್ರತಿದಿನವೂ ಕಳ್ಳತನವನ್ನೂ ಮಾಡುತ್ತಿದ್ದ. ಹಾಗೇ ಕಳ್ಳತನ ಮಾಡುವ ಮೊದಲು ಒಮ್ಮೆ ಈ ಸ್ವಾಮಿಯನ್ನು ಸ್ಮರಿಸಿ ತನ್ನ ಗುಂಪಿನೊಂದಿಗೆ ಹೋಗಿ ಕಳ್ಳತನವನ್ನು ಮಾಡುತ್ತಾ ಅದರಲ್ಲಿ ಬಂದ ಹಣದಲ್ಲಿ ಅರ್ಧಭಾಗವನ್ನು ಸ್ವಾಮಿಗೆ ಸಮರ್ಪಿಸುತ್ತಿದ್ದನಂತೆ. ಉಳಿದ ರ್ಧಭಾಗವನ್ನು ಮಾತ್ರಾ ತಾನು ಉಪಯೋಗಿಸುತ್ತಿದ್ದನಂತೆ. ಹೀಗೆ ಕೆಲವು ದಿನಗಳು ಉರುಳಿದ ನಂತರ ಒಂದು ದಿನ ಕಾಲ ದೂಷಕ ರಾಜನ ಅರಮನೆಯಲ್ಲಿ ಕಳ್ಳತನ ಮಾಡಿದನಂತೆ.

ಅದನ್ನು ಅರಿತ ರಾಜ ಭಟರು ಕಾಲ ದೂಷಕ ಮತ್ತು ಅವನ ಗುಂಪನ್ನು ಬಂಧಿಸುವುದಕ್ಕೆ ಪ್ರಯತ್ನಿಸುತ್ತಿರುವಾಗ ಅವನ ಗುಂಪಿನವರು ಬಂಧಿಸಲ್ಪಟ್ಟರು. ಆದರೆ ಕಾಲ ದೂಷಕ ಮಾತ್ರಾ ಅವರಿಂದ ತಪ್ಪಿಸಿಕೊಂಡನಂತೆ. ಆಗ ಕಾಲದೂಷಕನ ಅನುಚರರು ತಮ್ಮ ನಾಯಕ ಎಲ್ಲಿದ್ದಾನೆಂದು ತೋರಿಸುತ್ತೇವೆಂದು ರಾಜಭಟರನ್ನು ಕರೆದುಕೊಂಡು ಹೋಗಿ ನೋಡಿದಾಗ ಕಾಲ ದೂಷಕನು ಶ್ರೀ ವೈಕುಂಠನಾಥನನ್ನು ಶರಣು ಹೋದನಂತೆ. ಭಕ್ತಾರಾಧೀನನಾದ ಶ್ರೀ ವೈಕುಂಠನಾಥನು ಕಾಲದೂಷಕನನ್ನು ಕಾಪಾಡುವುದಕ್ಕಾಗಿ ತಾನೇ ಕಾಲದೂಷಕನ ರೂಪದಲ್ಲಿ ರಾಜ ಭಟರ ಎದಿರಿಗೆ ಬಂದು ನಿಂತನಂತೆ. ಆಗ ರಾಜಭಟರು ಅವನನ್ನು ಬಂಧಿಸಿ ರಾಜ ಬಳಿಗೆ ಕರೆದೊಯ್ದರಂತೆ.

ರಾಜನಿಗೆ ಈ ಕಾಲದೂಷಕನನ್ನು ತೋರಿಸುತ್ತಿರುವಾಗ ಒಂದು ಅನುಮಾನ ಉಂಟಾಯಿತಂತೆ. ಈ ಚೋರನಾಯಕನಾದ ಕಾಲದೂಷಕನನ್ನು ನೋಡುತ್ತಿದ್ದರೆ ಯಾವುದೋ ಒಂದು ವಿಚಿತ್ರವಾದ ಅನುಭವವುಂಟಾಗುತ್ತಿದೆ. ಇವನು ಕಾಲ ದೂಷಕನೇ? ನನಗೆ ಭಗವಂತನಂತೆ ಕಾಣುತ್ತಿದ್ದಾನಲ್ಲಾ ಎಂದು ಮನಸ್ಸಿನಲ್ಲೇ ಅಂದುಕೊಂಡನಂತೆ. ಭಗವಂತನೂ ಓ ರಾಜಾ ! ನಿನ್ನ ರಾಜ್ಯದಲ್ಲಿ ಅಪಾರವಾದ ಸಂಪತ್ತು ಇದೆ. ಆದರೆ ನೀನು ಅದನ್ನು ಪ್ರಜೆಗಳಿಗಾಗಿ ರಾಜ್ಯಕ್ಕಾಗಿ ವಿನಿಯೋಗಿಸುತ್ತಿಲ್ಲ. ಸಂಪತ್ತು ಹಾಗೇ ಇರಬಾರದು. ಅದನ್ನು ಸರಿಯಾಗಿ ವಿನಿಯೋಗಿಸಬೇಕು. ಆದ್ದರಿಂದ ನಾನೇ ಕಾಲ ದೂಷಕನಾಗಿ ಈ ಕೆಲಸವನ್ನು ಮಾಡಿದೆ. ಕಾಲದೂಷಕನು ದೊಡ್ಡ ಕಳ್ಳನಾದರೂ ಧರ್ಮ ಮಾರ್ಗವನ್ನು ಬಿಡದೇ ನೀನು ಯಾವುದಕ್ಕೂ ಉಪಯೋಗಿಸದ ಹಣವನ್ನು ಮಾತ್ರಾ ಕಳ್ಳತನ ಮಾಡಿದ್ದಾನೆ. ಅದಲ್ಲದೇ ಧರ್ಮಕ್ಕೆ ಸಲ್ಲಬೇಕಾದ ಹಣವನ್ನು ನನ್ನ ಮೂಲಕ ಧರ್ಮಾಚರಣೆಗೆ ವಿನಿಯೋಗಿಸುತ್ತಿದ್ದಾನೆ. ನೀನು ಈ ಕೂಡಲೇ ಪ್ರಜೆಗಳಿಂದ ಅಪಹರಿಸಿದ ಹಣವನ್ನು ಒಳ್ಳೆಯ ಕೆಲಸಗಳಿಗೆ ಈ ಕ್ಷಣದಿಂದಲೇ ಪ್ರಜೆಗಳಿಗೆ ಬೇಕಾದ ಅನುಕೂಲಗಳಿಗಾಗಿ ಉಪಯೋಗಿಸಬೇಕೆಂದು ಆದೇಶಿಸಿದ. ಅದರೊಂದಿಗೆ ಕಳ್ಳನಾಗಿ ತನ್ನ ಎದುರು ನಿಂತು ತನಗೆ ಜ್ಞಾನೋದಯವನ್ನು ಉಂಟು ಮಾಡಿದ ಆ ಭಗವಂತನನ್ನು ನೋಡಿ ರಾಜನು, ಸ್ವಾಮೀ ! ನೀನು ನಮಗೆ ಈ ಚೋರನಾಥನಂತೆ ನಿಂತು ದರ್ಶನ ಭಾಗ್ಯವನ್ನು ಕರುಣಿಸು ಎಂದು ಪ್ರಾರ್ಥಿಸಿದಾಗ, ರಾಜನ ಪ್ರಾರ್ಥನೆಯ ಮೇರೆಗೆ ಭಗವಂತನು ಅಂದಿನಿಂದ ಇಂದಿನವರೆಗೂ "ಕಳ್ಳ ಪಿರಾನ್" ಎಂಬ ಹೆಸರಿನಿಂದ ಅಂದರೆ ಚೋರನಾಥನಂತೆ ದರ್ಶನವನ್ನು ನೀಡುತ್ತಿದ್ದಾನೆ.

ಧ್ಯಾನಶ್ಲೋಕ

ಶ್ರೀವೈಕುಂಠಪುರೇ ಹರಿಃ ವಿಹರತೇ ವೈಕುಂಠವಲ್ಲ್ಯನ್ವಿತಃ
ದತ್ತೋ ಯಃ ಸುರನಾಯಕಸ್ಯ ವರದಃ ಶ್ರೀತಾಮ್ರಪರ್ಣೀತಟೇ
ತತ್ರೈವೇಂದು ವಿಮಾನಭೂಷಣಮಣಿಃ ದಿವ್ಯೈಃ ಸದಾ ಸೂರಿಭಃ
ಸೇವ್ಯ! ಸ್ವಾಂಘ್ರಿಸರೋರುಹಾಶ್ರಿತ ಭವಪ್ರಧ್ವಂಸನೈಕವ್ರತ।



ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ



ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸ ಬೇಕಾಗಿ ಕೋರಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ



ಆಳ್ವಾರುಗಳು ಕಂಡ ತಿರುವೇಂಗಡ

ಕಳೆದ ಸಂಚಿಕೆಯಿಂದ

– ಎಂ. ಆರ್. ನರಸಿಂಹನ್

ಈ ಸಮಸ್ತ ಭುವನವನ್ನೂ ಭಕ್ಷಿಸಿದ ಮಹಾ ವಕ್ತ್ರವುಳ್ಳವನೇ, ಅಪಾರ ಯಶಸ್ಸಿಗೆ ಆಕರನಾದವನೇ, ಸ್ವಾಭಾವಿಕ ಕೌಜ್ವಲ್ಯ ಪರಿಪೂರ್ಣ ಪ್ರಕಾಶವುಳ್ಳ ದಿವ್ಯ ಮಂಗಳ ವಿಗ್ರಹನೂ ಆದ ಮಹಾಮಹಿಮನೆ, ದಾಸನಾದ ನನಗೆ ಪ್ರಾಣ ಸ್ವರೂಪನೆ, ಸಕಲ ಲೋಕಗಳಿಗೂ ತಿಲಕಪ್ರಾಯವಾಗಿ ನಿಂತ ತಿರುವೇಂಗಡದಲ್ಲಿರುವ ನನ್ನ ಸ್ವಾಮಿಯೇ, ಕುಲಕ್ರಮದಲ್ಲಿಯೂ ಅನಾದಿ ಸಿದ್ಧನಾದ ದಾಸ್ಯವುಳ್ಳವನು ನಾನು ನಿನ್ನ ತಿರುವಡಿಗಳನ್ನು ಆಶ್ರಯಿಸುವ ಉಪಾಯವನ್ನು, ಕ್ರಮವನ್ನು ದಯವಿಟ್ಟು ತಿಳಿಸು. ಕ್ರೂರವಾದ ರಾಕ್ಷಸರ ಸಮೂಹವೆಲ್ಲಾ ಧ್ವಂಸವಾಗುವಂತೆ ಮಾಡಿದ ಪ್ರಜ್ವಲಿಸುವ ಚಕ್ರಾಯುಧವನ್ನು ಧರಿಸಿದ ನಿತ್ಯ ಸೂರೀಶ್ವರನೇ? ಸ್ವಾಮಿಯೇ. ವಿಕಸಿತೋಜ್ವಲ ಪುಂಡರೀಕ ಶೋಭಿತ ಪಾದಾರವಿಂದಯುಗಳನಾದ ತಿರುವೇಂಗಡದ ಅಧಿಪತಿಯೇ, ನಿನ್ನಲ್ಲಿ ಅಪಾರ ಪ್ರೇಮಮಗ್ನನಾಗಿರುವ ದಾಸಭೂತನಾದ ನನಗೆ ನಿನ್ನ ಪಾದಗಳನ್ನು ಆಶ್ರಯಿಸುವ ರೀತಿಯನ್ನು ಕೃಪೆಯಿಂದ ಹೇಳು, ಮೇಘದ ಬಣ್ಣಕ್ಕೆ ಭ್ರಾಂತಿಯೇರ್ಪಡುವಂತೆ ಮೈಕಾಂತಿಯುಳ್ಳ ಸ್ವಾಮಿಯೆ, ಮನಸ್ಸಿನಲ್ಲಿ ಹೊಕ್ಕು ರುಚಿಯನ್ನು ನೀಡುವ ಅಮೃತವೇ ! ನಿತ್ಯಸೂರಿಗಳ ಅಧಿಪತಿಯೆ! ರಮ್ಯ ಪ್ರವಾಹಗಳು ತಂದು ರಾಶಿ ಹಾಕುವ ವಜ್ರ ವೈಢೂರ್ಯಾದಿಗಳಿಂದ ಮೆರೆಯುವ ತಿರುವೇಂಗಡದ ಸ್ವಾಮಿಯೆ! ನಿನ್ನ ಪಾದಾರವಿಂದಗಳನ್ನು ಆಶ್ರಯಿಸುವಂತೆ ದಾಸರಾದ ನಮಗೆ ಅನುಗ್ರಹಿಸು. ಲೋಕವನ್ನು ಹಿಂಸಿಸಿದ ರಾಕ್ಷಸರ ಸಮೂಹದ ಮೇಲೆ ಅಗ್ನಿಮುಖವಾದ ಬಾಣಗಳ ಮಳೆ ಕರೆದ ಧನುಸ್ಸನ್ನು ಹಿಡಿದಿರುವವನೆ! ಮಹಾಲಕ್ಷ್ಮಿಯ ಅನುರೂಪ ನಾಯಕನೆ! ದಿವ್ಯ ತೇಜೋರಾಶಿಯೆ! ದೇವತೆಗಳೂ, ಮುನಿವರರೂ ಗುಂಪಾಗಿ ಬಂದು ಸೇವಿಸುವ ತಿರುವೇಂಗಡದೊಡೆಯನೇ! ಪುಷ್ಪಗಳಿಂದ ರಂಜಿಸುವ ಪಾದಾರವಿಂದಗಳನ್ನು ಮಹಾ ಪಾಪಿಯಾದ ನಾನು ಸೇರುವ ಉಪಾಯವನ್ನು ಬೋಧಿಸು. ಒಂದಕ್ಕೊಂದು ಸೇರಿದಂತೆ ಬೆಳೆದಿದ್ದ ಸಪ್ತ ಸಾಲ ವೃಕ್ಷಗಳನ್ನು ಛೇದಿಸಿದ ಅಪೂರ್ವ ಬಿಲ್ಲಾರನೆ! ಹೊಂದಿಕೊಂಡಂತೆ ಇದ್ದ ಯಮಳ ವೃಕ್ಷಗಳ ನಡುವಿನಿಂದ ನುಗ್ಗಿದ ಜಗತ್ಕಾರಣನೆ! ಕಾಮ್ಯೋಪಗಳೋಪಾದಿ ಇರುವ ಆನೆಗಳ ಹಿಂಡಿನಿಂದ ರಂಜಿಸುವ ತಿರುವೇಂಗಡಕ್ಕೆ ಸ್ವಾಮಿಯೇ ಮಹಾಮಹಿಮೆಯಿಂದ ಕೂಡಿದ ಚಾಪಹಸ್ತನಾದ ನಿನ್ನ ಪಾದಗಳನ್ನು ಸೇರುವುದು ಯಾವ ಕಾಲಕ್ಕೆ ? ಅಯ್ಯೋ! ಪ್ರಪಂಚವನ್ನು

ಅಳೆದ ಪಾದಗಳನ್ನು ಎಂದಿಗೆ ಕಾಣುವುವೋ ಎಂದು ಕಾತುರರಾಗಿ ನಿತ್ಯಸೂರಿಗಳು ನಿಂತು ಸ್ತೋತ್ರ ಮಾಡಿ ಗುಂಪು ಗುಂಪಾಗಿ ಮೈಯ್ ಮನಸ್ಸಿನಿಂದ ಮಾಡುವ ಸೇವೆಯನ್ನು ಕೊಳ್ಳುವ ವೇಂಗಡದೊಡೆಯನೆ ದಾಸನಾದ ನಾನು ಈ ಶರೀರ ವಿರುವಾಗ ನಿನ್ನ ಪಾದಗಳನ್ನು ಸೇರುವುದು ಎಂದಿಗೆ? ದಾಸನಾದ ನಾನು ಆಶ್ರಯಿಸಿ ನಿರಂತರವಾಗಿ ಅನುಭವಿಸ ಬೇಕಾದ ಅಮೃತವೇ! ನಿತ್ಯಸೂರಿಗಳಿಗೆ ಅಧಿಪತಿಯೆ! ಶತ್ರು ಧ್ವಂಸಕನಾದ ಗರುಡನನ್ನೇ ಧ್ವಜವನ್ನಾಗಿ ಹೊಂದಿರುವ ಸುಂದರ ಬಿಂಬಾಧರಯುಕ್ತನಾದ ಸ್ವಾಮಿಯೇ! ಗುಲ್ಮದಂತೆ ಅಪಾರವಾಗಿ ಹಬ್ಬಿ ಕೊಂಡಿರುವ ಪಾಪಗಳನ್ನು ನಾಶಪಡಿಸ ತಕ್ಕ ಔಷಧವೇ ತಿರುವೇಂಗಡದ ಸ್ವಾಮಿಯೇ ನಿನ್ನ ಪಾದಗಳನ್ನು ನೋಡುವುದಕ್ಕೆ ವ್ರತಾಚರಣೆ ಮಾಡದೆ ಕ್ಷಣಮಾತ್ರವೂ ಇರಲು ಇಷ್ಟ ಪಡೆನು. ನಿನ್ನ ಪಾದಗಳನ್ನು ನೋಡಲು ವ್ರತಾಚರಣೆ ಮಾಡದೆ ಇದ್ದಾಗ್ಯೂ ನಾನು ನಿನ್ನ ದರ್ಶನಕ್ಕೆ ವಿಲಂಬವನ್ನು ಸಹಿಸೆನು ಎಂದು ಸೂಕ್ಷ್ಮದರ್ಶಿಯಾದ ನೀಲಕಂಠನೂ, ಜ್ಞಾನಿಯಾದ ಬ್ರಹ್ಮನೂ,ಇಂದ್ರನೂ, ಸುಂದರ ನೇತ್ರರಾದ ದೇವತಾಸ್ತ್ರೀಯರೂ ಮತ್ತು ಇತರರು ಬಂದು ಆಶ್ರಯಿಸುವ ತಿರುವೇಂಗಡದ ಒಡೆಯನೇ ಕೃಷ್ಣನಾಗಿ ಜನಿಸಿ ಎಲ್ಲರನ್ನೂ ಮೋಹಪಡಿಸಿದಂತೆ ನನ್ನ ಸಮೀಪವನ್ನು ಬಂದು ಸೇರು. ಅನಾಶ್ರಿತರಿಗೆ ಸಮೀಪಕ್ಕೆ ಬಂದವನಂತೆ ಕಂಡು ಬರದೇ ಇರುವಂತೆಯೂ ಆಶ್ರಿತರಿಗೆ ಸಮೀಪಕ್ಕೆ ಬಾರದೆ ಇರುವವನಂತೆ ಕಂಡು ಬರುವವನಾಗಿಯೂ ಇರುವವನೆ! ಕೆಂದಾವರೆಯ ಕಣ್ಣುಗಳನ್ನುಳ್ಳವನೆ! ಪಕ್ವಬಿಂಬಾಧರನೆ! ನಾಲ್ಕು ತೋಳುಗಳನ್ನುಳ್ಳ ಅಮೃತಸ ದೃಶನೆ ನನ್ನ ಪ್ರಾಣಧಾರನಕೆನೆ ಚಿಂತಾಮಣಿಯ ಕಾಂತಿಯು ರಾತ್ರಿಯನ್ನು ಹಗಲನ್ನಾಗಿ ಮಾಡುವಂತಹ ಆಭರಣ ಶೋಭಿತನಾದ ವೇಂಗಡದೊಡೆಯನೆ ನಿನ್ನ ಪಾದಗಳನ್ನು ಮಾತ್ರ ದಾಸನಾದ ನಾನು ಒಂದು ಕ್ಷಣವೂ ಆಗಲಿರಲಾರೆನು. ನಿನ್ನನ್ನು ಬಿಟ್ಟು ಕ್ಷಣ ಮಾತ್ರವೂ ಇರಲಾರದಂತಹ ಪದ್ಮವಾಸಿನಿಯಾದ ಲಕ್ಷ್ಮಿ ದೇವಿಯು ನಿತ್ಯ ವಾಸ ಮಾಡುವ ಎದೆಯನ್ನು ಹೊಂದಿದವನೇ! ಅಸಮಾನ ಕೀರ್ತಿ ಶಾಲಿಯೆ! ತ್ರಿವಿಧ ಚೇತನಾ ಚೇತನ ಪ್ರಪಂಚ ವ್ಯಾಪಕನೂ ನನ್ನನ್ನು ಆಳುವವನೂ, ಅನ್ಯಾದೃಶರಾದ ದೇವ ಮುನಿ ಬೃಂದವು ಆದರಿಸಿ ಆಶ್ರಯಿಸುವ ವೇಂಗಡದೊಡಯನೆ ಶರಣ್ಯಾನ್ತರವನ್ನೂ ಬಲ್ಲಿದ ದಾಸನಾದ ನಾನು ನಿನ್ನ ಪಾದಗಳ ಕೆಳಗೆ ಸೇರಿಕೊಂಡು ಬಿಟ್ಟೆನು. ದಾಸರೇ! ಪಾದಗಳ ಕೆಳಗೆ ಸೇರಿಕೊಂಡು ಪ್ರವೇಶಿಸಿ ಬಾಳಿರಿ ಎಂದು ಹೇಳಿ ಹೇಳಿ ತನ್ನ ಅನುಗ್ರಹವನ್ನು ನೀಡುವ ರೀತಿಗೆ ಸಮಾನರಿಲ್ಲದ ಸರ್ವೇಶ್ವರನನ್ನು ಸ್ತುತಿಸಲು ಸಸ್ಯಭರಿತ ಕ್ಷೇತ್ರವಾದ ಕುರುಗೂರಿನ ಶಡಗೋಪರು ರಚಿಸಿರುವ ಸಾವಿರ ಪದ್ಯ ಆವಿರ್ಭವಿಸಿ ಮಹಾ ಬಲಶಾಲಿ ಹಿರಣ್ಯಕಶಿಪುವನ್ನು ತನ್ನ ನಖದಿಂದ ಎದೆ ಬಗೆದು ನಾಶ ಪಡಿಸಿದ ನನ್ನ ಸ್ವಾಮಿಯು ವಾಸಿಸುವ ವೇಂಗಡವನ್ನು ಹೋಗಿ ಸೇರು ಮನಸ್ಸೇ! ಪಂಚಭೂತ ಸ್ವರೂಪನೂ,ಸಹಸ್ರ ನಾಮೋಜ್ವಲನೂ, ಕರ್ಮಮೂಲವಾದ ಜನ್ಮಲೇಪದಿಂದ ಮುಕ್ತನಾದವನೂ ವರ್ಧಿಸುವ ಜಾಗವಾದ ವೇಂಗಡವು ನೀಳ ಆಗಸದಿಂದಲೂ, ಮಳೆನೀರು, ಹನಿಮಂಜು ಇವುಗಳನ್ನು ಧರಿಸಿರುವ ಕಾರ್ಮುಗಿಲುಗಳು ತಂಗಿ ನಿಂತು ಶಿಖರಗಳಿಗೆ ತಮ್ಮ ಹೊದಿಕೆಯಿಂದ ಆಚ್ಛಾದಿಸಲ್ಪಡುತ್ತದೆ. ಇಂತಹ ತೋಪುಗಳ ಜಾಗವನ್ನು ಆಶ್ರಯಿಸು ಮನಸ್ಸೇ! ಪಂಚಭೂತಗಳ ನಿರ್ವಾಹಕನೂ, ನಿತ್ಯ ಸೂರಿ ಸಂಸೇವಿತನೂ, ಪರಿಮಳಯುತವಾದ ತಾವರೆಯಲ್ಲಿ ನಲೆಸಿರುವ ಲಕ್ಷ್ಮಿಯ ನಾಯಕನೂ ಅದ ನನ್ನ ಸ್ವಾಮಿಯು, ಎತ್ತರವಾದ ಅಟ್ಟಣೆಗಳ ಮೇಲೆ ನಿಂತು ಬಳ್ಳಿಗಳಂತೆ ಬಳುಕುವ ಸೂಕ್ಷ್ಮ ಸೊಂಟಗಳ ಸುಂದರ ಕುರವ ಸ್ತ್ರೀಯರು ಹೊಲದಲ್ಲಿನ ಮಾಗಿದ ತೆನೆಗಳನ್ನು ಕಾಯುತ್ತಿರುವ ಪ್ರದೇಶವಾದ ವೇಂಗಡವನ್ನು ಸೇರಿ ಆಶ್ರಯಿಸು ಮನಸ್ಸೇ ! ಸಕಲರಿಂದ ಅನುಸಂಧಾನಿಸಲ್ಪಡುವ ಅಷ್ಟಾಕ್ಷರೀ ಮಂತ್ರದಿಂದ ಅಂತಹ ಜನರು ಉಜ್ಜೀವಿಸುವಂತೆಯೂ ಅಂತಹವರ ಸಂಸಾರ ಬಂಧುಗಳು ಕಳಚಿಕೊಳ್ಳುವಂತೆಯೂ ಅನುಗ್ರಹಿಸುವ ಸ್ವಾಮಿಯು ನೆಲೆಸಿರುವ ಸ್ಥಳವು, ಪರಿಮಳಯುತವಾದ ಕುಸುಮಗಳಿಂದ ಆವೃತವೂ ವಿಶಾಲ ತೋಟಗಳಿಂದ ರಮ್ಯವೂ ಆದ ಲೋಕಕ್ಕೇ ತಿಲಕಪ್ರಾಯವಾದ ತಿರುವೇಂಗಡವು. ಅದನ್ನು ಹೋಗಿ ಆಶ್ರಯಿಸು ಮನಸ್ಸೇ. ಚಿಕ್ಕವೂ, ಸುಂದರವೂ ಆದ ಕೆಂಪು ಮೀನುಗಳು ಸಂತೋಷದಿಂದ ಚಿಮ್ಮಿ ನೆಗೆದಾಡುವ ಜಲಾಶಯಗಳನ್ನು ಉಳ್ಳ ವೇಂಗಡದಲ್ಲಿ ನಿತ್ಯ ವಾಸ ಮಾಡುವ ತಿರುವೇಂಗಡದೊಡೆಯನನ್ನು ಕುರಿತು ತಿರುಮಂಗೈ ನಾಡಿಗೆ ಸೇರಿದ ಕಲಿಯನ್ ಎಂದು ಹೆಸರನ್ನು ಹೊಂದಿದ ತಿರುಮಂಗೈ ಆಳ್ವಾರ್ ರಚಿಸಿದ ಶ್ರೇಷ್ಠ ನುಡಿ ಮಾಲೆಗಳನ್ನು ಇವು ಫಲ ನೀಡುವುವೋ,ಇಲ್ಲವೋ ಎನ್ನುವ ಸಂದೇಹಕ್ಕೆ ಎಡೆಗೊಡದೆ ವಿಶ್ವಾಸದಿಂದ ಅನುಸಂಧಾನ ಮಾಡುವವರು ಹಡಗುಗಳಿಂದ ತುಂಬಿದ ವಿಶಾಲವಾದ ಸಾಗರದಿಂದ ಆವೃತವಾದ ಭೂಮಂಡಲದಲ್ಲಿರುವವರಿಗೆಲ್ಲಾ ಆಶ್ರಯ ಸ್ಥಾನರಾಗಿ, ರಕ್ಷಕರಾಗಿ, ಲೀಲಾ ವಿಭೂತಿಯನ್ನು ನಿರ್ವಹಿಸುವವರಾಗಿ, ತದನಂತರ ಪರಮ ಪದವನ್ನೂ ಆಳತಕ್ಕಂತಹವರಾಗಿ ಬಾಳುತ್ತಾರೆ.



- ಮುಂದುವರೆಯುತ್ತದೆ.

ಧಾರಾವಾಹಿ

ತಿರುಮಲೆ ಕಾಲಮಾನಾಚರಣೆಗಳು

– ಮೂಲ . ಡಾ॥ ಎನ್. ಸಿ.ವಿ. ನರಸಿಂಹಾಚಾರ್ಯ
– ಅನುವಾದ : ಶ್ರೀಮತಿ

ಹೀಗೆ ನುಡಿಯುವುದರ ಮೂಲಕ ಶ್ರೀಶೇಷನನ್ನು ಪರ್ವತ ವಾಗಿರುವಂತೆ ನೇಮಿಸಿ ತಾನೂ ಸಹಾ ಶ್ರೀದೇವಿಯೊಂದಿಗೆ, ದೇವತೆಗಳೊಂದಿಗೆ ವಿಷ್ವಕ್ಸೇನ ಮೊದಲಾದ ನಿತ್ಯಾನಂದ ದೇವತೆಗಳೊಡನೆ ಅವತರಿಸಬೇಕೆಂದು ನಿರ್ಣಯಿಸಿ,

"ಅಹಂ ಸರ್ವಜಂತೂನಾಂ ದೃಷ್ಟಿ ಗೋಚರತಾಂ ಗತಃ
ವಸಿಷ್ಯಾಮಿ ಶ್ರಿಯಾ ಸಾರ್ದಂ ದದಾಮಿಷ್ಟಾನಿ ದೇಹಿನಾಂ"

(ನಾನು ಸರ್ವಪ್ರಾಣಿಗಳಿಗೂ ನೇತ್ರಗೋಚರನಾಗಿ ಶ್ರೀದೇವಿಯೊಂದಿಗೆ ವಾಸಿಸುವೆ ಪ್ರಾಣಿಗಳ ಅಭೀಷ್ಟೆಗಳನ್ನು ಪ್ರಸಾದಿಸುವೆ)

ಹೀಗೆ ತಾನು ಸಕಲ ಚೇತನಾಚೇತನಗಳ ಕಣ್ಣಿಗೆ ಗೋಚರಿಸು ವಂತೆ ಪ್ರಧಾನ ಪಟ್ಟಮಹಿಷಿಯೊಂದಿಗೆ ನಿತ್ಯಸಾನ್ನಿಧ್ಯವನ್ನಿತ್ತು ಸರ್ವಾ ಭೀಷ್ಟಗಳನ್ನು ಕೊಡುವಂತೆ ಸಂಕಲ್ಪಿಸಿ,

ಸಖೀಭಿಸ್ಸಹಿತಾ ಯಾಯಮಂ ಸಮಾಗಚ್ಛತ ತತ್ರವೈ
ವಿಹಾರ ಯೋಗ್ಯೋದೇಶೋ ಯಂ ನಿರ್ದಿಷ್ಟೋ ಮುನಿವಾ ಮಮ
ಇತ್ಯುಕ್ತಾ ಭಗವಾನ್ಶ್ರುತ್ವಾ ಹಾ ಸೇನಾಪತಿ ಮಲಿಂದಮದುಂ
ತ್ವದೀಯಾನಚರೈಸ್ಸಾರ್ಧಂ ಸರ್ವೈ ಪಾರಿಪದೈರ್ಯುತ್ತ
ಹ್ಯಾದ್ಯೈ ಸ್ತ್ರೀದಶೈ ಸ್ಸಾರ್ಧಂ ಯಕ್ಷರ ಕ್ಷೋ ಗಣಾನ್ವಿತ್ತಃ
ಸಿದ್ಧ ವಿದ್ಯಾಧರೈ ಶ್ಚಾಪಿ ಕಿನ್ನರೈಶ್ಚ ಸಹೋರಗೈಃ
ಸರ್ಷಿಸಂ ಘೈರ್ಯುತ ಶ್ಶೀಘ್ರಂ ತ್ವ ಹಿ ಶೇಷಾಚಲ ಪ್ರೀತಿ
ವಸ್ತವ್ಯ ತತ್ರ ಹಿ ಮಯಾ ರಮಾಯಾ ಸಹಿತೇನ ವೈ
ಅನುಗ್ರಹಾಯ ಲೋಕಾನಾಂ ನಿತ್ಯಂ ಚ ಪ್ರಯತಾತ್ಮನಾಂ

(ನೀವು ಸಖರೊಂದಿಗೆ ಆಟಕ್ಕೆ ಬನ್ನಿ. ಈ ದೇಶವು ನನಗೆ ವಿಹಾರ ಯೋಗ್ಯವೆಂದು (ನಾರದ) ಮುನಿ ಮಾರ್ಗದರ್ಶನ ನೀಡಿದ್ದಾರೆ ಎಂದು ಹೇಳಿ, ಶತ್ರು ಸಂಹಾರ ದಕ್ಷನಾದ ಸೇನಾಪತಿಯನ್ನು (ವಿಷ್ವಕ್ಸೇನ) ನೋಡಿ ಭಗವಂತನು ಹೇಗೆಂದನು ನಿನ್ನ ಅನುಚಾರರೊಂದಿಗೆ, ನಿನ್ನ ಸರ್ವ ಪರಿ ವಾರ ಸದಸ್ಯರೊಂದಿಗೆ ಕೂಡಿದವನಾಗಿ ಬ್ರಹ್ಮ ಮೊದಲಾದ ದೇವತೆ ಗಳೊಡನೆ ಯಕ್ಷರಾಕ್ಷಸ ಸಮೂಹದೊಡನೆ ಇದ್ದರು, ವಿದ್ಯಾಧರರು, ಕಿನ್ನ ರರು, ನಾಗದೇವತೆಗಳೊಡನೆ ಋಷಿಸಂಘಗಳೊಂದಿಗೆ ಕೂಡಿದವನಾಗಿ ನೀವು ಶೀಘ್ರವಾಗಿ ಶೇಷಾಚಲಕ್ಕೆ ಹೊರಡುವುದು. ನಿಯಮಶುದ್ಧ ಜನರನ್ನು ಎಲ್ಲಾ ಕಾಲಗಳಲ್ಲಿಯೂ ಅನುಗ್ರಹಿಸುವುದಕ್ಕಾಗಿ ರಮೆಯೊಡನೆ ಕೂಡಿ ನಾನಲ್ಲಿ ವಾಸಿಸುವೆನು)

ಈ ಮಾತಿನೊಂದಿಗೆ ಪ್ರಧಾನಮಹಿಷಿ, ಸಪರಿವಾರರನ್ನು ನಿಮ್ಮ ನಿಮ್ಮ ಪರಿಕರದೊಡನೆ ಬರತಕ್ಕದ್ದು, ಎಂದು ಆಜ್ಞಾಪಿಸಿ,



"ಇತ್ಯುಕ್ತ್ವಾ ಭಗವಾನ್ ಸಾರ್ಧಂ ಶ್ರಿಯಾ ಭೂಮ್ಯಾ ಚ ನಿಲಯಾ
ವಿನುತಾನುಂತ ಮಾರೂಢೋ ಯಯಾ ವಹಿಮಾಹಿಧರಂ"

(ಭಗವಂತನಂ ಹೀಗೆ ನುಡಿದು ಶ್ರೀ ಭೂನೀಲಾದೇವಿಯರೊಡನೆ ವಿನುತಾಸುತನೆಯ (ಗರುಡನನ್ನು) ಆರೋಹಣ ಮಾಡಿ ಶೇಷಾಚಲಕ್ಕೆ ಹೋದನು)

ಇಂತಹ ನುಡಿಗಳೊಂದಿಗೆ ಕ್ಷೀರಾಬ್ಧಿತನಯನಾದ ಶ್ರೀಹರಿ ಸ್ವತಃ ಶೇಷಾದ್ರಿಗೆ ಪ್ರಸ್ತಾಪಿಸಿದ್ದಾನೆ. ಈ ವಿಶೇಷ ವೃತ್ತಾಂತವನ್ನು ಪುರಾಣ ಪ್ರಸಿದ್ಧವಾಗಿರುವುದರಿಂದ ಕ್ಷೀರಾಬ್ಧಿಶಾಯಿಗೆ ವೇಂಕಟಾಚಲಪತಿಗೆ ವಾಸೈಕ್ಯವು ಎಂಬುದು ಪೂರ್ವ ಭಾಷಿಯಾಗಿದೆ ಉತ್ತರಭಾವಿತ್ವಗಳು (ಮೊದಲು ಕಲಿತದ್ದು ನಂತರ ಕಲಿತದ್ದು) ವಿರ್ಪಡಿದಿದ್ದುದನ್ನು ಕಂಡು ಭಗವದ್ರಾಮಾನುಜರು ಶ್ರೀಚಿತ್ರಕೂಟವು (ಚಿದಂಬರ)ದಲ್ಲಿ ಕ್ರಿಮಿಕಂಠ ಚೋಳವ್ಯಾಜದಲ್ಲಿನ ಮೂಲನೆಲೆಯನ್ನು ನೀಲ ಸಮುದ್ರದಲ್ಲಿ) ಪ್ರವೇಶಿಸುವುದರ ಮೂಲಕ ಆ ಮೂಲವಿಗ್ರಹವಾದ ನೀಲ ಮಹಾ ಸಮುದ್ರದಲ್ಲಿರುವವರಿಗೂ ಸಹಾ ಆಹ್ವಾನಿಸಿಕೊಂಡು ಉತ್ಸವ ಮೂರ್ತಿಯಾಗಿ ಆವಿರ್ಭವಿಸಿ ದೇವಾಧಿದೇವನಿಗೆ ಮೂಲವಿಗ್ರಹವಾಗಿ ಕ್ಷೀರಾಬ್ಧಿಶಾಯಿ ತಿರುಮಲ ಪ್ರಾಂಗಣದಲ್ಲಿ ಶ್ರೀಪ್ರತಿಷ್ಠೆ ಮಾಡುವುದರ ಮೂಲಕ ಅಲ್ಲಿದ್ದಾಗಲೇ ಹರಿವಂಶದಲ್ಲಿನ ಪುಷ್ಕರೋಖ್ಯಾನದಲ್ಲಿ 167ನೇ ಪ್ರಕರಣದ ನಂತರ -

ತತಶ್ಶಯಾನಂ ಶ್ರೀಮಂತಂ ಬಹುಯೋಜನೆ ವಿಸ್ತೃತೇ
ಪದ್ಮನಾಭಂ ಪ್ರಣಿಪತ್ಯೋಚತುಃ ಸ್ತುತಿಮ್

ಜಾನಿವಸ್ತ್ವಾಂ ವಿಶ್ವಯೋನಿ ಮೇಕಂ ಪುರುಷಸತ್ತಮಂ
ತಪಃ ಪಾಲನ ಹೇತ್ವರ್ಥಂ ಆಗತೌ ವಿದ್ಧಿ ನೌ ಸದಾ॥

(ಅದಾದ ನಂತರ ಬಹುಯೋಜನೆ ವಿಸ್ತೃತವಾದ... ಶಯನನಾಗಿದ್ದ ಪದ್ಮನಾಭನಿಗೆ, ವಿಶ್ವೇಶನಿಗೆ ಪ್ರಣಮಿಸಿ ನಮಸ್ಕರಿಸಿದರು. ನಿನ್ನನ್ನು ಜಗತ್ಕಾರಣನೆಂದು, ಅದ್ವಿತೀಯನೆಂದೂ, ಪುರುಷೋತ್ತಮನೆಂದೂ ನೆನೆಯುವುದು. ನಾವಿಬ್ಬರು ದೀನ ಪಾಲನೆಗಾಗಿ ಬಂದಿರುವುದೆಂದು ತಿಳಿವುದು) ವೈಖಾನಸ ಸಂಗ್ರಹದಲ್ಲಿ -

ಪಾದಪಾರ್ಶ್ವೇ ತಥಾ ಭಿತ್ತೌ ಕಾರಯೇನ್ಮಧುಕೈಟಭೌ
ಜಾನುಮಾತ್ರ ಸಮುದ್ರಸ್ಥ ಉಗ್ರವೇಷ ಸಮನ್ವಿತಾ
ದಹ್ಯಮಾನಾ ವಸಂತಸ್ಯ ವಿಷಜ್ವಾಲಾಭಿರೇವತೌ॥

ಪಾದಕ್ಕೆ ಪಕ್ಕದಲ್ಲಿ ಗೋಡೆಯ ಮೇಲೆ ಕಲ್ಲು ಬಂಡೆಯಂತೆ ಸಮುದ್ರದಲ್ಲಿರುವ ಅವನನ್ನು ಉಗ್ರವೇಶಧಾರಿಯಾದವನನ್ನು ಶೇಷನ ವಿಷಪೂರಿತ ಎಂಬ ಪ್ರಮಾಣನುಡಿಯ ಮೂಲಕ ಮಧುಕೈಟಭರು ಅಲ್ಲಿದ್ದು ನಮಸ್ಕರಿಸುತ್ತಲೇ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಿರುವ ಕಾಶಿರಾಜನು ಸಂತಾನರಹಿತನಾಗಿದ್ದು ಸಂತಾನಾಕ್ಷಿಯೊಂದಿಗೆ ಸಕುಟುಂಬ ಸಮೇತನಾಗಿ ವೇಂಕಟಾಚಲದ ಶ್ರೀನಿವಾಸ ಭಗವಂತನ ಸೇವೆ ಮಾಡುತ್ತಿರಲು ಆ ದಿನ ಫೊಂದರಲ್ಲಿ ಆತನ ಪಟ್ಟದರಸಿಯ ಕನಸ್ಸಿನಲ್ಲಿ ಸಾಕ್ಷಾತ್ಕಾರನಾದ ಶ್ರೀವೇಂಕಟಾಚಲಪತಿ "ನಾನು ನಿನಗೆ ಸಂತಾನವೀಯುತ್ತೇನೆ. ನನಗೆ ನೀನು ನಿನ್ನ ಮೂಗುತಿಯನ್ನು ಕೊಡಬೇಕು ಎನ್ನಲು, ಆಗ ಆ ರಾಜಮಹಿಷಿಯು ಸತಿಯು ಪರಾಧೀನಳಾದುದರಿಂದ ಪತಿಯ ಅನುಮತಿ ಬೇಕು. ಎನ್ನಲು, ವೇಂಕಟೇಶ್ವರನು. "ನಿನಗೆ ಆ ಅಭಿಪ್ರಾಯ ಬಂದಿದೆಯೆಂದಾದರೆ ನನಗೂ ನನ್ನ ತಂದೆಯಾದ ಶ್ರೀಗೋವಿಂದರಾಜು ಸ್ವಾಮಿಯ ಅನುಮತಿ ಬೇಕು." ಎಂದು ಮಾರುತ್ತರ ನೀಡಿದನು.


(ಮುಂದುವರೆಯುತ್ತದೆ)

ಮುಂಬರುವ ಪ್ರಶ್ನೆಗಳು

01. ಮಾಘಸ್ನಾನ
02. ವಿಶ್ವಕರ್ಮ
03. ಮೀನರಾಶಿ
04. ಶ್ರೀರಾಮ
05. ಆರ್ಕಾಟ್
06. ಹರಿ
07. ಯುಗಾದಿ
08. ಶ್ರಮನ
09. 32,000
10. ತ್ರಿವೇಣಿಸಂಗಮ
11. ದೈವಪ್ರಾಪ್ತಿ
12. 8 ಮಂದಿ
13. ಅಷ್ಟಾಕ್ಷರಿ ಮಂತ್ರ
14. ದೇವೇಂದ್ರ
15. ಸನ್ಯಾಸಿ

ಅವರ ಪ್ರಶ್ನೆಗೆ ಮುಗುಳ್ನಗುತ್ತಾ...

ಮುನಿಗಳೇ ! ಹರಿಯು ಶ್ರೀವರಾಹ ಸ್ವಾಮಿಯ ಪುಷ್ಕರಕವಿ ದಕ್ಷಿಣ ಭಾಗದಲ್ಲಿರುವ ಹುಣಸೆ ಮರದ ಬಡದಲ್ಲಿರುವ ಹುತ್ತದಲ್ಲಿ ಅಡಗಿಕೊಂಡಿದ್ದಾನೆ. ಯಾರಿಗೂ ಕಾಣದಂತೆ ವಲ್ಮೀಕದಲ್ಲಿಯೇ ಕಲಿಯುಗದವರೆಗೆ ಇದ್ದನು. ಸ್ವಾಮಿಯು ಭೂನಿವಾಸಿಯಾದ್ದರಿಂದ ಚೋಳ ರಾಜ್ಯವು ಸಮೃದ್ಧವಾಯಿತು. ಸಕಾಲದಲ್ಲಿ ಮಳೆಯಾಗುತ್ತಿತ್ತು. ಬೆಳೆಗಳು ಚೆನ್ನಾಗಿ ಇಳುವರಿ ಬಂದವು. ಹಸುಗಳು ಸಮೃದ್ಧವಾಗಿ ಹಾಲೂ ನೀಡುತ್ತಿದ್ದವು. ಪತಿವ್ರತೆಯರಾದ ಸ್ತ್ರೀಯರು ಮತ್ತು ಸತಿವ್ರತರಾದ ಪುರುಷರು ಸಂತೋಷದಿಂದ ಬದುಕಿದರು ಮತ್ತು ಮಾತಾ,ಪಿತೃ ಭಕ್ತಿಯುಳ್ಳ ಪುತ್ರರು ಜನಿಸಿದರು. ತನ್ನ ಪತಿ ಹರಿಯು ವೈಕುಂಠವನ್ನು ತೊರೆದು ಭೂಮಿಯ ಮೇಲಿನ ವೆಂಕಟಾದ್ರಿಯಲ್ಲಿರುವ ಮರದ ಬಳಿಯ ಹುತ್ತದಲ್ಲಿ ಅಡಗಿಕೊಂಡಿದ್ದಾನೆಂದು ತಿಳಿದಾಗ ಕೊಲ್ಹಾಪುರಲಕ್ಷ್ಮಿ ಕೋಪಗೊಂಡಳು.



ಸ್ವಾಮಿ ನನಗಾಗಿ ವೈಕುಂಠವನ್ನು ತೊರೆದನು. ಹುತ್ತದಲ್ಲಿ ಅಡಗಿಕೊಂಡನು. ಏಕಾಂಗಿಯಾದನು ಹಸಿವೆಯಿಂದ ಬಳಲುತ್ತಿದ್ದಾನೆ. ಇಂತಹ ಸಮಯದಲ್ಲಿ ನಾನು ಹೋದರೆ, ಸ್ವಾಮಿ ಖಂಡಿತವಾಗಿಯೂ ತನ್ನವನಾಗಿಸಿಕೊಳ್ಳುತ್ತಾನೆ ಎಂದು ಚಿಂತಿಸುತ್ತಿದ್ದಂತೆ ಕೋಪಗೊಂಡು ನನ್ನ ಶಪಥ ನನ್ನ ಶಪಥವೇ ಎಂದು ಭೀಷ್ಮ ಪ್ರತಿಜ್ಞೆ ಮಾಡಿದಳು.

ಮತ್ತೇ ಕೊಲ್ಹಾಪುರವನ್ನು ತೊರೆದು, ಚೋಳ ರಾಜನ ಪತ್ನಿ ಆಶ್ರಮದಲ್ಲಿ ಗೊಲ್ಲ ಮಹಿಳೆಯಾಗಿ ಇದ್ದು ಹರಿಯನ್ನು ಹೇಗೆ ಸೇವಿಸಬೇಕೆಂದು ಯೋಚಿಸುತ್ತಿರುವಾಗ, ಬ್ರಹ್ಮನು ಲಕ್ಷ್ಮೀ ದೇವಿಯ ಮನಸ್ಸನ್ನು ಅರಿತುಕೊಂಡನು. ತಕ್ಷಣವೇ, ಅವನು ಹಸುವಿನ ರೂಪವನ್ನು ಧರಿಸಿದನು.


ರುದ್ರನು ಕರುವಾದನು. ಅವರು ಲಕ್ಷ್ಮೀದೇವಿಯ ಮುಂದೆ ನಿಂತರು. ಬ್ರಹ್ಮ ಸಾಮಾನ್ಯ ಹಸುವಾಗಿ ಮತ್ತು ರುದ್ರನು ಭೂಮಿಯ ಮೇಲಿನ ಕುರುವಾಗಿ, ಲಕ್ಷ್ಮೀಯ ಮನಸ್ಸನ್ನು ಅರ್ಥೈಸಿ, ಹಸುಗಳನ್ನು ಕಾಯುತ್ತಾ ಚೋಳಪ್ಪನ ಅಂತಃಪುರದ ಬೀದಿಗಳಲ್ಲಿ "ಹಸುಗಳನ್ನು ಮಾರಾಟ ಮಾಡುತ್ತೇನೆ! ಖರೀದಿದಾರರೇ, ಅವುಗಳನ್ನು ಖರೀದಿಸಿ ಎಂದು ಕೂಗುತ್ತಿದ್ದನು. ಚೋಳ ರಾಜನ ಹೆಂಡತಿ ಸಂತೋಷಗೊಂಡು ಹಸುಗಳನ್ನು ಖರೀದಿಸಿ, ಕೊಟ್ಟಿಗೆಯಲ್ಲಿರುವ ಎರಡು ಸಾವಿರ ಹಸುಗಳೊಂದಿಗೆ ಈ ಹಸುಗಳನ್ನು ನೋಡಿಕೊಳ್ಳಲು ಗೋಪಾಲಕನಿಗೆ ಆದೇಶಿಸಿದಳು.

ಬ್ರಹ್ಮ ಮತ್ತು ರುದ್ರರು ಹಸು ಕರುಗಳಾಗಿರುವುದರಿಂದ ಹುತ್ತದಲ್ಲಿ ಅಡಗಿರುವ ಹರಿಯನ್ನು ಪೋಷಿಸುತ್ತಾರೆಂದುಕೊಂಡು ಲಕ್ಷ್ಮಿ

ಶ್ರೀ ವೆಂಕಟಾಚಲ ಮಹಾತ್ಮ್ಯ

ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ – ಶ್ರೀಮತಿ. ಎಸ್. ಪಾರ್ವತಿ





ಇನ್ನೇನು ಚಿಂತೆಯಿಲ್ಲ ಎಂದು ಭಾವಿಸಿ ಕರವೀರಪುರಕ್ಕೆ ಹಿಂತಿರುಗಿದಳು.

ನಂತರ ಬ್ರಹ್ಮ ಸ್ವರೂಪವಾದ ಹಸು, ಇತರ ಹಸುಗಳೊಂದಿಗೆ ಮೈಯುತ್ತಾ ವೆಂಕಟಗಿರಿಯನ್ನು ಹತ್ತಿ ದಿಬ್ಬದ ಮೇಲೆ ನಿಂತು, ಅಲ್ಲಿ ಹಾಲು ಸ್ರವಿಸಲು ಪ್ರಾರಂಭಿಸಿತು. ಹುತ್ತದಲ್ಲಿದ್ದ ಸ್ವಾಮಿಯು ಮೇಲಿನಿಂದ ಸುರಿಯುತ್ತಿದ್ದ ಹಾಲನ್ನು ಕುಡಿಯುತ್ತಾ ಅಜರುದ್ರನ ಉಪಾಯಕ್ಕೆ ಸಂತೋಷಿಸಿದನು.

ಅಷ್ಟರಲ್ಲಿ ರಾಣಿ, ತಾನು ಖರೀದಿಸಿದ ಹಸುಗಳ ಹಾಲನ್ನು ತನ್ನ ಮಗುವಿಗೆ ಕೊಡಲು ಬಯಸಿದಳು. ರಾಣಿಯ ಕೋರಿಕೆಯಂತೆ, ಗೋಪಾಲಕನು ಹಸುಗಳನ್ನು ಅಂತಃಪುರಕ್ಕೆ ಕರೆತಂದನು ರಾಣಿ, ಹಸುವನ್ನು ನೇವರಿಸುತ್ತಾ ವಿಶ್ವಾಸ ತುಂಬುತ್ತಾ, ಹಾಲು ಕರೆಯಲು ಪ್ರಯತ್ನಿಸಿದಳು,ಆದರೆ ಹಾಲು ಬರಲಿಲ್ಲ. ತನ್ನಲ್ಲೆ ಯೋಚಿಸಿದಳು.

ನಾನು ಹಸುವಿನ ಕೆಚ್ಚಲನ್ನು ನೋಡಿದಾಗ, ಅದು ತುಂಬಿದ ಮಡಕೆಯಂತೆ ಕಾಣುತ್ತದೆ. ಆದರೆ ಹಾಲು ಏಕೆ ಬರುತ್ತಿಲ್ಲ? ಅವಳು ಆಶ್ಚರ್ಯಪಟ್ಟಳು. ಕೆಲವು ದಿನಗಳು ಪ್ರಯತ್ನಿಸಿದ ನಂತರವೂ ಹಾಲು ಬರಲಿಲ್ಲ.

ಅವಳು ತಕ್ಷಣ ದನಗಾಹಿಯನ್ನು ಕರೆದು, ಗೋಪಾಲ ಕೆಚ್ಚಲು ಮಡಕೆಯಂತಿರುವ ಹಾಲು ಏಕೆ ಬರುತ್ತಿಲ್ಲ? ಕಾಡಿನಲ್ಲಿ ಹಸಿವಿನಿಂದ ಹಾಲು ಹಿಂಡಿ ಕುಡಿದಿದ್ದೀರಾ? ಎಂದು ಕೇಳಿದಳು. ಅರ್ಜುನ,"ಅಮ್ಮಾ! ನಾನು ನಿನ್ನ ಮೇಲೆ ಪ್ರಮಾಣ ಮಾಡುತ್ತೇನೆ, ನಾನು ಅದನ್ನು ಕುಡಿಯಲಿಲ್ಲ. ಬಹುಶ ಕರು ಅದನ್ನು ಕುಡಿದಿರಬಹುದು.ನಮ್ಮ ಮನೆಯಲ್ಲಿರುವ ಕರು ಕುಡಿದಿದೆಯೇ ! ಸುಳ್ಳು ಹೇಳಬೇಡ" ಎಂದು ಗದರಿದಳು. ಕೊನೆಗೆ, ರಾಣಿ ಗೊಲ್ಲನನ್ನು ಕಟ್ಟಿ ಹಾಕಿ ಹೊಡೆದು, ನಂತರ ಕಳುಹಿಸಿದಳು.

ಆ ದನಗಾಹಿಯ ಹಾದಿಯಲ್ಲಿ ಅಳುತ್ತಾ ರಾಣಿ ತನಗೆ ವಹಿಸಿಕೊಟ್ಟ ಹಸುವಿನ ಹಿಂದೆ ದಿನವೂ ಹೋಗುತ್ತಿದ್ದ ಹಾದಿಯಲ್ಲಿ ಹೋದನು. ಹಸು ಹತ್ತಿರದ ಹುತ್ತಕ್ಕೆ ಹೋಗಿ, ಕೆಳಗೆ ಇಳಿದು ಹಾಲು ಸುರಿಸಲಾರಂಭಿಸಿತು. ಇದನ್ನೆಲ್ಲಾ ನೋಡಿದ ದನಗಾಹಿ ಕೋಪದಿಂದ ಕೈಯಲ್ಲಿ ದೊಡ್ಡ ಕೊಡಲಿಯನ್ನು ತೆಗೆದುಕೊಂಡು ಹಸುವಿನ ತಲೆಯ ಮೇಲೆ ಹೊಡೆಯಲು ಹೊರಟನು. ಆ ಸಮಯದಲ್ಲಿ ಹುತ್ತದಲ್ಲಿದ್ದು ವಿಷ್ಣುವು "ಆಹಾ ಪ್ರತಿದಿನ ನನ್ನ ಬಳಿಗೆ ಬಂದು ತಾಯಿಯಂತೆ ನನ್ನನ್ನು ಪೋಷಿಸುವ ಹಸುವು ಗೊಲ್ಲನಿಂದ ಕೊಲ್ಲಲ್ಪಡುವುದೇ" ಎಂದು ಹೇಳಿದನು.

ಹುತ್ತದಿಂದ ಸ್ವತಃ ಮೇಲಕ್ಕೆ ಬಂದು ಕೊಡಲಿಯ ಪೆಟ್ಟು ಗೋವಿಗೆ ತಗಲದಂತೆ ತಡೆದನು. ಆದರೆ ಗೊಲ್ಲನ ಕೊಡಲಿಯ ಪೆಟ್ಟು ಹರಿಯ ನೆತ್ತಿಯ ಮೇಲೆ ಬಿದ್ದಿತು. ಹರಿಯ ಹಣೆಯಿಂದ ಏಳು ತಾಳೆ ಮರಗಳಷ್ಟು ಎತ್ತರಕ್ಕೆ ರಕ್ತ ಚಿಮ್ಮಲು ಪ್ರಾರಂಭಿಸಿತು. ಈ ದೃಶ್ಯವನ್ನು ನೋಡಿದ ಗೊಲ್ಲನು ಆಘಾತಕ್ಕೊಳಪಟ್ಟನು ಮತ್ತು ಅಲ್ಲಿಯೇ ಕೆಳಗೆ ಬಿದ್ದು ಸತ್ತನು.

ಈ ದೃಶ್ಯವನ್ನು ನೋಡಿದ ಹಸುವು ಬೆಟ್ಟವನ್ನು ಇಳಿದು ಚೋಳಭೂಪತಿ ಸಭೆಯನ್ನು ಪ್ರವೇಶಿಸಿತು. ಅಲ್ಲಿ ನೆಲದ ಮೇಲೆ ಬಿದ್ದು ಹೊರಳಾಡುತ್ತಾ ಅಳುತ್ತಿತ್ತು. ರಾಜನು ಹಸುವನ್ನು ನೋಡಿ, ಏನಾಗಿದೆ ಎಂದು ತಿಳಿಯಲು ಹಸುವನ್ನು ಹಿಂಬಾಲಿಸುವಂತೆ ಸೇವಕರಿಗೆ ಹೇಳಿದನು.

(ಮುಂದುವರೆಯುತ್ತದೆ)



ಮೇ 2026
ತಿಂಗಳ
ರಾಶಿ ಫಲಗಳು



ಶ್ರೀಮಾತಾ ಅನುಗ್ರಹ



ಮೇಷ

ಈ ಮಾಸ ಹಣಕಾಸಿಗೆ ಕೊರತೆ ಇರುವುದಿಲ್ಲ. ಆರೋಗ್ಯದಲ್ಲೂ ಸಮಸ್ಥಿತಿ. ಸಂಸಾರದಲ್ಲಿ ಸುಖವಿರುವುದು. ಮಕ್ಕಳು ಸಂತೋಷ ಕೊಡುವರು. ಸರಕಾರದಿಂದ ಲಾಭವಿರುವುದು. ವಿದ್ಯಾಭ್ಯಾಸದಲ್ಲಿ ಪ್ರಗತಿ ಕಾಣುವಿರಿ. ವಿದೇಶ ಪ್ರಯಾಣ ಯೋಗವಿರುವುದು. ಸುಬ್ರಹ್ಮಣ್ಯ ಸ್ವಾಮಿಗೆ ಪ್ರತಿ ಮಂಗಳವಾರ ಹಾಲಭಿಷೇಕ ಮಾಡಿಸುತ್ತಾ ಬನ್ನಿ ಶುಭವಾಗುವುದು.



ವೃಷಭ

ಆರೋಗ್ಯದಲ್ಲಿ ಸುಧಾರಣೆ ಕಂಡು ಬರುವುದು. ಅವಿವಾಹಿತರಿಗೆ ವಿವಾಹ ಯೋಗ ಕೂಡಿ ಬರುವುದು. ಸಂತಾನಾಪೇಕ್ಷಿಗಳಿಗೆ ಸಂತಾನ ಭಾಗ್ಯ ಲಭಿಸುವುದು. ವಿದ್ಯೆಯಲ್ಲಿ ಪ್ರಗತಿ ಹೊಂದುವಿರಿ. ಭೋಗ ಭಾಗ್ಯಗಳು ಲಭಿಸುವುದು. ವ್ಯಾಪಾರದಲ್ಲಿ ಅಭಿವೃದ್ಧಿ ಉಂಟಾಗುವುದು. ರಿಯಲ್ ಎಸ್ಟೇಟ್ ವ್ಯಾಪಾರಿಗಳಿಗೆ ಲಾಭದಾಯಕ. ಕುಟುಂಬದಲ್ಲಿ ಸೌಖ್ಯವಿರುವುದು.



ಮಿಥುನ

ಆದಾಯಕ್ಕೆ ಅನೇಕ ದಾರಿಗಳಿರುತ್ತವೆ. ಚಿಂತೆ ದೂರವಾಗುವುದು. ಶತ್ರುಗಳ ಮೇಲೆ ಜಯ ಸಾಧಿಸುವಿರಿ. ಸ್ನೇಹಿತರಿಂದ ಸಹಾಯ ಸಿಗುತ್ತದೆ. ಕೈ ಹಾಕಿದ ಕೆಲಸ ಕಾರ್ಯಗಳು ನೆರವೇರುತ್ತದೆ. ವಿದ್ಯಾರ್ಥಿಗಳಿಗೆ ಶುಭದಾಯಕ. ಆರೋಗ್ಯ ಚೆನ್ನಾಗಿರುತ್ತದೆ.



ಕರ್ಕಾಟಕ

ವ್ಯಾಪಾರದಲ್ಲಿ ಅಭಿವೃದ್ಧಿ ಇರುವುದು. ಆರೋಗ್ಯ ಉತ್ತಮವಾಗಿರುವುದು. ಧನಾಗಮನ ಚೆನ್ನಾಗಿರುವುದು. ಉನ್ನತಾಧಿಕಾರಿಗಳಿಂದ ಲಾಭ. ಉದ್ಯೋಗದಲ್ಲಿ ಬಡ್ತಿ ದೊರೆಯುವುದು. ಎಂತಹ ಕ್ಲಿಷ್ಟ ಕಾರ್ಯಗಳನ್ನಾದರೂ ಯಶಸ್ವಿಯಾಗಿ ಪೂರೈಸುವಿರಿ. ವಿದ್ಯಾರ್ಥಿಗಳಿಗೆ ಉತ್ತಮ ಫಲತಾಂಶ ದೊರೆಯುವುದು.




ಸಿಂಹ

ಕೈ ಹಾಕಿದ ಕೆಲಸ ಕಾರ್ಯಗಳು ನೆರವೇರುವುದು ಕಷ್ಟ. ಅವಮಾನವಾಗುವ ಭಯವಿರುವುದು. ಸರ್ಕಾರಕ್ಕೆ ದಂಡ ಕಟ್ಟಬೇಕಾಗಿರುವುದು. ಕೆಟ್ಟವರ ಸಹವಾಸದಿಂದ ತೊಂದರೆ ಗೊಳಗಾಗುವಿರಿ. ವೃಥಾ ಖರ್ಚಾಗುವುದು. ನವಗ್ರಹ ಶಾಂತಿ ಮಂತ್ರವನ್ನು ಪ್ರತಿನಿತ್ಯ ತಪ್ಪದೇ ಪಠಿಸುವುದು ಒಳ್ಳೆಯದು.




ಕನ್ಯೆ

ನೂತನ ವಸ್ತ್ರಾಭರಣಗಳನ್ನು ಹೊಂದುವಿರಿ. ಆರೋಗ್ಯ ಚೆನ್ನಾಗಿರುತ್ತದೆ. ಸರ್ಕಾರದ ಕೃಪೆಗೆ ಪಾತ್ರರಾಗುವಿರಿ. ಮನೆಯಲ್ಲಿ ಶುಭ ಕಾರ್ಯಗಳು ನೆರವೇರುವುದು. ವಿದ್ಯಾಭ್ಯಾಸದಲ್ಲಿ ಅನುಕೂಲವಾಗುವುದು. ಮಕ್ಕಳಿಂದ ಸಂತೋಷ ಉಂಟಾಗುತ್ತದೆ. ಸಾಮಾಜಿಕವಾಗಿ ಆರ್ಥಿಕವಾಗಿ ಅಭಿವೃದ್ಧಿಯಾಗುತ್ತದೆ. ತೀರ್ಥಯಾತ್ರೆಗೆ ಹೋಗುವಿರಿ.




ತುಲಾ

ಶತ್ರುಗಳನ್ನು ಸದೆ ಬಡಿಯುವಿರಿ. ಆರೋಗ್ಯದಲ್ಲಿ ಅಭಿವೃದ್ಧಿಯಾಗುತ್ತದೆ. ಸಂಪತ್ ಸಮೃದ್ಧಿ ಉಂಟಾಗುತ್ತದೆ. ಸಾಲ ತೀರುವುದು. ನ್ಯಾಯಾಲಯದಲ್ಲಿ ಗೆಲ್ಲುವಿರಿ. ಕೈ ಹಾಕಿದ ಕೆಲಸ ಕಾರ್ಯಗಳು ಈಡೇರುತ್ತದೆ. ಸರ್ಕಾರದಿಂದ ಸಹಾಯ ಸಿಗುವುದು. ಭೂಮಿಯಿಂದ ಲಾಭವಿರುವುದು.




ವೃಶ್ಚಿಕ

ಕೈಕೊಂಡ ಕೆಲಸ ಕಾರ್ಯಗಳು ನೆರವೇರುತ್ತದೆ. ಮನೆಗೆ ಹೊಸ ಆರೋಗ್ಯ ಸುಧಾರಿಸುವುದು. ಮೇಲಧಿಕಾರಿಗಳಿಂದ ಅನುಕೂಲವಾಗುವುದು. ಉದ್ಯೋಗದಲ್ಲಿ ಬಡ್ತಿ ದೊರೆಯುವುದು. ದೂರ ಪ್ರಯಾಣದಿಂದ ಲಾಭವಿರುವುದು. ಬರವಣಿಗೆಯಿಂದ ಸಂಗೀತದಿಂದ ಹೆಸರು ಮಾಡುವಿರಿ. ವಿದ್ಯಾರ್ಥಿಗಳಿಗೆ ಶುಭ ಸಮಯ.




ಧನಸ್ಸು

ಹಣಕಾಸಿನ ಅಭಾವ ಕಂಡು ಬರುವುದು. ಆಸ್ತಿಯಲ್ಲಿ ಕಲಹ ಉಂಟಾಗುವುದು. ಜ್ವರ, ರಕ್ತ ಸಂಬಂಧಿ ದೋಷಗಳು ಸಮಾಜದಲ್ಲಿ ಗೌರವ ಕಡಿಮೆಯಾಗುವುದು. ತಾಯಿಗೆ ತೊಂದರೆ ಮನೆಯಲ್ಲಿ ಕಳ್ಳತನವಾಗುವ ಸಂಭವವಿರುವುದು. ಅಪಘಾತವಾಗುವ ಸಂಭವವಿರುವುದು. ಕುಜ ಶಾಂತಿ ಮಾಡಿಕೊಳ್ಳುವುದು ಉತ್ತಮ.




ಮಕರ

ವಿರೋಧಿಗಳು ದೂರ ಸರಿಯುವರು. ಲೋಹ ಪದಾರ್ಥಗಳ ವ್ಯಾಪಾರ ಚೆನ್ನಾಗಿ ಆಗುವುದು. ಸರಕಾರದಿಂದ ಸಹಾಯ ಸಿಗುತ್ತದೆ. ವಾದ ವಿವಾದಗಳಲ್ಲಿ ಗೆಲ್ಲುವಿರಿ. ರಿಯಲ್ ಎಸ್ಟೇಟ್ ನಿಂದ ಲಾಭ ಪಡೆಯುವಿರಿ. ಸಹೋದ್ಯೋಗಿಗಳಿಂದ ಅನುಕೂಲ. ವಿದ್ಯಾರ್ಥಿಗಳಿಗೆ ಶುಭ ಸಮಯ.




ಕುಂಭ

ಆಕಸ್ಮಿಕ ಧನಾಗಮನ ಆಗುತ್ತದೆ. ಶತ್ರುಗಳನ್ನು ಜಯಿಸುವಿರಿ. ಹಳೆಯ ರೋಗ ವಾಸಿಯಾಗುವುದು. ಸಾಲದಿಂದ ಮುಕ್ತರಾಗುವಿರಿ. ಹೋರಾಟದಲ್ಲಿ ಜಯ. ಸರ್ಕಾರದಿಂದ ಅನುಕೂಲ. ಮಕ್ಕಳಿಂದ ಶುಭ ಸಮಾಚಾರ ದೊರೆಯುವುದು. ಸಂತೋಷ ಭರಿತ ಜೀವನವನ್ನು ನಡೆಸುವಿರಿ.



ಮೀನ

ಹೊಸ ಗೆಳೆಯರು ಸಿಗುವರು. ಧೈರ್ಯದಿಂದ ಮುನ್ನುಗ್ಗಿ ಕೆಲಸ ಮಾಡುವಿರಿ. ಹಣಕಾಸಿನ ಸ್ಥಿತಿಗತಿ ಉತ್ತಮವಾಗಿರುವುದು. ಸಂತೋಷ ಜೀವನ ನಡೆಸುವಿರಿ. ಸರ್ಕಾರದಿಂದ ಅನುಕೂಲ. ಹೊಸ ವಾಹನವನ್ನು ಕೊಳ್ಳುವ ಯೋಜನೆ ಮಾಡುವಿರಿ. ಸೋಮಾಲಿತನ ಹಾಗೂ ಹಠಮಾಲಿತನ ಬಿಟ್ಟರೆ ಜೀವನ ಸುಖದಾಯಕ.




ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ॥ ಅನಸೂಯ ಎಸ್. ರಾಜೀವ್

1. ಕೃಷ್ಣನ ಪತ್ನಿಯರು ಯಾರು?

ಉತ್ತರ: ಕೃಷ್ಣನಿಗೆ ಎಂಟು ಮಂದಿ ಮಹಿಷಿಯರು. ಅವರ ಪರಿಚಯ ಈ ಕೆಳಗಿನಂತಿದೆ. 1. ರುಕ್ಮಿಣಿಯು ಶ್ರೀ ಕೃಷ್ಣನ ಮೊದಲ ಹೆಂಡತಿ ಹಾಗೂ ಲಕ್ಷ್ಮಿದೇವಿಯ ಅವತಾರ ಈಕೆ. ರುಕ್ಮಿಣಿ ವಿದರ್ಭ ರಾಜ್ಯದ ರಾಜ, ಭೀಷ್ಮಕನ ಮಗಳು. ಶ್ರೀ ಕೃಷ್ಣ ಹಾಗೂ ರುಕ್ಮಿಣಿಯು ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು. ಆದರೆ ರುಕ್ಮಿಣಿಯ ಸಹೋದರ ಅವರಿಬ್ಬರ ಪ್ರೀತಿಯನ್ನು ವಿರೋಧಿಸುತ್ತಾನೆ. ಆಗ ಕೃಷ್ಣ ರುಕ್ಮಿಣಿಯನ್ನು ಅಪಹರಿಸಿ ಮದುವೆಯಾಗುತ್ತಾನೆ. 2. ಸತ್ಯಭಾಮೆ 3. ಜಾಂಬವತಿ :- ಸತ್ಯಭಾಮೆ ಭೂಮಿಯ ಅವತಾರ. ಈಕೆ ಸತ್ರಾಜಿತನ ಮಗಳಾಗಿದ್ದಳು. ಸತ್ಯಭಾಮೆಯ ತಂದೆ ಸತ್ರಾಜಿತನ ಬಳಿ ಶ್ಯಮಂತಕ ಎನ್ನುವ ದೈವಿಕ ಗುಣವುಳ್ಳ ಮಣಿಯು ಇದ್ದಿತ್ತು. ಒಮ್ಮೆ ಕೃಷ್ಣನು ಈ ದೈವಿಕ ಆಭರಣವನ್ನು ತನಗೆ ಕೊಡುವಂತೆ ಕೇಳಿರುತ್ತಾನೆ. ಆದರೆ ಸತ್ರಾಜಿತ ಕೊಡಲು ನಿರಾಕರಿಸುತ್ತಾನೆ. ಒಮ್ಮೆ ಸತ್ರಾಜಿತನ ಸಹೋದರ ಪ್ರಸೇನ ಆ ಆಭರಣವನ್ನು ಧರಿಸಿಕೊಂಡು ಕಾಡಿಗೆ ಬೇಟೆಗೆಂದು ಹೋಗುತ್ತಾನೆ. ಅಲ್ಲಿ ಪ್ರಸೇನನು ಸಿಂಹದಿಂದ ಸಾವನ್ನಪ್ಪುತ್ತಾನೆ. ಆ ಸಿಂಹ ಮಣಿಯನ್ನು ಬಾಯಿಯಲ್ಲಿ ಕಚ್ಚಿಕೊಂಡು ಹೋಗುತ್ತಿರುವಾಗ ಆ ಸಿಂಹಕ್ಕೂ ಜಾಂಬವಂತನಿಗೂ ಯುದ್ಧವಾಗಿ, ಸಿಂಹ ಸತ್ತು ಆ ಮಣಿ ಜಾಂಬವಂತನ ಕೈ ಸೇರುತ್ತದೆ. ಅವನು ಅದನ್ನು ತನ್ನ ಮಗಳಿಗೆ ಆಟವಾಡಲು ನೀಡುತ್ತಾನೆ. ಇತ್ತ ಸತ್ರಾಜಿತನು ತನ್ನ ಸಹೋದರನ ಸಾವು ಮತ್ತು ಶ್ಯಮಂತಕ ಎನ್ನುವ ಮಣಿ ಕಳೆದು ಹೋಗಿರುವುದರ ಹಿಂದೆ ಶ್ರೀಕೃಷ್ಣನ ಕೈವಾಡವಿದೆಯೆಂದು ಅನುಮಾನಿಸುತ್ತಾನೆ. ಆಗ ಶ್ರೀಕೃಷ್ಣನು ತನ್ನ ಮೇಲೆ ಬಂದಿರುವ ಅಪವಾದವನ್ನು ಕಳೆಯಲು ತಾನೇ ಮಣಿ ಮತ್ತು ಸತ್ರಾಜಿತನ ಸಹೋದರನನ್ನು ಹುಡುಕಿಕೊಂಡು ಹೋಗುತ್ತಾನೆ. ಆಗ ಶ್ರೀಕೃಷ್ಣನಿಗೆ ಜಾಂಬವಂತನ ಬಳಿ ಆಭರಣ ಇದೆಯೆಂದು ತಿಳಿಯುತ್ತದೆ. ಆದರೆ ಆಭರಣವನ್ನು ಜಾಂಬವಂತ ಹಿಂದಿರುಗಿಸಲು ಒಪ್ಪುವುದಿಲ್ಲ. ಆಗ ಕೃಷ್ಣನಿಗೂ ಜಾಂಬವಂತನಿಗೂ ಯುದ್ಧ ನಡೆಯುತ್ತದೆ. ಯುದ್ಧದಲ್ಲಿ ಜಾಂಬವಂತ ಸೋಲನ್ನು ಅನುಭವಿಸುತ್ತಾನೆ. ಕೊನೆಗೆ ಅವನಿಗೆ ಕೃಷ್ಣನು ರಾಮನ ಅವತಾರವೆಂದು ತಿಳಿಯುತ್ತದೆ. ತಕ್ಷಣ ಆಭರಣವನ್ನು ಕೃಷ್ಣನಿಗೆ ಒಪ್ಪಿಸಿ ಕ್ಷಮೆಯನ್ನು ಕೇಳಿ, ತನ್ನ ಮಗಳಾದ ಜಾಂಬವತಿಯನ್ನು ವಿವಾಹವಾಗುವಂತೆ ಬೇಡಿಕೊಳ್ಳುತ್ತಾನೆ. ಹೀಗೆ ಕೃಷ್ಣ ಜಾಂಬವತಿಯನ್ನು ವಿವಾಹವಾದನು. ಇತ್ತ ನಿಜ ವಿಷಯ ತಿಳಿದ ಸತ್ರಾಜಿತನು ಕ್ಷಮೆ ಯಾಚಿಸಿ ತನ್ನ ಮಗಳಾದ ಸತ್ಯಭಾಮೆಯನ್ನು ವಿವಾಹವಾಗುವಂತೆ ಕೇಳಿಕೊಳ್ಳುತ್ತಾನೆ. ಅಂತೆಯೇ ಕೃಷ್ಣ ಸತ್ಯಭಾಮೆಯನ್ನು ಮದುವೆಯಾಗುತ್ತಾನೆ. 4. ಕಾಳಿಂದಿ:- ಸೂರ್ಯದೇವನ ಮಗಳಾದ ಕಾಳಿಂದಿಯು ಶ್ರೀಕೃಷ್ಣನ ನಾಲ್ಕನೇ ಪತ್ನಿ ಯಾಗಿದ್ದಳು. ತಾನು ಮದುವೆಯಾಗುವುದಾದರೆ ಅದು ಶ್ರೀಕೃಷ್ಣನನ್ನು ಮಾತ್ರ ವೆಂಬುದೂ ಆಕೆಯ ಸಂಕಲ್ಪ ಇತ್ತು. ಆದ್ದರಿಂದ ಆಕೆ ಶ್ರೀಕೃಷ್ಣನನ್ನು ವಿವಾಹವಾಗಲು ಕಠಿಣ ತಪಸ್ಸನ್ನು ಕೈಗೊಳ್ಳುತ್ತಾಳೆ. ಈಕೆಯ ಕಠಿಣ ತಪಸ್ಸಿನಿಂದ ಶ್ರೀಕೃಷ್ಣನನ್ನು ಮೆಚ್ಚಿಸಿ ಆತನನ್ನೇ ವಿವಾಹವಾಗುತ್ತಾಳೆ. ಕಾಳಿಂದಿಯು ಖಾಂಡವ ವನದಲ್ಲಿ ವಾಸವಾಗಿದ್ದಳು. 5. ಕೃಷ್ಣನ 5 ನೇ ಪತ್ನಿಯೇ ಈ ನಗ್ನಜಿತ್. ಈಕೆಯನ್ನು ಸತ್ಯ ಎಂದು ಕೂಡ ಕರೆಯುತ್ತಿದ್ದರು. ನಗ್ನಜಿತ್ ಕೋಸಲ ನಗರದ ರಾಜ, ನಗ್ನಜಿತನ ಮಗಳಾಗಿದ್ದಳು. ರಾಜ ನಗ್ನಜಿತನು ತನ್ನ ಪುತ್ರಿಯ ವಿವಾಹಕ್ಕಾಗಿ ಕಠಿಣ ಸ್ವಯಂವರನ್ನು ಆಯೋಜಿಸಿದನು. ಆತನಿಗೆ ಕೃಷ್ಣನನ್ನು ಹೊರತುಪಡಿಸಿ ಬೇರಾರಿಂದಲೂ ಸ್ವಯಂವರವನ್ನು ಗೆಲ್ಲಲು ಸಾಧ್ಯವಿಲ್ಲ ವೆಂಬುದೂ ತಿಳಿದಿತ್ತು. ನಗ್ನಜಿತನು ಯಾರು? ಭಯಂಕರವಾದ ಎತ್ತುಗಳೊಂದಿಗೆ ಹೋರಾಡಿ ಜಯಶಾಲಿಯಾಗುತ್ತಾರೋ ಅವರು ಮಾತ್ರ ತನ್ನ ಮಗಳನ್ನು ವಿವಾಹವಾಗಲು ಸಾಧ್ಯವೆಂದು ಸ್ವಯಂವರವನ್ನು ಏರ್ಪಡಿಸಿದ್ದನು. ಶ್ರೀಕೃಷ್ಣನು ಸ್ವಯಂವರದಲ್ಲಿ ರಾಜ ನಗ್ನಜಿತನ ಷರತ್ತನ್ನು ಪೂರೈಸಿದನು ಹಾಗೂ ಆತನ ಮಗಳೂ ಸತ್ಯಳನ್ನು ಅಂದರೆ ನಗ್ನಜಿತ್‌ಳನ್ನು ವಿವಾಹವಾದನು. 6. ಉಜ್ಜೈಯನಿಯ ಪ್ರಖ್ಯಾತ ರಾಜರಾದ ವಿಂದ ಮತ್ತು ಅನುವಿಂದರ ಮುದ್ದಿನ ಸಹೋದರಿ ಹಾಗೂ ಏಕೈಕ ಸಹೋದರಿ ಮಿತ್ರವಿಂದೆ. ಈ ಇಬ್ಬರೂ ಕೂಡ ದುರ್ಯೋಧನನ ಅನುಯಾಯಿಗಳಾಗಿದ್ದರು. ಮಿತ್ರವಿಂದೆಗೆ ಶ್ರೀಕೃಷ್ಣನನ್ನು ವಿವಾಹವಾಗಬೇಕೆಂಬ ಆಸೆಯಿತ್ತು. ಆದರೆ ಆಕೆಯ ಸಹೋದರರಾದ ಮಿತ್ರವಿಂದ ಮತ್ತು ಅನುವಿಂದರು ಇದಕ್ಕೆ ಅವಕಾಶ ನೀಡುವುದಿಲ್ಲ. ಆಗ ಶ್ರೀಕೃಷ್ಣನು ಸ್ವಯಂವರದಲ್ಲಿ ಮಿತ್ರಾವಿಂದೆಯನ್ನು ಒಲಿಸಿ ವಿವಾಹವಾಗುತ್ತಾನೆ. 7. ಭದ್ರಳು ಭಗವಾನ್ ಕೃಷ್ಣನ 7 ನೇ ಪತ್ನಿ. ಈಕೆ ರಾಜ ದ್ರಿಷ್ಟಿ ಕೇತು ಮತ್ತು ಶುತ ಕೀರ್ತಿ ದಂಪತಿಗಳ ಮಗಳಾಗಿದ್ದಳು. ಆಕೆಯ 5 ಜನ ಸಹೋದರರು ಸೇರಿ ಭದ್ರಳನ್ನು ಕೃಷ್ಣನೊಂದಿಗೆ ವಿವಾಹ ಮಾಡಿಸಿದರು. 8. ಶ್ರೀಕೃಷ್ಣನ ಎಂಟನೇ ಹಾಗೂ ಕೊನೆಯ ಪತ್ನಿ ಲಕ್ಷ್ಮಣೆ. ಆಕೆ ಅದ್ಭುತ ಗುಣಗಳನ್ನು ಹೊಂದಿದ್ದಳು. ಈಕೆ ಮದ್ರಾರಾಜ್ಯದ ರಾಜನ ಮಗಳಾಗಿದ್ದಳು. ಕೃಷ್ಣನು ಈಕೆಯನ್ನು ಎಲ್ಲಾ ದೈವಿಕ ಸಂಸ್ಕಾರಗಳೊಂದಿಗೆ ವಿವಾಹವಾಗಿದ್ದ. ಶ್ರೀಕೃಷ್ಣನು ನರಕಾಸುರನನ್ನು ಕೊಂದು ಆತನ ಬಂಧನದಿಂದ 16,000 ಮಹಿಳೆಯರನ್ನು ಬಿಡುಗಡೆಗೊಳಿಸಿ ಅವರನ್ನೂ ತಾನೇ ವಿವಾಹವಾಗುತ್ತಾನೆ.



ನೀತಿ ಕಥೆ

ಪರೋಪಕಾರಕ್ಕಾಗಿ ಸದಾ ಮಿಡಿಯೋಣ

– ಎ, ಆರ್. ರಘುರಾಮ
9916138436

ವೀರಸೇನ ಎಂಬ ರಾಜ ಮಾಳವ ದೇಶವನ್ನು ಆಳುತ್ತಿದ್ದ. ಒಂದು ದಿನ ಬಂಧೀಖಾನೆಯಲ್ಲಿರುವ ಕೈದಿಗಳ ಅಪರಾಧಗಳ ವಿಚಾರಣೆ ಸಂದರ್ಭ. ಒಬ್ಬ ಕೈದಿ ಮಾಡಿದ ಅಪರಾಧ ಕೃತ್ಯಕ್ಕೆ ಮರಣ ದಂಡನೆ ಶಿಕ್ಷೆ ಪೋಷಣೆ ಮಾಡಿದ. ರಾಜ ಅಲ್ಲಿಂದ ತೆರಳುತ್ತಿದ್ದಂತೆ ಕೈದಿ ಸಾಕಷ್ಟು ಗೋಳಾಡಿದ. ನಾನು ನಿರಪರಾಧಿಯಾಗಿದ್ದರೂ ಸರಿಯಾಗಿ ಸಾಕ್ಷಿ ವಿಚಾರಣೆ ಮಾಡದೇ ನನಗೆ ಶಿಕ್ಷೆ ವಿಧಿಸಿದ್ದಾರೆಂದು ರೋದಿಸಿದ. ಇದನ್ನು ಮಂತ್ರಿ ಸುಮಂತ ಸೂಕ್ಷ್ಮವಾಗಿ ಗಮನಿಸಿದ. ರಾಜನು ಆಸ್ಥಾನಕ್ಕೆ ಹಿಂದಿರುಗಿದ ನಂತರ ಏಕಾಂತದಲ್ಲಿ ಕುಳಿತಿದ್ದ ಸಂದರ್ಭದಲ್ಲಿ ಮಂತ್ರಿ ಸುಮಂತ ಆಗಮಿಸಿದ. ಮರಣ ದಂಡನೆ ವಿಧಿಸಲ್ಪಟ್ಟ ಕೈದಿ ಬಗ್ಗೆ ಮಾತನಾಡಬಹುದೇ ರಾಜನ್ ಎಂದು ಭಿನ್ನವಿಸಿದ. ವೀರಸೇನ ಅಪ್ಪಣೆ ನೀಡಿದ. ಆ ಕೈದಿ ಯಾವುದೋ ಒಂದು ಸುಳ್ಳು ಹೇಳಲು ಹೋದ ಸಂದರ್ಭದಲ್ಲಿ ಮಹಾ ಅಪರಾಧ ನಡೆದು ಬಿಟ್ಟಿದೆ.

ಮಾಡಿದ ತಪ್ಪಿಗಾಗಿ ಆತ ಸಾಕಷ್ಟು ನೊಂದಿದ್ದಾನೆ. ಇಷ್ಟು ದಿನ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಯಾಗಿದ್ದ ಅವನಿಗೆ ಪಶ್ಚಾತ್ತಾಪವೂ ಆಗಿದೆ. ಕ್ಷಮಿಸುವುದು ನಿಮ್ಮದೊಡ್ಡ ಗುಣವಾಗಬೇಕು. ಅಂತ್ಯಕಾಲದವರೆಗೆ ಅವನಿಗೆ ಜೈಲು ಶಿಕ್ಷೆ ಬೇಕಾದರೆ ಕೂಡಿ. ಆದರೆ ಮರಣದಂಡನೆ ಬೇಡ ಪ್ರಭೂ ಎಂದು ಕೋರಿಕೆ ಇಟ್ಟ.


ಮಂತ್ರಿ ಸುಮಂತನ ಮಾತನ್ನು ಕೇಳಿ ರಾಜನಿಗೆ ಸರಿ ಎನಿಸಿತು. ಮರಣದಂಡನೆ ರದ್ದು ಮಾಡಿದ. ರಾಜನಿಗೇ ಬಿನ್ನವಿಸಿಕೊಂಡು ಖೈದಿಯನ್ನು ರಕ್ಷಿಸಿದ ಮಂತ್ರಿಯನ್ನು ಕಂಡು ಸೇನಾಧಿಪತಿಗೆ ಅಸೂಯೆ ಆರಂಭವಾಯಿತು ಮಂತ್ರಿಯ ಸಲಹೆ ತಕ್ಕದ್ದಲ್ಲ ಎಂದು ತಿಳಿಸಿದರೆ ಮಂತ್ರಿಯನ್ನು ಶಿಕ್ಷಿಸಿ, ರಾಜರು ನನ್ನನ್ನು ಪುರಸ್ಕರಿಸುತ್ತಾರೆ ಎಂದು ಲೆಕ್ಕಾಚಾರ ಹಾಕಿದ. ರಾಜನ ಬಳಿ ಬಂದ. ಮಹಾರಾಜರೇ ನೀವು ಕ್ಷಮೆ ನೀಡಿದ ಕೈದಿ ನಿಮ್ಮನ್ನೇ ಬೈಯುತ್ತಿದ್ದ. ಆದರೆ ಮಂತ್ರಿಯು ತಮಗೆ ಸುಳ್ಳು ಹೇಳಿ ಆ ಕೈದಿಯ ಮರಣದಂಡನೆ ಶಿಕ್ಷೆ ತಪ್ಪಿಸಿದ್ದಾನೆ ಎಂದು ದೂರು ಹೇಳಿದ.


ರಾಜ ಕ್ಷಣ ಕಾಲ ಆಲೋಚನೆ ಮಾಡಿದ. ಮಂತ್ರಿ ಒಂದು ಪಕ್ಷ ಸುಳ್ಳು ಹೇಳಿದ್ದರೂ ಸ್ವಾರ್ಥಕ್ಕಾಗಿ ಹೇಳಿಲ್ಲ. ಪಶ್ಚಾತ್ತಾಪ ಪಟ್ಟ ಒಬ್ಬ ಕೈದಿ ಬಗ್ಗೆ ವಕಾಲತ್ತು ವಹಿಸಿ ಆತನ ಜೀವ ರಕ್ಷಿಸಿದ್ದಾನೆ. ಬೇರೊಬ್ಬನ ಜೀವ ಉಳಿಸಲು ಸುಮಂತ ಸುಳ್ಳು ಹೇಳಿರಬಹುದು. ಆದರೆ ನೀನು ಹೇಳುತ್ತಿರುವುದು ಸತ್ಯವಾದರೂ ಅದು ಮಂತ್ರಿಯ ಮೇಲಿನ ಅಸೂಯೆ ಮಾತ್ಸರ್ಯದಿಂದ. ನಿನ್ನಂಥವ ಸೇನಾಧಿಪತಿ ಆಸ್ಥಾನದಲ್ಲಿ ಮುಂದುವರಿಯಲು ಯೋಗ್ಯನಲ್ಲ ಎಂದ. ಅವನನ್ನು ಕರ್ತವ್ಯದಿಂದ ವಜಾ ಮಾಡಿದ.

ಈ ಕತೆಯ ನೀತಿ ಏನೆಂದರೆ ನಾವು ಮಾಡುವ ಪ್ರತಿಯೊಂದು ಕೆಲಸದ ಉದ್ದೇಶ ಶುದ್ಧವಾಗಿರಬೇಕು. ಯಾವುದೋ ಪ್ರಸಂಗದಲ್ಲಿ ತಿಳಿದೋ, ತಿಳಿಯದೋ ಆಗಿರುವ ತಪ್ಪು, ಕೋಪದ ಭರದಲ್ಲಿ ನಡೆದ ಪ್ರಕರಣಕ್ಕೆ ಕ್ಷಮೆ ಕೋರಿದರೆ, ಮರುಗಿದರೆ ಅದಕ್ಕೆ ಹಿರಿಯರು, ಅಧಿಕಾರಿಗಳಿಂದ ರಿಯಾಯಿತಿ ದೊರಕಬಹುದು. ಪರೋಪಕಾರಕ್ಕೆ ಒಂದು ಜೀವ ಉಳಿಸಲು ಸುಳ್ಳು ಹೇಳಿದರೂ ಪರವಾಗಿಲ್ಲ. ಆದರೆ ದ್ವೇಷ, ಅಧಿಕಾರದ ಆಸೆ, ಮಾತ್ಸರ್ಯದ ಉದ್ದೇಶಕ್ಕಾಗಿ ಹೇಳಿದ ಸತ್ಯ ನಮಗೇ ಮುಳುವಾಗುತ್ತದೆ. ನಮ್ಮ ನಡೆ-ನುಡಿ ಯಾವತ್ತೂ ಇತರರ ಕ್ಷೇಮಕ್ಕಾಗಿ ಇದ್ದರೆ ಅದಕ್ಕೆ ವಿಶ್ವದ ಎಲ್ಲೆಡೆ ಮಾನ್ಯತೆ ದೊರಕುತ್ತದೆ.



ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.





ಬಣ್ಣವನ್ನು ತುಂಬಿರಿ.





ಮಾರ್ಗ ಅನ್ವೇಷಣೆ


ಇಲ್ಲಿರುವ ಹುಡುಗಿ ಯಾವ ಹಾದಿಯಲ್ಲಿ ಹೋಗಿ ಗಿಡಕ್ಕೆ ನೀರನ್ನು ಹಾಕುವಳು ಎಂದು ಕಂಡು ಹಿಡಿಯಿರಿ ಮಕ್ಕಳೇ ನೋಡೋಣ!



→	0	2	9	6		
3	1	2	3	4		
9	8	5	4	3	8	7
10	11	7	8	4	5	9
12	13	14	12	9	6	16
6	4	10	9	8	7	15
11	15	11	12	13	14	10
15	13	12	18	15		
15	14	15	16	→		



ಗೊಂಬೆಯನ್ನು ಗಮನಿಸಿ



ಈ ಚಿತ್ರದಲ್ಲಿರುವ ಗದೆ, ಉಂಗುರ, ಬಾವುಟ, ಸಂಜೀವಿನಿ ಇದು ಯಾರಿಗೆ ಸಂಕೇತವನ್ನು ತೋರುತ್ತಿದೆ ಕಂಡು ಹಿಡಿಯಿರಿ ನೋಡೋಣ ಮಕ್ಕಳೇ!

ಉತ್ತರಗಳು : ಶ್ರೀರಾಮ



ತಿರುಮಲೆ ತಿರುಪತಿ ದೇವಸ್ಥಾನಗಳು

ಮಕ್ಕಳೇ ಇದು ನಿಮಗಾಗಿ

ರಸ ಪ್ರಶ್ನೆಗಳು

01.ಇಂದಿಗೂ ಶ್ರೀನಿವಾಸ ಹಾಗೂ ಪದ್ಮಾವತಿ ಅಮ್ಮನವರ ಕಲ್ಯಾಣ ಮಹೋತ್ಸವವು ಯಾವಾಗ ನಡೆಯುತ್ತದೆ? .....

02.'ಮಲ' ಎಂದರೆ ಏನು? .....

03.ಕೂರ್ಮಾವತಾರವು ದಶಾವತಾರಗಳಲ್ಲಿ ಎಷ್ಟನೇ ಅವತಾರವಾಗಿದೆ?.....

04.ಸಾತೇನಹಳ್ಳಿಯಲ್ಲಿ ಎಷ್ಟು ಶಾಸನಗಳು ದೊರಕಿವೆ? .....

05.ಒಂದು ವರ್ಷಕ್ಕೆ ಎಷ್ಟು ಹುಣ್ಣಿಮೆಗಳಿವೆ? .....

06.ರಾಮಾನುಜರ ಶಿಷ್ಯರ ಹೆಸರೇನು?.....

07.ವೈಶಾಖಶುದ್ಧಿ ಪಂಚಮಿಯ ದಿನ ಯಾರ ಆರಾಧನೆ ನಡೆಯುತ್ತದೆ? .....

08.ಮಾಗಳ ಸಮೀಪ ರಂಗಾಪುರ ಎಂಬ ಸ್ಥಳದಲ್ಲಿ ತುಂಗಭದ್ರಾ ತೀರದಲ್ಲಿ ಯಾರ ದೇವಾಲಯವಿದೆ? .....

09. ಅಧಿಕಮಾಸವನ್ನು ಏನೆಂದು ಕರೆಯುವರು?.....

10. ಶ್ರೀವೈಕುಂಠನಾಥನು, ಕಳ್ಳಪಿರಾನನೂ ಇನ್ನೊಂದು ಹೆಸರಿನಲ್ಲಿ ಭಕ್ತರು ಕರೆಯುತ್ತಾರೆ? .....

11. ತಿರುಮಂಗೈ ನಾಡಿಗೆ ಸೇರಿದ ಕಲಿಯನ್ ಎಂದು ಹೆಸರನ್ನು ಹೊಂದಿದವರು ಯಾರು? .....

12.ಸ್ವಾಮಿಯ ಸೇನಾಧಿಪತಿ ಯಾರು?.....

13.ರುದ್ರನು ಏನು ಆದನು? .....

14.ಕೃಷ್ಣನಿಗೆ ಎಷ್ಟು ಮಂದಿ ಮಹಿಷಿಯರು?.....

15.ವೀರಸೇನ ಎಂಬ ರಾಜ ಯಾವ ದೇಶವನ್ನು ಆಳುತ್ತಿದ್ದನು? .....

ಸೂಚನೆಗಳು


1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳುಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸ ತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ನಿಮ್ಮ ಉತ್ತರಗಳನ್ನು ನಮಗೆ ಕಳುಹಿಸಬೇಕಾದ ಕೊನೆಯ ದಿನಾಂಕ ಇದೇ ತಿಂಗಳ 25 ರ ಒಳಗೆ ಕಳುಹಿಸಬೇಕು.
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಪ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

46 ಕ್ವಿಜ್

ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪ್ರತಿಕೆ
ತಿ.ತಿ.ದೇ. ಪ್ರೆಸ್,
2 ನೇ ಅಂತಸ್ತು
ಕೆ.ಟಿ. ರಸ್ತೆ,
ತಿರುಪತಿ : 517 507
ಆಂಧ್ರ ಪ್ರದೇಶ್

ಹೆಸರು :	ವಿಳಾಸ :
ಚಂದಾ ಸಂಖ್ಯೆ :	
ತಂದೆಯ ಹೆಸರು :	
ತಾಯಿಯ ಹೆಸರು:	ದೂರವಾಣಿ ಸಂಖ್ಯೆ :





ಈ ಚಕ್ರದಲ್ಲಿರುವ ಪ್ರಶ್ನೆಗಳಿಗೆ ಉತ್ತರವನ್ನು ಅದೇ ಬಣ್ಣದಲ್ಲಿ ರುವ ಬಾಕ್ಸ್‌ನಲ್ಲಿಯೇ ಬರೆ ಯಿರಿ.


1) ಕಿಷ್ಕಿಂಧಾ ಕಾಂಡ 2) ಸುಂದರ ಕಾಂಡ 3) ಕಿಷ್ಕಿಂಧಾ ಕಾಂಡ 4) ಸುಂದರ ಕಾಂಡ 5) ಅಶೋಕ ವನ 6) ಪಂಚವಟಿ 7) ಕಿಷ್ಕಿಂಧಾ ಕಾಂಡ 8) ಸುಂದರ ಕಾಂಡ



ಮಕ್ಕಳೇ! ಈ ಚಿತ್ರದಲ್ಲಿರುವ ಮಡಕೆಯಲ್ಲಿರುವ ಅಂಕೆಗಳನ್ನು ಕೂಡಿದರೆ ಹಾಗೂ ಕಳೆದರೆ ಸರಿಯಾದ ಉತ್ತರದೊಂದಿಗೆ ಯಾವ ಮಡಿಕೆಯ ತಪ್ಪಿಯಲ್ಲಿ ಸರಿ ಹೊಂದುತ್ತದೆ ಎಂದು ಕಂಡು ಹಿಡಿಯಿರಿ ನೋಡೋಣ !



1) iii 2) vi 3) iv 4) ii 5) i



ಮಕ್ಕಳೇ
ನಾನು ವಿಷ್ಣು
ಅವತಾರಗಳಲ್ಲಿ
ಒಬ್ಬನಾಗಿದ್ದೇನೆ
ನಾನು ಯಾರು ಎಂದು
ಹೇಳಿ ನೋಡೋಣ.

ಪುಟಾಣಿಗಳೇ ನಾನು ಮೇಲೆ ಹೇಳಿದ ಮತ್ತು ಮೇಲಿರುವ ಚಿತ್ರವನ್ನು ನೋಡಿ ನಾನು ಯಾರು ಎಂದು ಕಂಡು ಹಿಡಿಯಿರಿ ನೋಡೋಣ!


ನರಸಿಂಹಾವತಾರ




ಚಿತ್ರಕಥೆ


ಜೀವ ರಕ್ಷಕ ಸ್ತೋತ್ರ

ಮೂಲ : ಡಾ॥ ಕೆ. ರವಿಚಂದ್ರನ್
ಅನುವಾದ : ಆರ್.ಕೆ.ವಿ.
ಚಿತ್ರಗಳು : ಟಿ. ಶಿವಾಜಿ
















ವೈದ್ಯನು ಶಸ್ತ್ರಚಿಕಿತ್ಸೆ ಮಾಡುವ ಮೊದಲು ರಾಜನ ಮಂದಿರದಲ್ಲಿರುವ ಗೋಡೆಗಳ ಮೇಲಿರುವ ಶ್ಲೋಕಗಳನ್ನು ಓದಿದನು.

ವಿಷದ ಪ್ರಭಾವದಿಂದ ರಾಜನ ಶರೀರವು ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಈ ವಿಷಯವೂ ಎಲ್ಲರಿಗೂ ತಿಳಿಯುತ್ತದೆ. ಆಗ ನಾನು ಬದುಕುವುದು ಕಷ್ಟವಾಗುತ್ತದೆ. ಹಾಗಾಗಿ ವಿಷಪೂರಿತ ಚಾಕುವನ್ನು ಪಕ್ಕಕ್ಕೆ ಇರಿಸಿ ಶಸ್ತ್ರ ಚಿಕಿತ್ಸೆಯನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ.

ವೈದ್ಯನೇ! ಯಾಕೆ ಕತ್ತಿಯನ್ನು ಬದಲಾಯಿಸಿದೆ?

ರಾಜನೇ! ಏನಿಲ್ಲ... ಏನಿಲ್ಲ

ಅವಿಚಾರ್ಯ ನ ಕರ್ತವ್ಯಂ ಕರ್ತವ್ಯಂ ಕರ್ತವ್ಯಂ

ಈತನು ಯಾಕೆ ಇಷ್ಟೊಂದು ಗಾಬರಿಗೊಂಡಿದ್ದಾನೆ? ವಿಷಯವೇನೆಂದು ಕಂಡು ಹಿಡಿಯೋಣ....

ರಾಜ ವೈದ್ಯನು ಪೆಟ್ಟಿಗೆಯಿಂದ ಚಾಕುವನ್ನು ಹೊರತೆಗೆದು ಅದನ್ನು ಹಾಲಿನಲ್ಲಿ ಅದ್ದಿದ. ಸ್ವಲ್ಪ ಹೊತ್ತಿನಲ್ಲೇ ಈ ಹಾಲು ಕಪ್ಪು ಬಣ್ಣಕ್ಕೆ ತಿರುಗಿತು.

ವೈದ್ಯನೇ! ಹೇಳು ಯಾಕೆ ಇಂತಹ ಕೆಲಸ ಮಾಡಿದೆ?

ಮಹಾರಾಜ! ನನ್ನನ್ನು ಕ್ಷಮಿಸಿ ಬಿಡಿ ! ಹಣದ ಆಸೆಯಿಂದ ನನ್ನ ಬುದ್ಧಿ ತಪ್ಪು ಮಾರ್ಗವನ್ನು ಆಯ್ಕೆ ಮಾಡಿತು. ದಯವಿಟ್ಟು ನನ್ನನ್ನು ಬಂಧಿಸಬೇಡಿ ನಾನು ಮತ್ತೆಂದಿಗೂ ನಿಮ್ಮ ಕಣ್ಣಿಗೆ ಕಾಣಿಸುವುದಿಲ್ಲ.

ಅವಿಚಾರ್ಯ ನ ಕರ್ತವ್ಯಂ ಕರ್ತವ್ಯಂ ಕರ್ತವ್ಯಂ ಸುವಿಚರಿತಮ್

ನಡೆದ ಮೋಸವು ಗೊತ್ತಾಯಿತು.

ಸೈನಿಕರೇ! ದುರಾಸೆಯಿಂದ ನನ್ನನ್ನು ಕೊಲ್ಲಲ್ಲು ಬಯಸಿದ ಈ ಮಂತ್ರಿಯನ್ನು ಅಲ್ಲ... ಅಲ್ಲ.... ಈ ದೇಶದ್ರೋಹಿಯನ್ನು ಬಂಧಿಸಿ.

ಅವಿಚಾರ್ಯ ನ ಕರ್ತವ್ಯಂ ಕರ್ತವ್ಯಂ ಕರ್ತವ್ಯಂ ಸುವಿಚರಿತಮ್

ಸಾಹಿತ್ಯದ ಶಕ್ತಿ ಅನನ್ಯ. ಆಹಾ! ಮಹಾಕವಿಯ ಈ ಶ್ಲೋಕವೇ ನನ್ನ ಜೀವವನ್ನು ಉಳಿಸಿತು. ಧನ್ಯೋಸ್ಮಿ ಮಹಾಕವಿ!

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

ಸಪ್ತಗಿರಿ
(ಆಧ್ಯಾತ್ಮಿಕ ಮಾಸಪತ್ರಿಕೆ)

ಚಂದಾ ನಮೂನೆ ಪತ್ರ

1. ಹೆಸರು ಮತ್ತು ವಿಳಾಸ :
(ಬಿಡಿ ಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್‌ಕೋಡ್ ತಪ್ಪದೇನಮೂದಿಸಿ)

(ಸೆಲ್ ನಂಬರ್)

2. ಬೇಕಾಗುವ ಭಾಷೆ :
☐ ಕನ್ನಡ ☐ ತೆಲುಗು ☐ ತಮಿಳು
☐ ಹಿಂದೀ ☐ ಇಂಗ್ಲೀಷು ☐ ಸಂಸ್ಕೃತ

3. ವಾರ್ಷಿಕ ಚಂದಾ : ☐ ರೂ.240/-

4. ಆಜೀವಚಂದಾ : ☐ ರೂ.2,400/- (12 ವರ್ಷ),

5. ವಿದೇಶಿ ವಾರ್ಷಿಕ ಚಂದಾ : ☐ ರೂ.1030/-

6. ಚಂದಾ ನವೀಕರಣ :
(ಅ) ಚಂದಾ ನಂಬರು :
(ಆ) ಭಾಷೆ :

7. ಸಲ್ಲಿಸಿದ ಹಣ :
ಡಿ.ಡಿ. ಸಂಖ್ಯೆ/ ಈ.ಎಂ.ಓ/ಐ.ಪಿ.ಓ./ಅಟ್‌ಪರ್ ಚೆಕ್ಕು ಮಾತ್ರವೇ

ಸ್ಥಳ :
ದಿನಾಂಕ : ಚಂದಾದಾರರ ಸಹಿ

1. ಸಪ್ತಗಿರಿ ವಾರ್ಷಿಕ ಚಂದಾ ರೂ.240/-ಆಜೀವಚಂದಾ (12 ವರ್ಷ) ರೂ.2,400/-ಗಳು ಅನ್‌ಲೈನ್‌ಗಾಗಿ (https://ttdevasthanams.ap.gov. in), ಡಿ.ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ,ತಿ.ತಿ.ದೇ.ತಿರುಪತಿ.ಅವರ ಹೆಸರಿನಲ್ಲಿ ತೆಗೆಯಬೇಕು.
2. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿ-ಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.
3. ಎಂ.ಓ.ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ.
4. ನಮ್ಮ ವಿಳಾಸ-ಪ್ರಧಾನಸಂಪಾಕರು,ಸಪ್ತಗಿರಿ ಕಾರ್ಯಾಲಯ,ತಿ.ತಿ.ದೇ., ಪ್ರೆಸ್. ಎರಡನೇ ಅಂತಸ್ತು, ಕೆ.ಟಿ.ರೋಡ್ಡು, ತಿರುಪತಿ -517507.
5. ಸಪ್ತಗಿರಿ ಚಂದಾ ವಿವರಣೆಗಾಗಿ ಫೋನ್‌ನಂಬರ್ : 0877-2264359, 0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

ಆಧ್ಯಾತ್ಮಿಕ ಮಾಸಪತ್ರಿಕೆ ಸಪ್ತಗಿರಿ

- 'ಸಪ್ತಗಿರಿ' ತಿ.ತಿ.ದೇ.,ಆಧ್ಯಾತ್ಮಿಕ ಮಾಸಪತ್ರಿಕೆಯನ್ನು ಪ್ರಕಟಿಸಲಾಗಿದೆ.
- 'ಸಪ್ತಗಿರಿ' ಪತ್ರಿಕೆಯಲ್ಲಿ ಅನೇಕ ಅಧ್ಯಾತ್ಮಿಕ ವೈಶಿಷ್ಟ್ಯಗಳನ್ನು ಪ್ರಕಟಿಸುತ್ತಿದೆ.
- 'ಸಪ್ತಗಿರಿ' ಪತ್ರಿಕೆಯು ತೆಲುಗು,ತಮಿಳು,ಕನ್ನಡ,ಹಿಂದಿ,ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಟವಾಗಿದೆ.
- 'ಸಪ್ತಗಿರಿ' ಪತ್ರಿಕೆಯ ವಾರ್ಷಿಕ ಚಂದಾ ರೂ. 240/-
- 'ಸಪ್ತಗಿರಿ' ಪತ್ರಿಕೆಯ ಅಜೀವ ಚಂದಾ (12 ವರ್ಷಗಳು ಮಾತ್ರ) ರೂ.2400/-
- 'ಸಪ್ತಗಿರಿ' ವಿದೇಶಿ ವಾರ್ಷಿಕ ಚಂದಾ ರೂ. 1030/-
- 'ಸಪ್ತಗಿರಿ' ಪತ್ರಿಕೆಯ ಚಂದಾ ಓದುಗರು ಡಿ.ಡಿ./ಇ.ಎಂ.ಓ./ಐ.ಪಿ.ಓ./ Online (ttdevasthanams.ap.gov.in) ಮೂಲಕ ಮಾಡಬಹುದು.
- 'ಸಪ್ತಗಿರಿ' ಪತ್ರಿಕೆಯ ಚಂದಾದಾರರು ಯಾವುದೇ ರಾಷ್ಟ್ರೀಯ ಬ್ಯಾಂಕ್ ಮುಖಾಂತರ ಪ್ರಧಾನ ಸಂಪಾದಕರು,ಸಪ್ತಗಿರಿ ಮಾಸಪತ್ರಿಕೆ, ತಿ.ತಿ.ದೇ., ತಿರುಪತಿ. ನೀವು ಡಿ.ಡಿ.ಅಂಚೆ ಮೂಲಕ, ಪ್ರಧಾನ ಸಂಪಾದಕರು,ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ.,ಪ್ರೆಸ್ ಬಿಲ್ಡಿಂಗ್, ತಿರುಪತಿ - 517 507 ಎಂಬ ವಿಳಾಸಕ್ಕೆ ಕಳುಹಿಸಬಹುದು.
- ಚಂದಾದಾರರು ತಮ್ಮ ವಿಳಾಸ, ಪಿನ್‌ಕೋಡ್, ಸೆಲ್‌ಫೋನ್ ಸಂಖ್ಯೆ ಮತ್ತು ನಿಮಗೆ ಬೇಕಾದ ಪತ್ರಿಕೆಯ ಭಾಷೆಯನ್ನು ಸ್ಪಷ್ಟವಾಗಿ ಬರೆಯಬೇಕು.
- 'ಸಪ್ತಗಿರಿ' ಪತ್ರಿಕೆಯು ಸರಿಯಾದ ಸಮಯಕ್ಕೆ ತಲುಪದಿದ್ದರೆ ಅಥವಾ ವಿಳಾಸ ಬದಲಾದರೆ ಈ, ಇ-ಮೇಲ್ (Chiefeditortpt@gmail.com) ಅನ್ನು ಸಂಪ್ರದಿಸ ಬೇಕು.
- ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 0877-2264359, 0877-2264360
- ಹೆಚ್ಚಿನ ವಿವರಗಳಿಗೆ ಪ್ರಧಾನ ಸಂಪಾದಕರು, ಸಪ್ತಗಿರಿ ಕಾರ್ಯಾಲಯ, 2ನೇ ಅಂತಸ್ತು, ತಿ.ತಿ.ದೇ., ಪ್ರೆಸ್ ಬಿಲ್ಡಿಂಗ್,ತಿರುಪತಿ - 517 507 ಈ ವಿಳಾಸವನ್ನು ಸಂಪರ್ಕಿಸುವ ಮೂಲಕ ಪಡೆಯಬಹುದು.
- ನೇರವಾಗಿ ಸಂಪರ್ಕಿಸಲು ಬಯಸುವವರು ಪ್ರಧಾನ ಸಂಪಾದಕರ ಕಾರ್ಯಾಲಯದ ಕೆಲಸದ ವೇಳೆ ಬೆಳ್ಳಿಗೆ 10.00 ಗಂಟೆಯಿಂದ ಸಂಜೆ 5.00 ಗಂಟೆಯ ವರೆಗೆ) ಯಲ್ಲಿ ಸಂಪರ್ಕಿಸಬಹುದು.

Printed by Sri Sri. R.V. Vijay Kumar, B.A., B.Ed, and Published by Dr. V. G. Chokkalingam, M.A.,Ph.D.,Dip In JMC on behalf of Tirumala Tirupati Devasthanams and Printed and Published at Tirumala Tirupati Devasthanams Press, 2nd Floor, K.T.Road, Tirupati - 517 507. Editor : Dr. V. G. Chokkalingam, M.A., Ph.D.,Dip In JMC

ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಗೌ॥ ಶ್ರೀ ನಾರಾಚಂದ್ರಬಾಬು ನಾಯ್ಡು ಅವರ ಕುಟುಂಬವು ಅವರ ಮೊಮ್ಮಗ, ಶಿಕ್ಷಣ ಮತ್ತು ಐ.ಟಿ. ಮಂತ್ರಿಗಳಾದ ಶ್ರೀ ನಾರಾಲೋಕೇಶ್ ಅವರ ಪುತ್ರನಾದ ಚಿ॥ ನಾರಾ ದೇವಾನ್ಷ್ ಹುಟ್ಟು ಹಬ್ಬವನ್ನು ಆಚರಿಸಲು 21-03-2026 ರಂದು ತಿರುಮಲೆ ಸ್ವಾಮಿಯವರ ದರ್ಶನಕ್ಕೆ ಭೇಟಿ ನೀಡಿದರು. ನಾರಾ ದೇವಾನ್ಷ್ ಜನ್ಮದಿನದಂದು ಶ್ರೀ ನಾರಾಲೋಕೇಶ್ ಅವರು ತಿರುಮಲೆಯಲ್ಲಿ ಒಂದು ದಿನದ ಅನ್ನ ಪ್ರಸಾದದ ವೆಚ್ಚವಾದ 44 ಲಕ್ಷ ರೂ. ಗಳನ್ನು ತಿರುಮಲೆ ದೇವಸ್ಥಾನಕ್ಕೆ ದಾನ ನೀಡಿದರು. ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಬಿ.ಆರ್. ನಾಯ್ಡು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎಂ. ರವಿಚಂದ್ರ, ಐ.ಎ.ಎಸ್., ರವರು, ತಿ.ತಿ.ದೇ., ಹೆಚ್ಚುವರಿ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಿ.ಹೆಚ್. ವೆಂಕಯ್ಯ ಚೌದರಿ, ಐ.ಆರ್.ಎಸ್., ರವರು ಮುಖ್ಯಮಂತ್ರಿಗಳ ಕುಟುಂಬವನ್ನು ಗೌರವದಿಂದ ಸನ್ಮಾನಿಸಿದರು. ಸ್ವಾಮಿಯವರ ದರ್ಶನಾನಂತರ ಮುಖ್ಯಮಂತ್ರಿಗಳು ಸ್ವತಃ ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ಭವನದಲ್ಲಿ ಕುಟುಂಬ ಸದಸ್ಯರೊಂದಿಗೆ ಭಕ್ತರಿಗೆ ಅನ್ನಪ್ರಸಾದವನ್ನು ವಿತರಿಸಿದರು. ನಂತರ ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ತಿರುಮಲೆಯಲ್ಲಿ ಅಧುನಿಕ ಸೌಲಭ್ಯಗಳೊಂದಿಗೆ ನಿರ್ಮಿಸಲಾದ ಆಹಾರ ವಿಶ್ಲೇಷಣಾ ಪ್ರಯೋಗಾಲಯವನ್ನು ಉದ್ಘಾಟಿಸಿದರು.













SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-04–2026 and Posting at Tirupati RMS.Regd. with the Registrar of News papers for India under RNI.No.APKAN/2021/80589. Postal Regd.No.TRP/156/2024-2026 "Licenced to Post Without Prepayment No. PMGK/RNP/WPP-04(6)/2024-2026" Posting on 1st of Every Month



ಶ್ರೀಯಾಸಾರ್ಧಮಿಹಾ ಶಸ್ವತಾಂ ರಕ್ಷಣಾರ್ಥಂ ಸ್ವಯಂ ರತ್ನಶೈಲೇ ಸಮಾವಿರ್ಭಭೂವ
ಸಮೂತ್ಸಾಹತೋಯ ಸ್ಸಮಾಶ್ಚರ್ಯ ವೀರೋ ಭಜೇ ಸತ್ಯನಾರಾಯಣಂ ತಂ ಮಹಾಂತಮ್